# ಸಮಾಜವಿಜ್ಞಾನ
# SOCIAL SCIENCE

## ಭಾಗ - 1

## ತರಗತಿ VIII

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ**

**2025**

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.
ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.
ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.
ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

# 8

# ಸಮಾಜವಿಜ್ಞಾನ

*Prepared by*
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in, e-mail : scertkerala@gmail.com
Typeset and design by : SCERT
First Edition - 2025
Printed at : KBPS, Kakkanad, Kochi
© Department of General Education, Government of Kerala

ಪ್ರೀತಿಯ ವಿದ್ಯಾರ್ಥಿಗಳೇ,

ಸಮಾಜವಿಜ್ಞಾನ ಕಲಿಕೆಯ ಮೂಲಕ ವಿಶಾಲವಾದ ಪ್ರಪಂಚದ ಕುರಿತು ಹಾಗೂ ವೈವಿಧ್ಯಪೂರ್ಣವಾದ ಸಾಮಾಜಿಕ ಜೀವನದ ಕುರಿತು ಅನೇಕ ವಿಚಾರಗಳನ್ನು ಹಿಂದಿನ ತರಗತಿಗಳಲ್ಲಿ ನಾವು ಮನದಟ್ಟು ಮಾಡಿಕೊಂಡಿದ್ದೇವೆ. ಸಮಾಜದ ಚರಿತ್ರೆ ಮತ್ತು ಬದಲಾವಣೆಗಳನ್ನು ಆಳವಾಗಿ ಅರ್ಥೈಸಿಕೊಳ್ಳಲಿರುವ ಅವಕಾಶಗಳು ಇಲ್ಲಿ ಲಭಿಸುತ್ತವೆ. ತಾಯ್ನಾಡಿನ ಗತಕಾಲದ ಕುರಿತಾದ ನವೀನ ಅರಿವುಗಳು ನಮ್ಮ ಇತಿಹಾಸ ಜ್ಞಾನದಲ್ಲಿ ಹೊಸ ಪ್ರಕಾಶವನ್ನು ಬೀರುತ್ತವೆ.

ಶತಮಾನಗಳ ಕಾಲ ಯುರೋಪಿನ ದೇಶಗಳು ಭಾರತದ ಮೇಲೆ ನಡೆಸಿದ ಆಕ್ರಮಣಗಳು ಮತ್ತು ಸ್ವದೇಶಿ ಸಂಸ್ಕೃತಿಯ ಮೇಲೆ ಉಂಟಾದ ದಬ್ಬಾಳಿಕೆಗಳನ್ನು ಇಲ್ಲಿ ನೆನಪಿಸಲಾಗುತ್ತದೆ. ಗುಲಾಮಗಿರಿಯಿಂದಲೂ ವಸಾಹತೀಕರಣದಿಂದಲೂ ಬಿಡುಗಡೆ ಹೊಂದಲು ನಮ್ಮ ಪೂರ್ವಜರಾದ ವೀರ ದೇಶಾಭಿಮಾನಿಗಳು ನಡೆಸಿದ ತ್ಯಾಗಮಯವಾದ ಸ್ವಾತಂತ್ರ್ಯ ಹೋರಾಟದ ಚರಿತ್ರೆಗಳನ್ನು ತಿಳಿಯಲಿರುವ ಅಧ್ಯಾಯಗಳನ್ನು ಈ ಪಠ್ಯಪುಸ್ತಕವು ಒಳಗೊಂಡಿದೆ.

ಭೂಮಿಯ ಚಲನಾ ವಿಶೇಷತೆಗಳಾದ ಭ್ರಮಣ - ಪರಿಕ್ರಮಣಗಳ ಕುರಿತಾದ ವಿವರಣೆಗಳು ಹಾಗೂ ಅವುಗಳು ಜನಜೀವನದ ಮೇಲೆ ಬೀರುವ ಪ್ರಭಾವಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಪರಿಮಿತವಾದ ಸಂಪನ್ಮೂಲಗಳನ್ನು ಉಪಯೋಗಿಸಿ ಮಾನವನ ಅಪರಿಮಿತವಾದ ಆವಶ್ಯಕತೆಗಳನ್ನು ಪೂರೈಸುವುದನ್ನು ಒಳಗೊಂಡಂತೆ ಮೂಲಭೂತ ಆರ್ಥಿಕ ವಿಷಯಗಳನ್ನು ಈ ಪಠ್ಯಪುಸ್ತಕದಲ್ಲಿ ಒಳಪಡಿಸಲಾಗಿದೆ.

ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಿದ ಕಾನೂನುಗಳು, ಕರ್ತವ್ಯಗಳು ಮತ್ತು ಹಕ್ಕುಗಳನ್ನು ವಿವರಿಸುವ ಮೂಲಕ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯ ಮೌಲ್ಯಗಳನ್ನು ಎತ್ತಿ ಹಿಡಿಯುವ, ಮೌಲ್ಯಪ್ರಜ್ಞೆಯಿರುವ ನಾಗರಿಕರನ್ನಾಗಿ ನಿಮ್ಮನ್ನು ಬದಲಾಯಿಸಲು ಈ ಪಠ್ಯಪುಸ್ತಕವು ಮಾರ್ಗದರ್ಶಿಯಾಗಿದೆ.

ಮಾಧ್ಯಮ ರಂಗವು ನಮ್ಮ ಸಮಾಜದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಇತ್ತೀಚೆಗಿನ ಪ್ರಮುಖ ಘಟನೆಗಳ ಹಿನ್ನಲೆಯಲ್ಲಿ ವಿವರಿಸಲಾಗಿದೆ. ಮಾಧ್ಯಮಗಳು ಮತ್ತು ಸಮಾಜದೊಳಗಿನ ಪರಸ್ಪರ ಸಂಬಂಧವನ್ನು ತಿಳಿಯಲಿರುವ ಸಾಮರ್ಥ್ಯವನ್ನು ಗಳಿಸುವ ರೀತಿಯಲ್ಲಿ ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ರಾಷ್ಟ್ರಪ್ರಜ್ಞೆಯನ್ನು ವೃದ್ಧಿಸಲು, ಸ್ವಯಂ ಅರ್ಥೈಸಲು ಮತ್ತು ಸಮಾಜವನ್ನು ತಿಳಿದುಕೊಂಡು ನೂತನ ದೃಷ್ಟಿಕೋನಗಳನ್ನು ರೂಪಿಸಲು ಸಮಾಜವಿಜ್ಞಾನ ಕಲಿಕೆಯು ಸಹಾಯಕವಾಗಿದೆ. ಪ್ರಪಂಚದ ಆಗುಹೋಗುಗಳನ್ನು ತಿಳಿದುಕೊಂಡು ಸಕ್ರಿಯ ಪ್ರಜೆಗಳಾಗಲು ಸಾಧ್ಯವಾಗುವ ರೀತಿಯಲ್ಲಿ ಉತ್ತಮ ಕಲಿಕಾನುಭವಗಳ ಆಧಾರದಲ್ಲಿ ರೂಪೀಕರಿಸಲ್ಪಟ್ಟಿರುವ ಎಂಟನೇ ತರಗತಿಯ ಸಮಾಜವಿಜ್ಞಾನ ಪಠ್ಯಪುಸ್ತಕ ಭಾಗ 1, ಚರಿತ್ರೆಯನ್ನು ಉತ್ಸಾಹದಿಂದ ಸಮೀಪಿಸಲು ಮತ್ತು ಹೊಸ ಜ್ಞಾನವನ್ನು ಪಡೆಯಲು ಸಹಾಯಕವಾಗಬಹುದೆಂದು ಖಚಿತಪಡಿಸುತ್ತೇನೆ.

ಪ್ರೀತಿಪೂರ್ವಕ,

**ಡಾ. ಜಯಪ್ರಕಾಶ್ ಆರ್. ಕೆ.**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEXT BOOK DEVELOPMENT COMMITTEE

**Advisor**

**Dr. K. N. Ganesh**
Chairman, Kerala Council for Historical Research

**Chairperson**

**Dr. V. Shaharban**
Associate Professor & Head, Department of Economics, Kannur University

**Experts**

**Dr. Aneesh V. R.**
Assistant Professor, Department of Political Science, SARBTM Govt. College Koilandy

**Bino P. Jose**
Assistant Professor, Department of History, St. Dominics College Kanjirappally

**Dr. Jayarajan K.**
Associate Professor & Head, Department of Geography, Govt. College, Chittur, Palakkad

**Members**

**Dr. Anjana V. R. Chandran**
Research Officer, SCERT, Kerala

**Dr. Akhil S.**
HSST Geography, GHSS Thazhathuvadakara, Kottayam

**Ashraf M.**
Principal (Retd), GGHSS Adoor, Pathanamthitta

**V. Kripalaj**
HST Social Science, VMHSS Vadavannoor, Palakkad

**Leena P. S.**
HST Social Science, SNHSS Uzhamalakkal, Nedumangad, Thiruvananthapuram

**Dr. Priyanka P. U.**
HST Social Science, GHSS Neyyardam, Thiruvananthapuram

**Pradeep Kumar L.**
HSST Political Science, GVHSS Pattazhi, Kollam

**P. C. Radhakrishnan**
HSST Sociology, GHSS Munnoorcode, Palakkad

**Renjith Vellalloor**
HST Social Science, GHSS Kilimanoor, Thiruvananthapuram

**Riju Kumar K. C.**
HSST History, GHSS Avitanallur, Kozhikode

**Shareena K.**
HST Social Science, GHSS Perinthalmanna, Malappuram

**Shreejith M Moothadath**
HST Social Science, CNNGHS Cherpu, Thrissur

**Dr. Usha Rani K.**
Asst. Professor, Govt. College of Teacher Education, Thiruvananthapuram

**Kannada Version**

**Language Expert**

**Veena K.**
Retd. Headmistress, GHSS Bandadka

**Subject Expert**

**Mahesha Y.**
HSST History, SSHSS Katukukke

**Participants**

**Ganesh Kumar S.**
HST (SS), SGKHS Kudlu

**Bhanu A. C.**
HST (SS), GVHSS Mulleria

**Praveena V.**
HST (SS), SNHS Perla

**Aruna K. C.**
HST (SS), SVVHSS Miyapadavu

**Raviraja**
HST (SS), GHSS Adoor

---

Academic Co-ordinator

**Dr. Anil D.**
Research Officer, SCERT, Kerala

**State Council for Education Research and Training** (SCERT)
Vidyabhavan, Poojappura, Thiruvananthapuram 695 012

# ಅನುಕ್ರಮಣಿಕೆ


| | | |
|---|---|---|
| 1. | ಆಕ್ರಮಣ ಮತ್ತು ಪ್ರತಿಭಟನೆ | 7-26 |
| 2. | ರಾಷ್ಟ್ರೀಯ ಚಳುವಳಿಯ ಅವಿರ್ಭಾವದೆಡೆಗೆ | 27-42 |
| 3. | ಭೂಮಿಯ ಚಲನೆಗಳು: ಭ್ರಮಣ ಮತ್ತು ಪರಿಕ್ರಮಣ | 43-58 |
| 4. | ಮೂಲಭೂತ ಆರ್ಥಿಕ ಸಮಸ್ಯೆಗಳು ಮತ್ತು ಆರ್ಥಿಕ ವ್ಯವಸ್ಥೆ | 59-72 |
| 5 | ಭಾರತದ ಸಂವಿಧಾನ: ಹಕ್ಕುಗಳು ಮತ್ತು ಕರ್ತವ್ಯಗಳು | 73-86 |
| 6. | ಸಂಪನ್ಮೂಲಗಳ ಬಳಕೆ ಹಾಗೂ ಸುಸ್ಥಿರತೆ | 87-102 |
| 7. | ಮಾಧ್ಯಮಗಳು ಮತ್ತು ಸಾಮಾಜಿಕ ಪ್ರತಿಫಲನಗಳು | 103-118 |


**ಈ ಪಠ್ಯಪುಸ್ತಕದಲ್ಲಿ ಕಲಿಕಾ ಸೌಕರ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ.**



**ಹೆಚ್ಚಿನ ಓದಿಗಾಗಿ - ಮೌಲ್ಯಮಾಪನಕ್ಕೆ ಒಳಪಡಿಸಬೇಕೆಂದಿಲ್ಲ**



**ಕಲಿಕಾ ಚಟುವಟಿಕೆ**



**ಮುಂದುವರಿದ ಚಟುವಟಿಕೆಗಳು**



**ನಾವು ಓದುವ**

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಕಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಸೆಕ್ಷನ್‌ನ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.



ಅಧ್ಯಾಯ 1

# ಆಕ್ರಮಣ ಮತ್ತು ಪ್ರತಿಭಟನೆ

"1601 ಎಪ್ರಿಲ್ ನಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ತನ್ನ ಮೊದಲ ಪರ್ಯಟನೆಗಾಗಿ ಹಡಗುಗಳ ಸಮೂಹವನ್ನು ಈಸ್ಟ್ ಇಂಡೀಸ್ ಗೆ ಕಳುಹಿಸಿತು. 18 ತಿಂಗಳುಗಳ ನಂತರ ಅಸೆನ್ಶನ್, ಡ್ರಾಗನ್, ಹೆಕ್ಟರ್, ಸುಸಾನ್ ಎಂಬೀ ನಾಲ್ಕು ಹಡಗುಗಳು ಸುಮಾತ್ರಾ ಮತ್ತು ಜಾವಾದಿಂದ ಕರಿಮೆಣಸು ಹಾಗೂ ಇನ್ನಿತರ ಉತ್ಪನ್ನಗಳನ್ನು ಹೇರಿಕೊಂಡು ಹಿಂದಿರುಗಿ ತಲುಪಿದುವು. ಈ ಮೊದಲ ಯಶಸ್ಸಿನ ಬಳಿಕ ಇದೇ ಹಡಗುಗಳು ಲಂಡನ್‌ನಿಂದ 1604 ಮಾರ್ಚ್‌ನಲ್ಲಿ ತಮ್ಮ ಎರಡನೇ ಪರ್ಯಟನೆಯನ್ನು ಆರಂಭಿಸಿದವು. ಹಿಂದಿರುಗುವ ಯಾತ್ರೆಯ ಸಂದರ್ಭದಲ್ಲಿ ಹೆಕ್ಟರ್, ಸುಸಾನ್ ಆರಂಭದಲ್ಲಿ ಹೊರಟವು. ಆದರೆ ಸುಸಾನ್ ಸಮುದ್ರದಲ್ಲಿ ನಾಶವಾಯಿತು. ಅದರ ಹಿಂದಿನಿಂದಲೇ ಬಂದ ಅಸೆನ್ಶನ್ ಹಾಗೂ ಡ್ರಾಗನ್ ಗಳು ಹೆಕ್ಟರನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾಗಲೇ ಸಮುದ್ರ ಪಾಲಾದ ಆ ಹಡಗಿನಲ್ಲಿದ್ದ ಹೆಚ್ಚಿನ ನಾವಿಕರು ಪ್ರಕ್ಷುಬ್ಧ ಕಡಲಿನಲ್ಲಿ ಮರಣ ಹೊಂದಿದ್ದರು. 1606 ಮೇ ತಿಂಗಳಿನಲ್ಲಿ ಕರಿಮೆಣಸು, ದಾಲ್ಚೀನಿ, ಜಾಯಿಕಾಯಿ ಇತ್ಯಾದಿಗಳನ್ನು ಹೇರಿದ ಹಡಗುಗಳು ಇಂಗ್ಲೆಂಡಿಗೆ ತಲುಪಿದುವು. ಕಂಪೆನಿಯ ಲಾಭವು ಹೂಡಿಕೆಯ ಶೇಕಡಾ 95 ರಷ್ಟಾಗಿತ್ತು".

James Fulcher,
Capitalism : A Very Short Introduction

ಭಾರತವನ್ನೂ ಒಳಗೊಂಡ ಪೌರಾತ್ಯ ದೇಶಗಳಲ್ಲಿ ವ್ಯಾಪಾರಕ್ಕಾಗಿ ಇಂಗ್ಲೆಂಡಿನಲ್ಲಿ ಸ್ಥಾಪಿತವಾದ ಸಂಸ್ಥೆಯು (ಈಸ್ಟ್ ಇಂಡೀಸ್) ಅನಂತರದ ಕಾಲದಲ್ಲಿ ಭಾರತವನ್ನು ವಶಪಡಿಸಿ ಆಳ್ವಿಕೆ ನಡೆಸಿದವು. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಮೊದಲ ವ್ಯಾಪಾರಕ್ಕಾಗಿ ನಡೆಸಿದ ಪ್ರಯತ್ನಗಳ ವಿವರಣೆಯನ್ನು ಓದಿದಿರಲ್ಲವೆ?

ಇಷ್ಟು ದುಸ್ತರವಾದ ವ್ಯಾಪಾರಕ್ಕೆ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯನ್ನು ಪ್ರೇರೇಪಿಸಿದ ಘಟಕಗಳು ಯಾವುವು ಎಂದು ನಾವು ಪರಿಶೀಲಿಸೋಣ.

ಪ್ರಾಚೀನ ಕಾಲದಿಂದಲೂ ಯುರೋಪಿಯನ್ನರು ಪ್ರಪಂಚದ ಇತರ ಭಾಗಗಳೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದರು. ಇದರಲ್ಲಿ ಏಷ್ಯಾವೂ ಒಳಗೊಂಡಿತ್ತು. ಈ ವ್ಯಾಪಾರ ಸಂಬಂಧಗಳು 15ನೇ ಶತಮಾನದ ಕೊನೆಯಲ್ಲಿ ಯುರೋಪಿನ ಪೂರ್ವಭಾಗಕ್ಕೆ ಒಂದು ಸಮುದ್ರಮಾರ್ಗವನ್ನು ಕಂಡುಹಿಡಿಯುವ ಪ್ರಯತ್ನದೆಡೆಗೆ ಕೊಂಡೊಯ್ದಿತು. ಇದಕ್ಕೆ ಕಾರಣವಾದ ಪ್ರಮುಖ ಘಟಕಗಳನ್ನು ಕೆಳಗೆ ನೀಡಲಾಗಿದೆ.

- ಹಡಗು ನಿರ್ಮಾಣದಲ್ಲಿ ಹಾಗೂ ಸಾಗರಯಾನದಲ್ಲಿ ಯುರೋಪಿಯನ್ನರು ಗಳಿಸಿದ ತಾಂತ್ರಿಕ ಪ್ರಗತಿ.
- ಭೌಗೋಳಿಕ ಜ್ಞಾನದ ಬೆಳವಣಿಗೆ.
- ದಿಕ್ಕುಗಳನ್ನು ಕಂಡುಕೊಳ್ಳಲು ದಿಕ್ಸೂಚಿ, ಭೂಪಟ ನಿರ್ಮಾಣ ಮೊದಲಾದವುಗಳಲ್ಲಿ ಉಂಟಾದ ಪ್ರಗತಿ.
- ಹೊಸ ಪ್ರದೇಶಗಳ ಹಾಗೂ ಅಲ್ಲಿನ ಸಂಪನ್ಮೂಲಗಳ ಕುರಿತಾದ ಸಂಚಾರಿಗಳ ಪ್ರವಾಸ ಕಥನಗಳು ಆ ಮೂಲಕ ಹಂಚಿಕೊಂಡ ತಿಳುವಳಿಕೆಗಳು.
- ಯುರೋಪಿನಲ್ಲಿ ಕರಿಮೆಣಸನ್ನೂ ಒಳಗೊಂಡ ಏಷ್ಯಾದ ಇತರ ಉತ್ಪನ್ನಗಳಿಗಿದ್ದ ಬೇಡಿಕೆ.
- ತುರುಕರು ಕೋನ್‌ಸ್ಟಾಂಟಿನೋಪಲನ್ನು ವಶಪಡಿಸಿಕೊಂಡದ್ದು.

**ಕೋನ್‌ಸ್ಟಾಂಟಿನೋಪಲ್**

*ಕೋನ್ ಸ್ಟಾಂಟಿನೋಪಲ್ ಯುರೋಪ್ ಹಾಗೂ ಏಷ್ಯಾ ಖಂಡದ ನಡುವಿನ ಒಂದು ಪ್ರಧಾನ ಕೇಂದ್ರವಾಗಿತ್ತು. ಈ ದಾರಿಯಾಗಿ ಯುರೋಪ್ ಹಾಗೂ ಏಷ್ಯಾವು ತಮ್ಮೊಳಗೆ ನೆಲಮಾರ್ಗದ ವ್ಯಾಪಾರ ಸಂಬಂಧವನ್ನು ಹೊಂದಿದ್ದವು. 1453 ರಲ್ಲಿ ತುರುಕರು ಈ ಪ್ರದೇಶವನ್ನು ವಶಪಡಿಸಿಕೊಂಡರು. ಈ ದಾರಿಯಾಗಿ ಯುರೋಪಿಯನ್ನರು ನಡೆಸುತ್ತಿದ್ದ ವ್ಯಾಪಾರಕ್ಕೆ ತಡೆಯನ್ನೊಡ್ಡಿದರು. ಅನಂತರ ಒಂದು ಹೊಸ ಮಾರ್ಗವನ್ನು ಕಂಡುಹಿಡಿಯಲು ಯುರೋಪಿಯನ್ನರು ನಿರ್ಬಂಧಿತರಾದರು.*

ಪೋರ್ಚುಗೀಸರು ಸಮುದ್ರ ಮಾರ್ಗದ ಮೂಲಕ ಭಾರತವನ್ನು ತಲುಪಿದ ಮೊದಲ ಯುರೋಪಿಯನ್ನರಾಗಿದ್ದಾರೆ. ವಾಸ್ಕೋ ಡ ಗಾಮನು ಸಮುದ್ರ ಮಾರ್ಗದ ಮೂಲಕ ಭಾರತವನ್ನು ತಲುಪಿದ ಮೊದಲ ಪೋರ್ಚುಗೀಸ್ ನಾವಿಕನಾಗಿದ್ದಾನೆ.




*ಚಿತ್ರ 1.1 • ಭಾರತಕ್ಕೆ ವಾಸ್ಕೋ ಡ ಗಾಮನ ಯಾತ್ರೆ*

*ಭೂಪಟವನ್ನು ವೀಕ್ಷಿಸಿ ಕೆಳಗೆ ಹೇಳಿರುವವುಗಳನ್ನು ಕಂಡುಹಿಡಿಯಿರಿ.*

- *ವಾಸ್ಕೋ ಡ ಗಾಮನು ಹಡಗು ಯಾತ್ರೆಯನ್ನು ಆರಂಭಿಸಿದ ಸ್ಥಳ*
- *ವಾಸ್ಕೋ ಡ ಗಾಮನು ತಲುಪಿದ ಸ್ಥಳ*
- *ವಾಸ್ಕೋ ಡ ಗಾಮನು ಸಂಚರಿಸಿದ ಸಾಗರಗಳು ಮತ್ತು ಭೂಖಂಡಗಳು*

## ಪೋರ್ಚುಗೀಸರ ಭಾರತಕ್ಕಿರುವ ಸಾಗರಯಾನ

ವಾಸ್ಕೋ ಡ ಗಾಮನು 1498ರಲ್ಲಿ ಕೋಝಿಕ್ಕೋಡ್‌ಗೆ ಸಮೀಪವಿರುವ ಕಾಪ್ಪಾಡ್ ಎಂಬ ಪ್ರದೇಶವನ್ನು ತಲುಪಿದನು. ಆತನ ಆಗಮನವು ಭಾರತದಲ್ಲಿ ಯುರೋಪಿಯನ್ನರ ಆಧಿಪತ್ಯಕ್ಕೆ ದಾರಿ ಮಾಡಿಕೊಟ್ಟಿತು. ಆ ಕಾಲದಲ್ಲಿ ಕೋಝಿಕ್ಕೋಡನ್ನು ಸಾಮೂದಿರಿ ರಾಜವಂಶದವರು ಆಳುತ್ತಿದ್ದರು. ಕೋಝಿಕ್ಕೋಡಿನೊಂದಿಗಿರುವ ವಿದೇಶಿ ವ್ಯಾಪಾರವನ್ನು ಅರಬರು ನಿಯಂತ್ರಿಸುತ್ತಿದ್ದರು. ಅವರನ್ನು ಹೊರದಬ್ಬಿ ಪೋರ್ಚುಗೀಸರಿಗೆ ವ್ಯಾಪಾರದ ಅನುಮತಿ ನೀಡಬೇಕೆಂಬ ಗಾಮನ ಬೇಡಿಕೆಯನ್ನು ಸಾಮೂದಿರಿಯು ಅಂಗೀಕರಿಸಲಿಲ್ಲ. ಅನಂತರ ಗಾಮನು ಕಣ್ಣೂರಿನ ಕೋಲತ್ತಿರಿ ರಾಜನಿಂದ ವ್ಯಾಪಾರವನ್ನು ಮಾಡಲು ಅನುಮತಿಯನ್ನು ಪಡೆದನು. ಕರಿಮೆಣಸನ್ನೂ ಒಳಗೊಂಡ ಇತರ ಉತ್ಪನ್ನಗಳನ್ನು ಸಂಗ್ರಹಿಸಿದ ಅವನು ಪೋರ್ಚುಗಲ್‌ಗೆ ಮರಳಿದನು. ಗಾಮನು ತನ್ನ ಪ್ರಯಾಣದ ವೆಚ್ಚದ ಅರುವತ್ತು ಪಟ್ಟು ಹೆಚ್ಚು ಮೌಲ್ಯದ ಸರಕುಗಳೊಂದಿಗೆ ಭಾರತದಿಂದ ಹಿಂದಿರುಗಿದನು.

ಗಾಮನ ಪ್ರಯಾಣದಿಂದ ಗಳಿಸಿದ ಲಾಭವು ಪೋರ್ಚುಗೀಸರನ್ನು ಪುನಃ ಭಾರತಕ್ಕೆ ವ್ಯಾಪಾರಕ್ಕಾಗಿ ಯಾನವನ್ನು ಮಾಡಲು ಪ್ರೇರೇಪಿಸಿತು. ಸಾಮೂದಿರಿಯು ಪೋರ್ಚುಗೀಸರಿಗೆ ವ್ಯಾಪಾರದ ಏಕಸ್ವಾಮ್ಯವನ್ನು ನೀಡಲಿಲ್ಲ. ಇದರ ಪರಿಣಾಮವಾಗಿ ಸಾಮೂದಿರಿ ಹಾಗೂ ಪೋರ್ಚುಗೀಸರ ನಡುವೆ ಸಂಘರ್ಷಗಳು ಆರಂಭವಾದವು. ಸಾಮೂದಿರಿಯ ನಾವಿಕ ಸೇನೆಯ ಮುಖ್ಯಸ್ಥನಾಗಿದ್ದ ಕುಂಞಾಲಿ ಮರಕ್ಕಾರರಿಂದ ಪೋರ್ಚುಗೀಸರಿಗೆ ಪ್ರಬಲವಾದ ವಿರೋಧವನ್ನು ಎದುರಿಸಬೇಕಾಗಿ ಬಂತು. ಕುಂಞಾಲಿ ಮರಕ್ಕಾರರ ಕಾಲಾನಂತರ ಪೋರ್ಚುಗೀಸರಿಗೆ ಭಾರತದಲ್ಲಿ ಯಾವುದೇ ಪ್ರಬಲ ಬೆದರಿಕೆಯನ್ನು ಎದುರಿಸಬೇಕಾಗಿ ಬರಲಿಲ್ಲ.

### *ಗಾಮನ ಹಡಗುಗಳು*

*ಗಾಮ ಮತ್ತು ಅವನ ತಂಡವು ಸಾವೊ ಗಬ್ರಿಯಲ್, ಸಾವೊ ರಾಫೆಲ್, ಬೆರಿಯೊ ಎಂಬ ಮೂರು ಹಡಗುಗಳಲ್ಲಿ ಭಾರತವನ್ನು ತಲುಪಿತು*

### *ಕುಂಞಾಲಿ ಮರಕ್ಕಾರ್*

*ಪೋರ್ಚುಗೀಸರ ಆಕ್ರಮಣಗಳನ್ನು ವಿರೋಧಿಸಿ ಸಾಮೂದಿರಿಯನ್ನು ಹಾಗೂ ಕೇರಳದ ಪಶ್ಚಿಮ ತೀರ ಪ್ರದೇಶಗಳನ್ನು ಸಂರಕ್ಷಿಸಿದವರು ಕುಂಞಾಲಿ ಮರಕ್ಕಾರರಾಗಿದ್ದರು. ಕುಂಞಾಲಿ ಮರಕ್ಕಾರ್ ಎಂಬುದು ಒಂದು ಪದವಿಯಾಗಿದೆ. ವಿಭಿನ್ನ ಕಾಲಗಳಲ್ಲಿ ನಾಲ್ಕು ಮಂದಿ ಈ ಪದವಿಯನ್ನು ಅಲಂಕರಿಸಿದ್ದರು. ಪೋರ್ಚುಗೀಸರನ್ನು ಸೋಲಿಸಿ ಚಾಲಿಯಂ ಕೋಟೆಯನ್ನು ವಶಪಡಿಸಿಕೊಂಡದ್ದು ಮೂರನೆಯ ಕುಂಞಾಲಿಯಾಗಿದ್ದಾನೆ. ನಾಲ್ಕನೆಯ ಕುಂಞಾಲಿಯನ್ನು ಪೋರ್ಚುಗೀಸರು ಗೋವಾದಲ್ಲಿ ವಧಿಸಿದರು. ಕುಂಞಾಲಿಗಳ ಪತನದೊಂದಿಗೆ ಸಾಮೂದಿರಿಯ ಅಧಃಪತನವೂ ಆರಂಭವಾಯಿತು.*

## ಪೋರ್ಚುಗೀಸರ ಆಗಮನವು ಭಾರತದಲ್ಲಿ ಉಂಟುಮಾಡಿದ ಪ್ರಭಾವ



*ಚಿತ್ರಗಳು 1.2 • ವಿವಿಧ ವಸ್ತುಗಳು*

ಚಿತ್ರದಲ್ಲಿ ಕೊಟ್ಟಿರುವ ವಸ್ತುಗಳ ಕನ್ನಡ ಹೆಸರುಗಳನ್ನು ಕಂಡುಹಿಡಿದು ಪಟ್ಟಿಯಲ್ಲಿ ಸೇರಿಸಿರಿ.

- ಮೇಜು



*ಚಿತ್ರ 1.3 • ಮ್ಯಾನುಯೆಲ್ ಕೋಟೆಯ ಒಂದು ಭಾಗ*

ಈ ಪದಗಳು ಭಾರತ ಮತ್ತು ಪೋರ್ಚುಗೀಸರ ನಡುವಿನ ಸಂಬಂಧದ ಫಲವಾಗಿ ಬಳಕೆಗೆ ಬಂದವು.

- ಗೇರು, ಅನಾನಸು, ಪಪ್ಪಾಯ, ಪೇರಳೆ ಮೊದಲಾದವುಗಳನ್ನು ಪರಿಚಯಿಸಲಾಯಿತು.

- ಭಾರತದಲ್ಲಿ ಯುರೋಪಿಯನ್ನರ ಮೊದಲ ಕೋಟೆಯನ್ನು (ಮ್ಯಾನುಯೆಲ್ ಕೋಟೆ) ಕೊಚ್ಚಿಯಲ್ಲಿ ನಿರ್ಮಿಸಿದರು.
- ಕೊಚ್ಚಿ, ಗೋವಾ, ದಾಮನ್, ದಿಯು ಎಂಬೀ ಪ್ರದೇಶಗಳು ಪೋರ್ಚುಗೀಸರ ಆಧಿಪತ್ಯಕ್ಕೊಳಗಾಯಿತು.
- ಮುದ್ರಣ ವಿದ್ಯೆಯನ್ನು ಪ್ರಚಾರ ಮಾಡಿದರು.
- ಚವಿಟ್ಟು ನಾಟಕ, ಮಾರ್ಗಂಕಳಿ ಮೊದಲಾದ ಕಲಾರೂಪಗಳು ಪ್ರಚಾರಗೊಂಡವು.
- ಯುರೋಪಿಯನ್ ಶೈಲಿಯಲ್ಲಿರುವ ಕಟ್ಟಡ ನಿರ್ಮಾಣವನ್ನು ಆರಂಭಿಸಿದರು.
- ಯುರೋಪಿಯನ್ ಶಸ್ತ್ರಾಸ್ತ್ರಗಳ ಪ್ರಯೋಗ ಮತ್ತು ಯುದ್ಧ ತಂತ್ರಗಳಲ್ಲಿ ತರಬೇತಿ ನೀಡಿದರು.
- ಕ್ರೈಸ್ತ ಮತ ಕಲಿಕಾ ಕೇಂದ್ರಗಳನ್ನು ಆರಂಭಿಸಿದರು.

*ಪೋರ್ಚುಗೀಸರೊಂದಿಗಿನ ಸಂಬಂಧವು ಭಾರತದ ವಿವಧ ವಲಯಗಳಲ್ಲಿ ಬೀರಿದ ಪ್ರಭಾವವನ್ನು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ರಾಜಕೀಯ ಕ್ಷೇತ್ರ | ಕೃಷಿ ಕ್ಷೇತ್ರ | ವೈಜ್ಞಾನಿಕ ಕ್ಷೇತ್ರ | ಸಾಂಸ್ಕೃತಿಕ ಕ್ಷೇತ್ರ |
|---|---|---|---|
| | | | |

## ಡಚ್ಚರು

ಪೋರ್ಚುಗೀಸರ ನಂತರ ಭಾರತಕ್ಕೆ ಬಂದ ಯುರೋಪಿಯನ್ನರು ಹಾಲೆಂಡ್ (ನೆದರ್ ಲ್ಯಾಂಡ್) ನವರಾಗಿದ್ದಾರೆ. ಅವರನ್ನು ಡಚ್ಚರು ಎಂದು ಕರೆಯುತ್ತಾರೆ. ನಾಗಪಟ್ಟಣಂ, ಭರೂಚ್, ಅಹಮದಾಬಾದ್ ಮತ್ತು ಚಿನ್ಸುರಾ ಎಂಬಿವುಗಳು ಭಾರತದಲ್ಲಿ ಡಚ್ಚರ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದುವು. ವ್ಯಾಪಾರದ ಆಧಿಪತ್ಯಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಡಚ್ಚರು ಪೋರ್ಚುಗೀಸರನ್ನು ಪರಾಜಯಗೊಳಿಸಿದರು.

### ಕೊಳಚ್ಚಲ್ ಯುದ್ಧ (Battle of Colachel)

1741 ರಲ್ಲಿ ಕನ್ಯಾಕುಮಾರಿಗೆ ಸಮೀಪವಿರುವ ಕೊಳಚ್ಚಲ್‌ನಲ್ಲಿ ತಿರುವಾಂಕೂರಿನ ಆಡಳಿತಾಧಿಕಾರಿಯಾಗಿದ್ದ ಮಾರ್ತಾಂಡವರ್ಮ ಹಾಗೂ ಡಚ್ಚರ ನಡುವೆ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಡಚ್ಚರು ಪರಾಜಯ ಹೊಂದುವುದರೊಂದಿಗೆ ಭಾರತದಲ್ಲಿ ತಮ್ಮ ಆಧಿಪತ್ಯವನ್ನು ಕಳೆದುಕೊಂಡರು. ಇದು ಯುರೋಪಿನ ಒಂದು ಶಕ್ತಿಯು ಭಾರತೀಯ ಆಡಳಿತಾಧಿಕಾರಿಯಿಂದ ಸೋಲನ್ನು ಅನುಭವಿಸಿದ ಮೊದಲ ಯುದ್ಧವಾಗಿತ್ತು.



*ಚಿತ್ರ 1.4 • ಕೊಳಚ್ಚಲ್ ಯುದ್ಧ ಸ್ಮಾರಕ*




*ಚಿತ್ರ 1.5 • ಹೋರ್ಟಸ್ ಮಲಬಾರಿಕಸ್‌ನ ಮುಖಪುಟ ಚಿತ್ರ*

## ಹೋರ್ಟಸ್ ಮಲಬಾರಿಕಸ್

'ಹೋರ್ಟಸ್ ಮಲಬಾರಿಕಸ್' ಎಂಬ ಕೃತಿಯು ಕೇರಳದೊಂದಿಗಿನ ಡಚ್ಚರ ಅತ್ಯಂತ ದೊಡ್ಡ ಕೊಡುಗೆಯಾಗಿದೆ. ಈ ಗ್ರಂಥವು ಕೇರಳದ 742 ಔಷಧೀಯ ಸಸ್ಯಗಳ ಕುರಿತಾಗಿ ವಿವರಣೆಗಳನ್ನು ಹೊಂದಿದೆ. ಡಚ್ಚ್ ಗವರ್ನರ್ ಆಗಿದ್ದ ಹೆಂಡ್ರಿಕ್ ವ್ಯಾನ್ ರೀಡ್ (Hendrik-van Rheed) ಈ ಕೃತಿಯ ರಚನೆಗೆ ನೇತೃತ್ವವನ್ನು ನೀಡಿದನು. ಇದನ್ನು ರಚಿಸಲು ಮಲಯಾಳಿ ವೈದ್ಯನಾದ ಇಟ್ಟಿ ಅಚ್ಚುತನ್ ಎಂಬವನು ಅವರಿಗೆ ಸಹಾಯ ಮಾಡಿದನು. ಅಪ್ಪು ಭಟ್, ರಂಗಭಟ್, ವಿನಾಯಕ ಭಟ್ ಎಂಬಿವರೂ ರಚನೆಗೆ ಸಹಕರಿಸಿದ್ದರು. ಇದು ಮಲಯಾಳದ ಕೆಲವು ಪದಗಳನ್ನು ಹೊಂದಿದ್ದ ಮೊದಲ ಮುದ್ರಿತ ಪುಸ್ತಕವಾಗಿದೆ. ಡಾ. ಕೆ.ಎಸ್. ಮಣಿಲಾಲ್ ಮಲಯಾಳ, ಇಂಗ್ಲಿಷ್ ಎಂಬೀ ಭಾಷೆಗಳಿಗೆ ಈ ಕೃತಿಯನ್ನು ಅನುವಾದಗೊಳಿಸಿದರು .

### *ಇಟ್ಟಿ ಅಚ್ಚುತನ್*

*ಇಟ್ಟಿ ಅಚ್ಚುತನ್ ಅವರು ಈಗಿನ ಆಲಪ್ಪುಳ ಜಿಲ್ಲೆಯ ಚೇರ್ತಲ ತಾಲೂಕಿನ ಕಡಕ್ಕರಪಳ್ಳಿ ಗ್ರಾಮದ ಒಂದು ಸಾಂಪ್ರದಾಯಿಕ ವೈದ್ಯ ಕುಟುಂಬದಲ್ಲಿ ಜನಿಸಿದ ಪ್ರಸಿದ್ಧ ನಾಟಿವೈದ್ಯರಾಗಿದ್ದರು.*



*ಚಿತ್ರ 1.6 • ಹೋರ್ಟಸ್ ಮಲಬಾರಿಕಸ್‌ನ ಒಂದು ಪುಟ*

*ಇದು ಹೋರ್ಟಸ್ ಮಲಬಾರಿಕಸ್ ನಲ್ಲಿ ಇರುವ ಒಂದು ಚಿತ್ರವಾಗಿದೆ. ಇದು ಯಾವ ಸಸ್ಯ ಎಂದು ಕಂಡುಹಿಡಿಯಿರಿ.*

•

## ಫ್ರೆಂಚರು

ಡಚ್ಚರ ನಂತರ ಬ್ರಿಟಿಷರು (ಇಂಗ್ಲಿಷರು) ಹಾಗೂ ಅನಂತರ ಫ್ರೆಂಚರು ವ್ಯಾಪಾರಕ್ಕಾಗಿ ಭಾರತಕ್ಕೆ ಆಗಮಿಸಿದರು. ಕರ್ನಾಟಿಕ್ ಯುದ್ಧಗಳು ದಕ್ಷಿಣ ಭಾರತದಲ್ಲಿ ಅಧಿಕಾರಕ್ಕೆ ಬೇಕಾಗಿ ಬ್ರಿಟಿಷರು ಮತ್ತು ಫ್ರೆಂಚರ ನಡುವೆ ನಡೆದ ಯುದ್ಧಗಳಾಗಿವೆ. ಈ ಯುದ್ಧಗಳಲ್ಲಿ ಬ್ರಿಟಿಷರು ಜಯಗಳಿಸಿದರು. ಅದರ ಪರಿಣಾಮವಾಗಿ ಫ್ರೆಂಚರ ಅಧಿಕಾರವು ಪೋಂಡಿಚೇರಿ (ಪುದುಚ್ಚೇರಿ), ಯಾನಂ, ಕಾರೈಕ್ಕಲ್, ಮಾಹಿ ಎಂಬೀ ಪ್ರದೇಶಗಳಿಗೆ ಮಾತ್ರ ಸೀಮಿತವಾಯಿತು.

*ಕೊಟ್ಟಿರುವ ಭೂಪಟವನ್ನು ನಿರೀಕ್ಷಿಸಿ ಪೋರ್ಚುಗೀಸರು, ಡಚ್ಚರು ಮತ್ತು ಫ್ರೆಂಚರ ನಿಯಂತ್ರಣದಲ್ಲಿದ್ದ ಪ್ರಮುಖ ಕೇಂದ್ರಗಳನ್ನು ಕಂಡುಹಿಡಿಯಿರಿ.*



*ಚಿತ್ರ 1.7*

| ಪೋರ್ಚುಗೀಸರ ನಿಯಂತ್ರಣದಲ್ಲಿದ್ದ ಪ್ರದೇಶಗಳು | ಡಚ್ಚರ ನಿಯಂತ್ರಣದಲ್ಲಿದ್ದ ಪ್ರದೇಶಗಳು | ಫ್ರೆಂಚರ ನಿಯಂತ್ರಣದಲ್ಲಿದ್ದ ಪ್ರದೇಶಗಳು |
|---|---|---|
| • ಕೊಚ್ಚಿ | • ನಾಗಪಟ್ಟಣಂ | • ಪೋಂಡಿಚೇರಿ |
| • | • | • |
| • | • | • |
| • | • | • |

### ಕರ್ನಾಟಿಕ್ ಯುದ್ಧಗಳು

*ಭಾರತದಲ್ಲಿ ಫ್ರೆಂಚರು ಮತ್ತು ಬ್ರಿಟಿಷರೊಳಗೆ ನಡೆದ ಯುದ್ಧಗಳನ್ನು ಕರ್ನಾಟಿಕ್ ಯುದ್ಧಗಳೆಂದು ಕರೆಯುತ್ತಾರೆ. ಕರ್ನಾಟಿಕ್ ಪ್ರದೇಶ ಎಂಬುದು ಇಂದಿನ ತಮಿಳುನಾಡಿನ ಬಹುತೇಕ ಪ್ರದೇಶಗಳು ಮತ್ತು ಆಂದ್ರಪ್ರದೇಶದ ದಕ್ಷಿಣ ತೀರ ಪ್ರದೇಶಗಳನ್ನೊಳಗೊಂಡ ಪ್ರದೇಶವಾಗಿದೆ. ಮೂರು ಕರ್ನಾಟಿಕ್ ಯುದ್ಧಗಳು ನಡೆದಿವೆ.*

## ವ್ಯಾಪಾರದಿಂದ ಅಧಿಕಾರಕ್ಕೆ

ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಕುರಿತಾಗಿ ಈ ಪಾಠಭಾಗದ ಆರಂಭದಲ್ಲಿ ಚರ್ಚಿಸಿದ್ದೇವಲ್ಲವೆ? ಏಷ್ಯಾದೊಂದಿಗಿನ ವ್ಯಾಪಾರಕ್ಕಾಗಿ 1600 ರಲ್ಲಿ ಬ್ರಿಟಿಷರು ಇಂಗ್ಲಿಷ್

*1639 ರಲ್ಲಿ ಮದ್ರಾಸ್ ಬಂದರಿನ ಸುಂಕದ ಆದಾಯದ ಅರ್ಧದಷ್ಟು ನೀಡಬೇಕೆಂಬ ಒಪ್ಪಂದದ ಮೂಲಕ ಸ್ಥಳೀಯ ರಾಜನಾದ ದಮರ್ಲ ವೆಂಕಟಾದ್ರಿ ನಾಯಕ ದೀರ್ಘಕಾಲದ ವರೆಗೆ ಮದ್ರಾಸ್ ಬಂದರನ್ನು ಬ್ರಿಟಿಷರಿಗೆ ನೀಡಿದನು.*

- *1662 ರಲ್ಲಿ ಪೋರ್ಚುಗೀಸ್ ರಾಜಕುಮಾರಿಯಾಗಿದ್ದ ಕ್ಯಾಥರಿನ್‌ಳನ್ನು ವಿವಾಹವಾದಾಗ ಬ್ರಿಟಿಷ್ ರಾಜನಾದ ಎರಡನೇ ಚಾರ್ಲ್ಸ್‌ಗೆ ಉಡುಗೊರೆಯಾಗಿ ದೊರೆತ ಪ್ರದೇಶವಾಗಿದೆ ಬೋಂಬೆ. ನಂತರ ಆ ಪ್ರದೇಶವನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಗೆ ಹಸ್ತಾಂತರಿಸಲಾಯಿತು.*
- *1698 ರಲ್ಲಿ ಸುತನತಿ, ಕಾಲಿಕಟ್ಟ, ಗೋವಿಂದಪುರ ಎಂಬೀ ಮೂರು ಗ್ರಾಮಗಳಿಗೆ ಸುತ್ತ ಬ್ರಿಟಿಷರು ನಿರ್ಮಿಸಿದ ಕೋಟೆಯೇ ವಿಲ್ಯಂ ಕೋಟೆ* (Fort William). *ಕ್ರಮೇಣ ಈ ಪ್ರದೇಶ ಪಟ್ಟಣವಾಗಿ, ಕಲ್ಕತ್ತಾ ಎಂಬ ಹೆಸರಿನಿಂದ ತಿಳಿಯಲ್ಪಟ್ಟಿತು.*

ಈಸ್ಟ್ ಇಂಡಿಯಾ ಕಂಪೆನಿಯನ್ನು ಸ್ಥಾಪಿಸಿದರು. ಕಂಪೆನಿಯ ಪ್ರತಿನಿಧಿ ಕ್ಯಾಪ್ಟನ್ ವಿಲ್ಯಂ ಹಾಕಿನ್ಸ್ ಅಂದಿನ ಮೊಗಲ್ ಚಕ್ರವರ್ತಿ ಜಹಾಂಗೀರನಿಂದ ಅನುಮತಿ ಪಡೆದು ಗುಜರಾತ್‌ನ ಸೂರತ್‌ನಲ್ಲಿ ಒಂದು ವ್ಯಾಪಾರ ಕೇಂದ್ರ(ಕಾರ್ಖಾನೆ) ವನ್ನು ಸ್ಥಾಪಿಸಿದನು. ಆನಂತರ ಈ ಕಂಪೆನಿಯು ಭಾರತದ ವಿವಿಧ ಭಾಗಗಳಲ್ಲಿ ಕಾರ್ಖಾನೆಗಳನ್ನು ಆರಂಭಿಸಿತು. ತದನಂತರ ಈಸ್ಟ್ ಇಂಡಿಯಾ ಕಂಪೆನಿಯು ಮದ್ರಾಸ್ (ಚೆನ್ನೈ), ಬೋಂಬೆ (ಮುಂಬೈ) ಮತ್ತು ಕಲ್ಕತ್ತಾ (ಕೋಲ್ಕತ್ತಾ) ಎಂಬೀ ಪ್ರದೇಶಗಳಲ್ಲಿ ಆಧಿಪತ್ಯವನ್ನು ಸ್ಥಾಪಿಸಿಕೊಂಡು ಅಲ್ಲಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಲು ಆರಂಭಿಸಿತು.

1757 ರ ಪ್ಲಾಸಿ ಯುದ್ಧದ ಮೂಲಕ ಬ್ರಿಟಿಷರು ಭಾರತದಲ್ಲಿ ರಾಜಕೀಯ ಆಧಿಪತ್ಯವನ್ನು ಸ್ಥಾಪಿಸಿದರು. ರಾಬರ್ಟ್ ಕ್ಲೈವ್‌ನ ನೇತೃತ್ವದಲ್ಲಿದ್ದ ಈಸ್ಟ್ ಇಂಡಿಯಾ ಕಂಪೆನಿಯ ಸೈನ್ಯವು ಈ ಯುದ್ಧದಲ್ಲಿ ಬಂಗಾಳದ ನವಾಬನಾಗಿದ್ದ ಸಿರಾಜ್ ಉದ್‌ದೌಲನನ್ನು ಪರಾಜಯಗೊಳಿಸಿತು. ಬಂಗಾಳದ ಆಡಳಿತವನ್ನು ವಶಪಡಿಸಿದುದು ಬ್ರಿಟಿಷರಿಗೆ ಭಾರತದ ಇತರ ಪ್ರದೇಶಗಳನ್ನು ತಮ್ಮ ನಿಯಂತ್ರಣಕ್ಕೆ ತರಲು ಸಹಾಯ ಮಾಡಿತು. ಕೃಷಿ ಸಂಪದ್ಭರಿತವಾದ ಬಂಗಾಳದ ಭೂತೆರಿಗೆಯನ್ನು ಉಪಯೋಗಿಸಿಕೊಂಡು ಬ್ರಿಟಿಷರು ತಮ್ಮ ಸೈನಿಕ ಶಕ್ತಿಯನ್ನು ಬಲಪಡಿಸಿದುದಲ್ಲದೆ ದೇಶದ ಇತರ ಭಾಗಗಳನ್ನು ವಶಪಡಿಸಲು ಅಗತ್ಯವಾದ ಹಣವನ್ನು ಸಂಗ್ರಹಿಸಿದರು. 1764 ರಲ್ಲಿ ಬಕ್ಸಾರ್‌ನಲ್ಲಿ ನಡೆದ ಯುದ್ಧದ ಬಳಿಕ ಬಿಹಾರ, ಬಂಗಾಳ, ಒರಿಸ್ಸಾ ಎಂಬೀ ಪ್ರಾಂತ್ಯಗಳ ತೆರಿಗೆ ಸಂಗ್ರಹಿಸಲಿರುವ ಹಕ್ಕನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ಪಡೆದುಕೊಂಡಿತು. ಅದರೊಂದಿಗೆ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತವು ಬಲಗೊಂಡಿತು. ಮೊಗಲ ರಾಜ ಎರಡನೇ ಷಾ ಆಲಂ, ಔಧ್ ನ ನವಾಬನಾಗಿದ್ದ ಶುಜಾ-ಉದ್-ದೌಲ, ಬಂಗಾಳದ ನವಾಬನಾಗಿದ್ದ ಮಿರ್ ಖಾಸಿಂ ಎಂಬಿವರ ಸಂಯುಕ್ತ ಸೈನ್ಯವನ್ನು ಬ್ರಿಟಿಷರು ಈ ಯುದ್ಧದಲ್ಲಿ ಪರಾಜಯಗೊಳಿಸಿದರು.

ಮದ್ರಾಸ್, ಬೋಂಬೆ, ಕಲ್ಕತ್ತಾ ಎಂಬೀ ಪ್ರದೇಶಗಳ ಆಧಿಪತ್ಯವನ್ನು ಪಡೆದು ಆಡಳಿತ ಕಾರ್ಯಗಳಲ್ಲಿ ಮಧ್ಯಪ್ರವೇಶಿಸಲು ಕಂಪೆನಿಗೆ ಸಹಾಯಕವಾದ ಸನ್ನಿವೇಶಗಳನ್ನು ಚರ್ಚಿಸಿರಿ.

*"ನನಗೆ ಎರಡು ಸಾವಿರ ಸೈನಿಕರನ್ನು ಕಳುಹಿಸಿಕೊಡಿ. ನಾನು ಭಾರತವನ್ನು ವಶಪಡಿಸಿಕೊಳ್ಳುವೆನು."*

*- ರಾಬರ್ಟ್ ಕ್ಲೈವ್*

ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಸೈನಿಕ ಮುಖ್ಯಸ್ಥನಾಗಿದ್ದ ರಾಬರ್ಟ್ ಕ್ಲೈವ್ ನ ಮಾತುಗಳನ್ನು ನೀವು ಓದಿದಿರಲ್ಲವೆ? ಅವನು ಈ ರೀತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ಕಾರಣಗಳೇನಾಗಿರಬಹುದು?

- ಭಾರತದ ದೇಶೀಯ ರಾಜರ ನಡುವಿನ ಅನೈಕ್ಯ.
- ಬ್ರಿಟಿಷರ ಸುಧಾರಿತ ಸೈನಿಕ ಹಾಗೂ ತಂತ್ರಜ್ಞಾನ ವ್ಯವಸ್ಥೆ.
- 

## ದೇಶೀಯ ರಾಜ್ಯಗಳು ಮತ್ತು ಕಂಪೆನಿ

ಭಾರತದ ದೇಶೀಯ ರಾಜ್ಯಗಳನ್ನು ಯುದ್ಧ ಹಾಗೂ ರಾಜತಾಂತ್ರಿಕತೆಯ ಮೂಲಕ ಬ್ರಿಟಿಷರು ವಶಪಡಿಸಿಕೊಂಡರು.

ಆಂಗ್ಲೋ - ಮೈಸೂರು ಯುದ್ಧಗಳು ದಕ್ಷಿಣ ಭಾರತದ ದೇಶೀಯ ರಾಜ್ಯವಾಗಿದ್ದ ಮೈಸೂರು ಮತ್ತು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ನಡುವೆ ನಡೆದ ಯುದ್ಧಗಳಾಗಿವೆ. ಮೈಸೂರು ಆಡಳಿತಾಧಿಕಾರಿಯಾಗಿದ್ದ ಹೈದರಾಲಿ ಮತ್ತು ಅವನ ಮಗನಾದ ಟಿಪ್ಪು ಸುಲ್ತಾನ ಮೈಸೂರಿನ ಸೈನ್ಯವನ್ನು ಮುನ್ನಡೆಸಿದರು. ನಾಲ್ಕು ಬಾರಿ ಕಂಪೆನಿ ಸೈನ್ಯ ಹಾಗೂ ಮೈಸೂರು ಸುಲ್ತಾನರು ಪರಸ್ಪರ ಹೊಡೆದಾಡಿದರು. 1782 ರಲ್ಲಿ ಹೈದರಾಲಿಯ ಮರಣಾನಂತರ ಟಿಪ್ಪು ಸುಲ್ತಾನನು ಮೈಸೂರಿನ ಸೈನ್ಯವನ್ನು ಮುನ್ನಡೆಸಿದನು. 1799 ರಲ್ಲಿ ನಾಲ್ಕನೇ ಮೈಸೂರು ಯುದ್ಧದಲ್ಲಿ ಕಂಪೆನಿ ಸೈನ್ಯವು ಟಿಪ್ಪು ಸುಲ್ತಾನನ್ನು ವಧಿಸುವುದರೊಂದಿಗೆ ಮೈಸೂರು ಬ್ರಿಟಿಷರ ವಶವಾಯಿತು.

ಆಂಗ್ಲೋ - ಮರಾಠ ಯುದ್ಧಗಳು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿ ಮತ್ತು ಮರಾಠ ಸಾಮ್ರಾಜ್ಯದ ನಡುವೆ ನಡೆದ ಯುದ್ಧಗಳಾಗಿವೆ. ಮೂರನೇ ಆಂಗ್ಲೋ - ಮರಾಠ ಯುದ್ಧದೊಂದಿಗೆ ಮರಾಠ ಪ್ರದೇಶಗಳು ಬ್ರಿಟಿಷರ ನಿಯಂತ್ರಣಕ್ಕೆ ಒಳಗಾದವು. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿ ಮತ್ತು ಸಿಖ್ಖರ ನಡುವೆ ನಡೆದ ಆಂಗ್ಲೋ - ಸಿಖ್ಖ್ ಯುದ್ಧಗಳಲ್ಲಿ ಸಿಖ್ಖರ ಪರಾಜಯದೊಂದಿಗೆ ಪಂಜಾಬ್ ಬ್ರಿಟಿಷರ ನಿಯಂತ್ರಣಕ್ಕೊಳಪಟ್ಟಿತು.



*ಚಿತ್ರ 1.8 • ಟಿಪ್ಪು ಸುಲ್ತಾನ*

> *ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಭಾರತದ ಆಧಿಪತ್ಯದ ಕುರಿತಾದ ಪ್ರಮುಖ ಘಟನೆಗಳನ್ನು ಒಳಗೊಂಡ ಫ್ಲೋಚಾರ್ಟನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.*

ವಶಪಡಿಸಿಕೊಂಡ ಪ್ರದೇಶಗಳಿಂದ ಗರಿಷ್ಠ ಸಂಪತ್ತನ್ನು ಪಡೆಯುವುದು ಬ್ರಿಟಿಷರ ಗುರಿಯಾಗಿತ್ತು. ಅದಕ್ಕಾಗಿ ಅವರು ವ್ಯಾಪಾರ, ತೆರಿಗೆ ವಸೂಲಿ, ಯುದ್ಧ ಮೊದಲಾದ ಮಾರ್ಗಗಳನ್ನು ಸ್ವೀಕರಿಸಿದರು.

### ಬ್ರಿಟಿಷರು ಜಾರಿಗೊಳಿಸಿದ ತೆರಿಗೆ ವ್ಯವಸ್ಥೆಗಳು

| ತೆರಿಗೆ | ಜಾರಿಗೊಳಿಸಿದ ಪ್ರದೇಶಗಳು | ಜಾರಿಗೊಳಿಸಿದ ವ್ಯಕ್ತಿ | ವಿಶೇಷತೆಗಳು |
|---|---|---|---|
| ಶಾಶ್ವತ ಭೂಕಂದಾಯ ವ್ಯವಸ್ಥೆ (1793) (Permanent Land Revenue Settlement) | ಬಂಗಾಳ<br>ಬಿಹಾರ<br>ಒರಿಸ್ಸಾ | ಕೋರ್ನ್‌ವಾಲಿಸ್ ಪ್ರಭು | • ಭೂಮಾಲೀಕರಾಗಿದ್ದ ಜಮೀನ್ದಾರರು ಬ್ರಿಟಿಷರಿಗಾಗಿ ಹೆಚ್ಚಿನ ದರದಲ್ಲಿ ತೆರಿಗೆಯನ್ನು ಸಂಗ್ರಹಿಸಿದರು.<br>• ಕೃಷಿ ಉತ್ಪಾದನೆಯಲ್ಲಿದ್ದ ಏರುಪೇರುಗಳನ್ನು ಪರಿಗಣಿಸದೆ ನಿಶ್ಚಿತ ಮೌಲ್ಯಗಳನ್ನು ಕೃಷಿಕರು ನಿರ್ಬಂಧವಾಗಿ ತೆರಿಗೆಯ ರೂಪದಲ್ಲಿ ನೀಡಬೇಕಾಗಿತ್ತು. |

| | | | |
|---|---|---|---|
| ರೈತ್‌ವಾರಿ ವ್ಯವಸ್ಥೆ (1820) (Ryotwari System) | ದಕ್ಷಿಣ ಭಾರತ ದಕ್ಖಣ | ಥೋಮಸ್ ಮುನ್ರೋ, ಅಲೆಕ್ಸಾಂಡರ್ ರೀಡ್ | • ಕೃಷಿಕರನ್ನು ಭೂಮಿಯ ಮಾಲೀಕರಾಗಿ ಪರಿಗಣಿಸಲಾಯಿತು.<br>• ಬ್ರಿಟಿಷರು ಕೃಷಿಕರಿಂದ ನೇರವಾಗಿ ತೆರಿಗೆ ಸಂಗ್ರಹಿಸಿದರು.<br>• ತೆರಿಗೆ ಪಾವತಿಸದ ಕೃಷಿಕರ ಭೂಮಿಯನ್ನು ಬ್ರಿಟಿಷರು ವಶಪಡಿಸಿಕೊಂಡರು. |
| ಮಹಲ್‌ವಾರಿ ವ್ಯವಸ್ಥೆ (1822) (Mahalwari System) | ಉತ್ತರ ಭಾರತ ಮಧ್ಯಭಾರತ ಪಂಜಾಬ್ | ಹೋಲ್ಟ್ ಮೆಕೆನ್ಸಿ | • ಗ್ರಾಮಗಳನ್ನು ಒಂದು ಯೂನಿಟ್ಟಾಗಿ ಪರಿಗಣಿಸಿ ತೆರಿಗೆ ಸಂಗ್ರಹಿಸಿದರು.<br>• ತೆರಿಗೆಯನ್ನು ಪಾವತಿಸದ ಗ್ರಾಮವನ್ನು ಬ್ರಿಟಿಷ್ ಭಾರತದೊಂದಿಗೆ ವಿಲೀನಗೊಳಿಸಿದರು. |

ಬ್ರಿಟಿಷರು ಜಾರಿಗೆ ತಂದ ತೆರಿಗೆ ವ್ಯವಸ್ಥೆಗಳ ಸಾಮಾನ್ಯ ವಿಶೇಷತೆಗಳನ್ನು ನಾವು ಪರಿಶೀಲಿಸೋಣ.

- ಅಧಿಕ ತೆರಿಗೆ ದರ
-
-
-

ಬ್ರಿಟಿಷರ ತೆರಿಗೆ ಪದ್ಧತಿಯ ಪರಿಣಾಮವಾಗಿ ರೈತರು ತಮ್ಮ ಕೃಷಿ ಭೂಮಿಯನ್ನು ಕಳೆದುಕೊಳ್ಳದಿರಲು ಲೇವಾದೇವಿಗಾರರಿಂದ (Money Lenders) ಸಾಲ ಪಡೆಯಲು ನಿರ್ಬಂಧಿತರಾದರು. ಇದರಿಂದ ರೈತರು ಸಾಲದ ಸುಳಿಯಲ್ಲಿ ಸಿಲುಕಿದರು. ಇವರ ಭೂಮಿಯನ್ನು ವಶಪಡಿಸಿಕೊಳ್ಳುವ ಅಧಿಕಾರ ಲೇವಾದೇವಿಗಾರರಿಗಿತ್ತು. ಬ್ರಿಟಿಷರ ಹೊಸ ಕಾನೂನು ವ್ಯವಸ್ಥೆ ಮತ್ತು ಭೂತೆರಿಗೆ ವ್ಯವಸ್ಥೆಗಳು ಲೇವಾದೇವಿಗಾರರಿಗೆ ಸಹಾಯಕವಾಗಿದ್ದುವು. ಆಹಾರ ಬೆಳೆಗಳಿಗೆ ಬದಲಾಗಿ ಬ್ರಿಟಿಷರಿಗೆ ಆವಶ್ಯಕತೆ ಇರುವ ನೀಲ, ಹತ್ತಿಯಂತಹ ವಾಣಿಜ್ಯ ಬೆಳೆಗಳನ್ನು ಬೆಳೆಸಲು ಬ್ರಿಟಿಷರು ರೈತರನ್ನು ನಿರ್ಬಂಧಿಸಿದರು. ವಾಣಿಜ್ಯ ಬೆಳೆಗಳ ವ್ಯಾಪಿಸುವಿಕೆಯು ಆಹಾರ ಬೆಳೆಗಳ ಕೊರತೆಗೂ ಆಹಾರದ ಕ್ಷಾಮಕ್ಕೂ ಕಾರಣವಾಯಿತು. ಕೃಷಿರಂಗದಲ್ಲಿ ಬೆಳೆದುಬಂದ ಕೃಷಿಯ ವಾಣಿಜ್ಯೀಕರಣವು ಲೇವಾದೇವಿಗಾರರಿಗೆ ಕೃಷಿಕರನ್ನು ಶೋಷಣೆ ಮಾಡಲು ಸಹಾಯಕವಾಯಿತು. ಬೆಳೆ ಕೊಯ್ಲಿನ ನಂತರ ತುಚ್ಛ ಬೆಲೆಗೆ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಕೃಷಿಕರು ನಿರ್ಬಂಧಿತರಾದರು.

ಬ್ರಿಟಿಷರ ತೆರಿಗೆ ವ್ಯವಸ್ಥೆಗಳು ಕೃಷಿಕರನ್ನು ಯಾವ ಯಾವ ರೀತಿಯಲ್ಲಿ ಬಾಧಿಸಿತು ಎಂದು ನಾವು ಪರಿಶೀಲಿಸೋಣ.

- ಅಧಿಕ ತೆರಿಗೆ ಪಾವತಿಸಲು ರೈತರು ಕಷ್ಟಪಟ್ಟರು.
- ನೆರೆ ಅಥವಾ ಬರಗಾಲದಿಂದ ಬೆಳೆ ಹಾನಿಯಾದರೂ ತೆರಿಗೆ ವಿನಾಯಿತಿ ಲಭಿಸಲಿಲ್ಲ.

- ರೈತರು ತಮ್ಮ ಕೃಷಿಭೂಮಿ ಕಳೆದುಕೊಳ್ಳುವುದನ್ನು ತಪ್ಪಿಸಲು ಲೇವಾದೇವಿಗಾರರನ್ನು ಆಶ್ರಯಿಸಬೇಕಾಯಿತು.
- ಸಾಲ ಬಾಧೆಗೊಳಗಾದ ರೈತರು ತಮ್ಮ ಭೂಮಿಯನ್ನು ಕಳೆದುಕೊಂಡರು.

ಕೃಷಿಕರಂತೆ ಕರಕುಶಲ ಕಾರ್ಮಿಕರನ್ನೂ ಬ್ರಿಟಿಷರ ಧೋರಣೆಗಳು ಸಂಕಷ್ಟಕ್ಕೀಡು ಮಾಡಿದವು. ಬ್ರಿಟನ್‌ನಿಂದ ಯಂತ್ರನಿರ್ಮಿತ ಉತ್ಪನ್ನಗಳನ್ನು ಭಾರತಕ್ಕೆ ಆಮದು ಮಾಡಲಾಯಿತು. ಅವುಗಳೊಂದಿಗಿನ ಪೈಪೋಟಿಯಿಂದಾಗಿ ಕರಕುಶಲಕರ್ಮಿಗಳ ಉತ್ಪನ್ನಗಳಾದ ಹತ್ತಿ - ರೇಶ್ಮೆ - ಉಣ್ಣೆ ಬಟ್ಟೆಗಳು, ಮಡಿಕೆ, ಚರ್ಮ, ಖಾದ್ಯತೈಲ ಮುಂತಾದವುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆಯಾಯಿತು. ಇದು ಕರಕುಶಲ ಕೆಲಸಗಳಲ್ಲಿ ತೊಡಗಿಸಿಕೊಂಡವರಿಗೆ ಉದ್ಯೋಗ ನಷ್ಟವಾಗಲು ಕಾರಣವಾಯಿತು. ಅನೇಕರು ತಮ್ಮ ಸಾಂಪ್ರದಾಯಿಕವಾಗಿದ್ದ ಉದ್ಯೋಗಗಳನ್ನು ತೊರೆಯಲು ನಿರ್ಬಂಧಿತರಾದರು.

*ಬ್ರಿಟಿಷರ ಆರ್ಥಿಕ ನೀತಿಗಳು ಕೃಷಿಕರನ್ನು ಮತ್ತು ಕರಕುಶಲ ಕಾರ್ಮಿಕರನ್ನು ಯಾವ ರೀತಿಯಲ್ಲಿ ಬಾಧಿಸಿತು ಎಂದು ಚರ್ಚೆ ನಡೆಸಿ ಟಿಪ್ಪಣಿ ತಯಾರಿಸಿರಿ.*

## ಶೋಷಣೆಗೆ ವಿರುದ್ಧವಾಗಿ ಹೋರಾಟ

ಬ್ರಿಟಿಷರ ಆರ್ಥಿಕ ನೀತಿಗಳು ಭಾರತದಲ್ಲಿನ ವಿವಿಧ ಜನವಿಭಾಗಗಳನ್ನು ಪ್ರತಿಕೂಲವಾಗಿ ಬಾಧಿಸಿದುವು. ಜನರು ಅವರಿಗೆದುರಾಗಿ ಹೋರಾಟಗಳನ್ನು ಆರಂಭಿಸಿದರು. ಈ ರೀತಿಯಲ್ಲಿರುವ ಕೆಲವು ಹೋರಾಟಗಳನ್ನು ನಾವು ಪರಿಚಯಿಸೋಣ.

### *ಸನ್ಯಾಸಿಗಳು ಯೋಧರಾದಾಗ*

*1773 ರಲ್ಲಿ ಒಂದು ಬೇಸಗೆಕಾಲ. ಬಂಗಾಳದ ಪದಚಿನ್ನ ಎಂಬ ಗ್ರಾಮದಲ್ಲಿ ಮಳೆ ಸುರಿದಾಗ ಜನರು ಸಂತೋಷಗೊಂಡರು. ಆದರೆ ಮಳೆ ಬೇಗನೆ ನಿಂತು ಬೆಳೆ ಒಣಗಿ ಹೋಯಿತು. ದೇಶದಲ್ಲಿ ಕ್ಷಾಮ ತಲೆದೋರಿತು. ಸರಕಾರ ತೆರಿಗೆ ವಸೂಲಿಯನ್ನು ನಿಲ್ಲಿಸಲಿಲ್ಲ... ತೆರಿಗೆ ಮತ್ತು ತೆರಿಗೆಯ ಬಾಕಿ ಮೊತ್ತವನ್ನು (ಶಿಲ್ಕು) ಕಟ್ಟುನಿಟ್ಟಾಗಿ ವಸೂಲಿ ಮಾಡಲು ಅವರು ಕ್ರಮಗಳನ್ನು ಕೈಗೊಂಡರು. ಬಂಗಾಳವು ಶೋಚನೀಯ ಪರಿಸ್ಥಿತಿಯನ್ನು ಎದುರಿಸಿತು.*

*ಜನರು ಕಷ್ಟ ಅನುಭವಿಸಿದರು. ಜಾನುವಾರುಗಳನ್ನು ಮಾರಾಟ ಮಾಡಿದರು. ಬಿತ್ತನೆಯ ಬೀಜಗಳನ್ನೂ ಮಾರಾಟ ಮಾಡಬೇಕಾಗಿ ಬಂತು. ಮನೆಯ ಗೃಹೋಪಯೋಗಿ ವಸ್ತುಗಳನ್ನು ಮತ್ತು ಪಾತ್ರೆಗಳನ್ನು ಮಾರಾಟ ಮಾಡಬೇಕಾಯಿತು. ಕೆಲವರಿಗೆ ಮನೆಯ ಬಾಗಿಲನ್ನು ಸಮೇತ ಕಿತ್ತು ಮಾರಾಟ ಮಾಡಬೇಕಾಗಿ ಬಂತು. ಜನರಿಗೆ ಬೆಲೆ ಇಲ್ಲದ ಕಾರಣ ಅವರನ್ನು ಮಾರಾಟ ಮಾಡಲು ಸಾಧ್ಯವಾಗಲಿಲ್ಲ.*

*ಗ್ರಾಮೀಣರು ಹುಲ್ಲು, ಎಲೆಗಳನ್ನು ಕೊಯ್ದು, ಗೆಡ್ಡೆಗೆಣಸುಗಳನ್ನು ಅಗೆದು ತಿಂದರು. ಹಸಿವನ್ನು ನೀಗಿಸಲು ಇಲಿಗಳು, ಬೆಕ್ಕುಗಳು, ನಾಯಿಗಳನ್ನು ಕೊಂದು ತಿಂದರು... ಸಾಂಕ್ರಾಮಿಕ ರೋಗಗಳು ಹರಡಿದವು. ಜ್ವರ, ಪ್ಲೇಗ್, ಸಿಡುಬು ಗಾಳಿಯಂತೆ ಹರಡಿತು. ರೋಗಿಗಳ ಶುಶ್ರೂಷೆ ಮಾಡಲು, ಶವಗಳನ್ನು ಸಂಸ್ಕರಿಸಲು ಜನರಿಲ್ಲದಾದರು. ಮನೆಗಳಲ್ಲಿ ಶವಶರೀರಗಳು ಅನಾಥವಾಗಿ ಕೊಳೆತು ನಾರುತ್ತಿದ್ದುವು.*

*ಆಕರ : ಬಂಕಿಮ ಚಂದ್ರ ಚಟರ್ಜಿ, ಆನಂದಮಠ*

*ಬಂಕಿಮ ಚಂದ್ರ ಚಟರ್ಜಿಯ ಆನಂದಮಠ ಎಂಬ ಬಂಗಾಳಿ ಭಾಷೆಯಲ್ಲಿ ಬರೆದ ಕಾದಂಬರಿಯ ಒಂದು ಭಾಗವನ್ನು ಓದಿದಿರಲ್ಲವೇ. ಆನಂದಮಠ ಎಂಬ ಕಾದಂಬರಿಯಿಂದ ಆಗಿನ ಬಂಗಾಳದ ಜನರ ಸಂಕಷ್ಟಗಳ ಕುರಿತು ಮತ್ತು ಇದಕ್ಕೆ ಕಾರಣವಾದ ಸನ್ನಿವೇಶಗಳು ಯಾವುವು ಎಂದು ಚರ್ಚಿಸಿರಿ.*

### *ವಂದೇ ಮಾತರಂ*

*1882 ರಲ್ಲಿ ಬಂಗಾಳಿ ಭಾಷೆಯಲ್ಲಿ ಬಂಕಿಮ ಚಂದ್ರ ಚಟರ್ಜಿಯವರು ರಚಿಸಿದ ಆನಂದಮಠ ಎಂಬ ಕಾದಂಬರಿಯಿಂದ ನಮ್ಮ ರಾಷ್ಟ್ರೀಯ ಗಾನವಾದ ವಂದೇಮಾತರಂನ್ನು ಆಯ್ದುಕೊಳ್ಳಲಾಗಿದೆ. ಭಾವನಂದನ್ ಎಂಬ ಕಥಾಪಾತ್ರವು ಹಾಡುವ ಗೀತೆಯಾಗಿ ಇದನ್ನು ಕಾದಂಬರಿಯಲ್ಲಿ ಪರಾಮರ್ಶಿಸಲಾಗಿದೆ.*

ಬಂಗಾಳದಲ್ಲಿನ ಕ್ಷಾಮವನ್ನು ನಿವಾರಿಸಲು ಈಸ್ಟ್ ಇಂಡಿಯಾ ಕಂಪೆನಿಯು ಯಾವುದೇ ಪ್ರಯತ್ನವನ್ನು ಮಾಡಲಿಲ್ಲ. ಆದುದರಿಂದ ಬಡವರಾದ ಕೃಷಿಕರು ಮತ್ತು ಕಾರ್ಮಿಕರು ಬ್ರಿಟಿಷರಿಗೆದುರಾಗಿ ಹೋರಾಡಿದರು. ಈ ಕೃಷಿಕರ ಹೋರಾಟಗಳಿಗೆ ಸನ್ಯಾಸಿಗಳ ಬೆಂಬಲವೂ ಇತ್ತು. ಆದುದರಿಂದ ಇವುಗಳನ್ನು ಸನ್ಯಾಸಿ ದಂಗೆ ಎಂದು ಕರೆಯಲಾಗುತ್ತದೆ. ಸನ್ಯಾಸಿಗಳ ಜೊತೆಗೆ ಫಕೀರರು ಕೂಡ ಬ್ರಿಟಿಷರ ವಿರುದ್ಧದ ದಂಗೆಗೆ ಸೇರಿಕೊಂಡರು. ಆದುದರಿಂದ ಈ ದಂಗೆಯನ್ನು ಸನ್ಯಾಸಿ - ಫಕೀರರ ದಂಗೆ ಎಂದೂ ಕರೆಯುತ್ತಾರೆ. ಭವಾನಿ ಪಾಥಕ್, ಮಜ್ನು ಷಾ ಎಂಬಿವರು ಸನ್ಯಾಸಿ - ಫಕೀರ್ ದಂಗೆಗೆ ನೇತೃತ್ವವನ್ನು ನೀಡಿದರು.

## ಕೃಷಿಯಿಂದ ದಂಗೆಯ ಕಡೆಗೆ

ಬಂಗಾಳದ ನೀಲ ಕೃಷಿಕರ ದಂಗೆ (1859) ಯು ಬ್ರಿಟಿಷ್ ವಸಾಹತುಶಾಹಿ ಆಡಳಿತಕ್ಕೆ ಎದುರಾಗಿ ನಡೆದ ಬಹಳ ಪ್ರಮುಖವಾದ ಕೃಷಿಕ ದಂಗೆಯಾಗಿದೆ. ಇದಕ್ಕೆ ಕಾರಣವಾದ ಸನ್ನಿವೇಶಗಳು ಯಾವುವು ಎಂದು ಪರಿಶೀಲಿಸೋಣ.

- ಬ್ರಿಟಿಷ್ ತೋಟಗಾರರು (Indigo Planters) ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಿರುವ ಕಾರ್ಖಾನೆಗಳಿಗೆ ಅಗತ್ಯವಾದ ನೀಲ ಕೃಷಿ ಮಾಡಲು ಕೃಷಿಕರನ್ನು ಒತ್ತಾಯಿಸಿದ್ದು.
- ನೀಲ ಅಮರಿ ಗಿಡದಲ್ಲಿ ಉತ್ಪಾದಿಸುವ ನೀಲವನ್ನು ಬ್ರಿಟಿಷರಿಗೆ ಮಾತ್ರವೇ ಮಾರಾಟ ಮಾಡಲು ನಿರ್ಬಂಧಿಸಿದ್ದು.
- ನೀಲಕ್ಕೆ ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯನ್ನು ಬ್ರಿಟಿಷರು ಕೃಷಿಕರಿಗೆ ನೀಡುತ್ತಿದ್ದುದು.
- ತೀವ್ರವಾದ ಆಹಾರಕ್ಷಾಮಕ್ಕೂ ಶೋಷಣೆಗೂ ಆರ್ಥಿಕ ಸಂಕಷ್ಟಕ್ಕೂ ಇದು ದಾರಿ ಮಾಡಿಕೊಟ್ಟಿತು.
- ಕೃತಕ ಬಣ್ಣ ಕಂಡುಹಿಡಿಯುವುದರೊಂದಿಗೆ ನೀಲದ ಬೇಡಿಕೆ ಕಡಿಮೆಯಾದುದು ಬಡತನ ಹೆಚ್ಚಾಗಲು ಕಾರಣವಾಯಿತು. ಗತ್ಯಂತರವಿಲ್ಲದೆ ಕೃಷಿಕರು ಬ್ರಿಟಿಷರಿಗೆ ವಿರುದ್ಧವಾಗಿ ಹೋರಾಟದ ಹಾದಿಯನ್ನು ತುಳಿದರು.

### *ನೀಲ್ ದರ್ಪಣ್*

*ನೀಲ್ ದರ್ಪಣ್ ಬಂಗಾಳದ ನೀಲ ಕೃಷಿಕರು ಅನುಭವಿಸಿದ ಕಷ್ಟಗಳನ್ನು ಆಧಾರವಾಗಿಸಿ 1860 ರಲ್ಲಿ ದೀನಬಂಧುಮಿತ್ರ ರಚಿಸಿದ ನಾಟಕವಾಗಿದೆ.*

ದಿಗಂಬರ್ ಬಿಸ್ವಾಸ್ ಮತ್ತು ವಿಷ್ಣು ಬಿಸ್ವಾಸರ ನೇತೃತ್ವದಲ್ಲಿ ನೀಲ ದಂಗೆಯು ಆರಂಭವಾಯಿತು. ಬಂಗಾಳದ ಉದ್ದಗಲಕ್ಕೂ ದಂಗೆ ವ್ಯಾಪಿಸುವುದರೊಂದಿಗೆ ಕೃಷಿಕರು ನೀಲಕೃಷಿಯನ್ನು ಉಪೇಕ್ಷಿಸಿದರಲ್ಲದೆ ನೀಲಕಾರ್ಖಾನೆಗಳನ್ನು ಆಕ್ರಮಿಸಿದರು. ಕೃಷಿಕರ ಪ್ರತಿಭಟನೆಗಳು ತೀವ್ರಗೊಂಡಾಗ ತೋಟಗಾರರು ಕಾರ್ಖಾನೆಗಳನ್ನು ಮುಚ್ಚುವುದರೊಂದಿಗೆ ಬಂಗಾಳದಲ್ಲಿ ನೀಲ ಕೃಷಿಯು ನಾಮಮಾತ್ರವಾಯಿತು.

### *ಕಾಡು ಎಚ್ಚೆತ್ತಾಗ*

*ಸಂತಾಳರು ಅತ್ಯಂತ ಸಾಹಸಿಕವಾದ ಧೈರ್ಯವನ್ನು ಪ್ರದರ್ಶಿಸಿದರು. ಯಾವುದೇ ಕ್ಷಣದಲ್ಲಿ ಬಂಧನಕ್ಕೊಳಗಾಗಿ ಶಿಕ್ಷೆಗೆ ಗುರಿಯಾಗಬಹುದೆಂಬ ಅರಿವಿಲ್ಲದಿದ್ದರೂ ಅವರು ಶರಣರಾಗಲು ತಯಾರಾಗಲಿಲ್ಲ. ಒಮ್ಮೆ 45 ಸಂತಾಳರು ಒಂದು ಮಣ್ಣಿನ ಗುಡಿಸಲಿನಲ್ಲಿ ಆಶ್ರಯ ಪಡೆದು ಬ್ರಿಟಿಷ್ ಸೈನಿಕರ ವಿರುದ್ಧ ಹೋರಾಡಿದರು. ಗುಡಿಸಲಿನ ಮೇಲೆ ಮದ್ದುಗುಂಡುಗಳು ಹಾರಿಬಂದವು. ಪ್ರತಿಯೊಂದು ಸಲವೂ ಬಾಣಗಳ ಸುರಿಮಳೆಯೊಂದಿಗೆ ಸಂತಾಳರು ಪ್ರತ್ಯುತ್ತರಿಸಿದರು. ಕೊಟ್ಟಕೊನೆಗೆ ಗುಂಡು ಹಾರಿಸುವುದನ್ನು ನಿಲ್ಲಿಸಿ ಗುಡಿಸಲನ್ನು ಪ್ರವೇಶಿಸಿದ ಸೈನಿಕರಿಗೆ ಒಬ್ಬ ವೃದ್ಧನನ್ನು ಮಾತ್ರ ಜೀವಂತವಾಗಿ ಕಾಣಲು ಸಾಧ್ಯವಾಯಿತು. ಒಬ್ಬ ಸೈನಿಕ ಅವನಲ್ಲಿ ಶರಣಾಗಲು ಹೇಳಿದನು. ಅದಕ್ಕೆ ಪ್ರತಿಯಾಗಿ ಧಾವಿಸಿದ ವೃದ್ಧನು ತನ್ನ ಕೊಡಲಿಯಿಂದ ಆತನನ್ನು ಕಡಿದು ಹಾಕಿದನು.*

*ಬಿಪಿನ್ ಚಂದ್ರ – ಭಾರತದ ಸ್ವಾತಂತ್ರ್ಯ ಹೋರಾಟ*

ಮೇಲೆ ಕೊಟ್ಟಿರುವುದು ಸಂತಾಳ ಬುಡಕಟ್ಟು ಜನರ ಶೌರ್ಯವನ್ನು ವಿವರಿಸುವ ಟಿಪ್ಪಣಿಯಾಗಿದೆ. ಸಂತಾಳರು ಬ್ರಿಟಿಷರ ವಿರುದ್ಧಹೋರಾಡಲು ಕಾರಣವೇನಾಗಿರಬಹುದು?

ಇವರು 18 ನೇ ಶತಮಾನದಲ್ಲಿ ಬಂಗಾಳ ಪ್ರಾಂತ್ಯದ ರಾಜ್‌ಮಹಲ್ ಬೆಟ್ಟಗಳಿಗೆ ವಲಸೆ ಬಂದ ಬುಡಕಟ್ಟು ಜನರಾಗಿದ್ದಾರೆ. ಜಮೀನ್ದಾರರು ಅನ್ಯಾಯವಾಗಿ ತೆರಿಗೆ ವಸೂಲಿ ಮಾಡಿದರಲ್ಲದೆ ಲೇವಾದೇವಿಗಾರರು ನಿರಂತರವಾಗಿ ನೀಡಿದ ಸಾಲಕ್ಕೆ ಬದಲಾಗಿ ಅವರ ಧಾನ್ಯಗಳು, ಅರಣ್ಯ ಸಂಪತ್ತುಗಳನ್ನು ಕೊಳ್ಳೆಹೊಡೆದರು. ಇವೆಲ್ಲವೂ ಬ್ರಿಟಿಷರ ಬೆಂಬಲದಿಂದಲೇ ನಡೆದುವು. ಬುಡಕಟ್ಟು ಜನರ ಭೂಮಿಯೊಂದಿಗಿನ ಸಂಬಂಧದ ಕುರಿತು ಯಾವುದೇ ತಿಳುವಳಿಕೆ ಇಲ್ಲದ ಬ್ರಿಟಿಷ್ ಆಡಳಿತಕ್ಕೆ ಇವೆಲ್ಲವೂ ತೆರಿಗೆ ಆದಾಯವನ್ನು ಹೆಚ್ಚಿಸಲಿರುವ ಮಾರ್ಗವಾಗಿತ್ತು.

ಸಂತಾಳರು ತಾವು ಎದುರಿಸಿದ ಅನೀತಿಗಳ ವಿರುದ್ಧ ಬುಡಕಟ್ಟು ಜನರನ್ನು ಸಂಘಟಿಸುವುದರ ಮೂಲಕ 1855ರಲ್ಲಿ ಬ್ರಿಟಿಷರಿಗೆ ವಿರುದ್ಧವಾದ ಹೋರಾಟಗಳಿಗೆ ನಾಂದಿ ಹಾಡಿದರು. ಈ ದಂಗೆಗೆ ನೇತೃತ್ವ ನೀಡಿದ ಸಿದ್ಧೊ ಹಾಗೂ ಕಾನ್ಹೊವನ್ನು ಬ್ರಿಟಿಷರು ವಧಿಸಿದರು. ದಂಗೆಯು ಕ್ರೂರವಾಗಿ ಹತ್ತಿಕ್ಕಲ್ಪಟ್ಟರೂ ಸಂತಾಳ ದಂಗೆಯು ಬುಡಕಟ್ಟು ಜನಾಂಗದ ಹೋರಾಟದ ಇತಿಹಾಸದಲ್ಲಿ ಒಂದು ಪ್ರಮುಖವಾದ ಅಧ್ಯಾಯವಾಗಿ ಬದಲಾಯಿತು.

## ಉಲ್ಗುಲಾನ್ (Great Tumult)

ಸಂತಾಳ ದಂಗೆಯ ರೀತಿಯಲ್ಲಿ ಭಾರತದ ಅನೇಕ ಪ್ರದೇಶಗಳಲ್ಲಿ ಬುಡಕಟ್ಟು ಜನರ ದಂಗೆಗಳು ನಡೆದುವು. 19 ನೇ ಶತಮಾನದ ಕೊನೆಯ ದಶಕದಲ್ಲಿ ನಡೆದ ಬುಡಕಟ್ಟು

ದಂಗೆಯೇ 'ಉಲ್ಗುಲಾನ್'. ಇದು ಮುಂಡಾ ದಂಗೆ ಎಂದು ಕರೆಯಲ್ಪಡುತ್ತದೆ. ಉಲ್ಗುಲಾನ್ ಪದದ ಅರ್ಥವು 'ದೊಡ್ಡ ಕೋಲಾಹಲ' ಅಥವಾ 'ಮಹಾ ಗದ್ದಲ' ಎಂದಾಗಿದೆ. ಇಂದಿನ ಜಾರ್ಖಂಡ್ ನ ಬುಡಕಟ್ಟು ವಿಭಾಗದ ಜನವಾಸ ಕೇಂದ್ರಗಳಲ್ಲಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯನ್ನು ಕೊನೆಗೊಳಿಸಿ ಮುಂಡಾ ರಾಜ್ (ರಾಜ್ಯ) ಸ್ಥಾಪಿಸಲು ಪ್ರಯತ್ನಿಸಿದ ಬಿರ್ಸಾ ಮುಂಡಾ ಈ ದಂಗೆಗೆ ನೇತೃತ್ವವನ್ನು ನೀಡಿದನು.

ಈ ದಂಗೆಯ ಕಾರಣಗಳನ್ನು ಪರಿಶೀಲಿಸೋಣ.

- ಬ್ರಿಟಿಷ್ ವಸಾಹತುಶಾಹಿ ಶೋಷಣೆ ಮತ್ತು ಭೂಸ್ವಾಧೀನ.
- ಲೇವಾದೇವಿಗಾರರ ಮತ್ತು ವ್ಯಾಪಾರಿಗಳ ಆರ್ಥಿಕ ಶೋಷಣೆ.

1899 ರಲ್ಲಿ ಮುಂಡಾ ಬುಡಕಟ್ಟು ವಿಭಾಗದವರು ಬ್ರಿಟಿಷರಿಗೆ ಎದುರಾಗಿ ಸಶಸ್ತ್ರ ದಂಗೆಯನ್ನು ಆರಂಭಿಸಿದರು. ಅನೇಕ ಸ್ಥಳಗಳಲ್ಲಿ ಬ್ರಿಟಿಷ್ ಪೋಲೀಸರೊಂದಿಗೆ ಘರ್ಷಣೆಗಳು ನಡೆದವು. ರಾಂಚಿಯಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಮುಂಡಾ ಬುಡಕಟ್ಟಿನ ಹಲವು ಮಂದಿ ಸಾವನ್ನಪ್ಪಿದರು. ಬಿರ್ಸಾ ಮುಂಡಾ ಸೆರೆಮನೆಗೆ ತಳ್ಳಲ್ಪಟ್ಟನು ಮತ್ತು ಅಲ್ಲಿಯೇ ಮರಣ ಹೊಂದಿದನು. ಮುಂಡಾ ದಂಗೆಯನ್ನು ಬ್ರಿಟಿಷರು ಕ್ರೂರವಾಗಿ ದಮನಿಸಿದರು.

ಕುರುಚಿಯರ ದಂಗೆ, ಪಹಾರಿಯಾ ದಂಗೆ, ಕೋಲ್ ದಂಗೆ, ಭಿಲ್ ದಂಗೆ, ಖಾಸೀ ದಂಗೆ ಇತ್ಯಾದಿಗಳು ಬ್ರಿಟಿಷರ ವಿರುದ್ಧ ಭಾರತದ ವಿವಿಧ ಭಾಗಗಳಲ್ಲಿ ನಡೆದ ಕೆಲವು ಬುಡಕಟ್ಟು ಹೋರಾಟಗಳಾಗಿವೆ.

### *ಬಿರ್ಸಾ ಮುಂಡಾ*



*ಚಿತ್ರ 1.9 • ಬಿರ್ಸಾ ಮುಂಡಾ*

- *ಬಿರ್ಸಾ ಮುಂಡಾರ ಜನ್ಮದಿನವಾದ ನವೆಂಬರ್ 15 ನ್ನು 2021 ರಿಂದ ಭಾರತದಲ್ಲಿ ಜನ್‌ಜಾತಿಯ ಗೌರವ್ ದಿವಸ್ (ಬುಡಕಟ್ಟು ಅಭಿಮಾನ ದಿನ) ಆಗಿ ಆಚರಿಸಲಾಗುತ್ತಿದೆ.*
- *ಭಾರತದ ಪಾರ್ಲಿಮೆಂಟಿನಲ್ಲಿ ಛಾಯಾಚಿತ್ರ ಸ್ಥಾಪಿಸಿ ಗೌರವಿಸಲ್ಪಟ್ಟ ಬುಡಕಟ್ಟು ಜನಾಂಗದ ಏಕೈಕ ನೇತಾರನೇ ಬಿರ್ಸಾ ಮುಂಡಾ.*
- *ಗಾಂಧಿ ಸೇ ಫಹಲೆ ಗಾಂಧಿ ಬಿರ್ಸಾ ಮುಂಡಾನನ್ನು ಕೇಂದ್ರ ಕಥಾಪಾತ್ರವಾಗಿ ಇಕ್ಬಾಲ್ ದುರಾನಿ ರಚಿಸಿದ ಕೃತಿಯಾಗಿದೆ.*
- *ಬಿರ್ಸಾ ಮುಂಡಾನನ್ನು ಕೇಂದ್ರ ಕಥಾಪಾತ್ರವಾಗಿ ಮಹಾಶ್ವೇತಾ ದೇವಿ ರಚಿಸಿದ ಕೃತಿಯೇ ಆರಣ್ಯೇರ್ ಅಧಿಕಾರ್.*

## ಯುದ್ಧದ ಘರ್ಜನೆ

ಬ್ರಿಟಿಷರ ನೀತಿಗಳು ತಮಿಳುನಾಡಿನ ಮಿಲಿಟರಿ ನಾಯಕರಾದ ಪೋಲಿಗರನ್ನೂ ಬಾಧಿಸಿತು.

### *ಪೋಲಿಗರ್*

*ಶಿಬಿರ ಅಥವಾ ಸೈನಿಕ ಶಿಬಿರ ಎಂಬ ಅರ್ಥ ಬರುವ ಪಾಲಯಕಾರ್ ಎಂಬ ತಮಿಳು ಪದದಿಂದ ಪೋಲಿಗರ್ ಎಂಬ ಇಂಗ್ಲಿಷ್ ಪದವು ಹುಟ್ಟಿಕೊಂಡಿದೆ.*

ತಿರುನಲ್ವೇಲಿಯ ಪಾಂಚಾಲಂಕುರುಚಿಯ ಪೋಲಿಗರಾಗಿದ್ದ ವೀರಪಾಂಡ್ಯ ಕಟ್ಟಬೊಮ್ಮನ್ ಮತ್ತು ಶಿವಗಂಗದ ಪೋಲಿಗರಾಗಿದ್ದ ಮರುತು ಪಾಂಡ್ಯ ಸಹೋದರರು ಬ್ರಿಟಿಷರಿಗೆ ಎದುರಾದ ಹೋರಾಟದಲ್ಲಿ ಪ್ರಮುಖ ಪಾತ್ರ



ಚಿತ್ರ 1.10 ● ವೀರಪಾಂಡ್ಯ ಕಟ್ಟಬೊಮ್ಮನ್

ವಹಿಸಿದರು. ಕಟ್ಟಬೊಮ್ಮನು ಜನರ ಸಂರಕ್ಷಕ ಎಂಬ ನೆಲೆಯಲ್ಲಿ ಜನರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದನು. ಜನರಿಂದ ತೆರಿಗೆ ವಸೂಲಿ ಮಾಡುವ ಜವಾಬ್ದಾರಿಯು ಪೋಲಿಗರ ದ್ದಾಗಿತ್ತು. ಪಾಂಚಾಲಂಕುರಿಚಿಯ ಆಡಳಿತಾಧಿಕಾರಿಯು ಬ್ರಿಟಿಷರಿಗೆ ಶರಣಾದರೂ ಕಟ್ಟಬೊಮ್ಮನು ಶರಣಾಗಲು ಸಿದ್ಧನಿರಲಿಲ್ಲ. ಅಸ್ತಿತ್ವದಲ್ಲಿದ್ದ ತೆರಿಗೆಯನ್ನು ಹೆಚ್ಚಿಸಿ ಬ್ರಿಟಿಷರು ಜನರನ್ನು ಸಂಕಷ್ಟಕ್ಕೀಡುಮಾಡಿದರು. ತೆರಿಗೆ ಸಂಗ್ರಹದ ವಿಚಾರವನ್ನು ಪ್ರಶ್ನಿಸಿದ ಕಟ್ಟಬೊಮ್ಮನು ಬ್ರಿಟಿಷರ ಶತ್ರುವಾದನು. ಕಟ್ಟಬೊಮ್ಮನು ಮತ್ತು ಶಿವಗಂಗದ ಪೋಲಿಗರಾಗಿದ್ದ ಮರುತು ಪಾಂಡ್ಯ ಸಹೋದರರು ಬ್ರಿಟಿಷರ ವಿರುದ್ಧ ಹೋರಾಡಿ ವೀರಮರಣವನ್ನಪ್ಪಿದರು.

## ಆಟ್ಟಿಂಗಲ್ ದಂಗೆ

1721ರ ಆಟ್ಟಿಂಗಲ್ ದಂಗೆಯು ಭಾರತದಲ್ಲಿ ಬ್ರಿಟಿಷರಿಗೆದುರಾಗಿ ನಡೆದ ಆರಂಭ ಕಾಲದ ಸಂಘಟಿತ ಹೋರಾಟವಾಗಿದೆ. ಕಾಳುಮೆಣಸು ವ್ಯಾಪಾರಕ್ಕೆ ಸಂಬಂಧಿಸಿಯೂ ಆಂತರಿಕ ಆಡಳಿತ ವಿಷಯದಲ್ಲಿ ಮಧ್ಯಪ್ರವೇಶಿಸಿಯೂ ಜನರಲ್ಲಿ ಕೋಮುದ್ವೇಷ ಹಾಗೂ ವಂಶೀಯ ದ್ವೇಷವನ್ನು ಬೆಳೆಸಲು ಪ್ರಯತ್ನಿಸಿಯೂ ಬ್ರಿಟಿಷರು ನಿರಂತರವಾಗಿ ಆಟ್ಟಿಂಗಲ್ ಪ್ರದೇಶದಲ್ಲಿ ಅರಾಜಕತೆಯನ್ನು ಸೃಷ್ಟಿಸಲು ಪ್ರಯತ್ನಿಸಿದರು. ಆಟ್ಟಿಂಗಲ್ ರಾಣಿಗೆ ಪ್ರತಿ ಹೊಸವರ್ಷದಂದು ಉಡುಗೊರೆಯನ್ನು ನೀಡುತ್ತಿದ್ದ ಕ್ರಮವನ್ನು 1721ರಲ್ಲಿ ಬ್ರಿಟಿಷರು ಪುನರಾವರ್ತಿಸಲು ಪ್ರಯತ್ನಿಸಿದರು. ಆದರೆ ಇದು ಯಾವುದಾದರೊಂದು ರೀತಿಯಲ್ಲಿ ಅಪಾಯವನ್ನುಂಟುಮಾಡಲು ಕಾರಣವಾಗಬಹುದು ಎಂದು ಭೀತಿಗೊಂಡ ಊರಿನ ಮುಖ್ಯಸ್ಥರು ಇದನ್ನು ವಿರೋಧಿಸಿದರು. ಊರಿನ ಮುಖ್ಯಸ್ಥರ ಮೂಲಕ ಉಡುಗೊರೆಯನ್ನು



ಚಿತ್ರ 1.11 ● ಅಂಜುತೆಂಗು ಕೋಟೆ

### ವೆಲ್ಲೂರು ದಂಗೆ



ಚಿತ್ರ 1.11 ● ವೆಲ್ಲೂರು ದಂಗೆ ಸ್ಮಾರಕ

*ತಮಿಳುನಾಡಿನ ವೆಲ್ಲೂರು ದಂಗೆಯು ಬ್ರಿಟಿಷರಿಗೆ ವಿರುದ್ಧವಾಗಿ ಭಾರತದಲ್ಲಿ ನಡೆದ ಮೊದಲ ಸೈನಿಕ ದಂಗೆಯಾಗಿತ್ತು. ಈ ದಂಗೆಯ ನೇತೃತ್ವವನ್ನು ಬ್ರಿಟಿಷ್ ಸೈನ್ಯದಲ್ಲಿದ್ದ ಭಾರತೀಯರು ವಹಿಸಿದ್ದರು. ಭಾರತೀಯ ಸೈನಿಕರ ವೇಷವಿಧಾನದಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿ ಮಾಡಿದ ಬದಲಾವಣೆಗಳು ದಂಗೆಗೆ ಪ್ರಮುಖ ಕಾರಣಗಳಾಗಿದ್ದುವು. 1806ರಲ್ಲಿ ನಡೆದ ದಂಗೆಯನ್ನು ಬ್ರಿಟಿಷರು ದಮನಿಸಿದರೂ ಅನಂತರ ಬ್ರಿಟಿಷರ ವಿರುದ್ಧ ನಡೆದ ದಂಗೆಗಳಿಗೆ ವೆಲ್ಲೂರ್ ದಂಗೆಯು ಪ್ರಚೋದನೆಯಾಯಿತು.*

ನೀಡಿದರೆ ಸಾಕೆಂಬ ಅವರ ಅಭಿಪ್ರಾಯವನ್ನು ಲೆಕ್ಕಿಸದೆ ಗೀಫೋರ್ಡ್ ನ ನೇತೃತ್ವದಲ್ಲಿದ್ದ ನೂರ ನಲವತ್ತರಷ್ಟು ಮಂದಿಯನ್ನೊಳಗೊಂಡ ಬ್ರಿಟಿಷರ ಗುಂಪು ಆಟ್ಟಿಂಗಲ್ ರಾಣಿಗೆ ಉಡುಗೊರೆಗಳನ್ನು ನೀಡಲು ಆಗಮಿಸಿದ್ದು ಘರ್ಷಣೆಗೆ ಕಾರಣವಾಯಿತು. ಈ ಗುಂಪನ್ನು ವರ್ಗ, ವರ್ಣ, ಜಾತಿ, ಮತ ವ್ಯತ್ಯಾಸ ಇಲ್ಲದೆ ಊರಿನವರು ಆಕ್ರಮಿಸಿ ಹತ್ಯೆ ಮಾಡಿದರು. ಅಲ್ಲದೆ ಅಂಜುತೆಂಜುನಲ್ಲಿರುವ ಬ್ರಿಟಿಷ್ ಕೋಟೆಯನ್ನು ಸುತ್ತುವರೆದು ಮುತ್ತಿಗೆ ಹಾಕಿದರು. ಆಟ್ಟಿಂಗಲ್ ದಂಗೆಯು ಕೇರಳದಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ನಡೆದ ಆರಂಭ ಕಾಲದ ಸಂಘಟಿತ ಜನಪರ ಹೋರಾಟ ಎಂದು ಪ್ರಸಿದ್ಧವಾಗಿದೆ.


ಚಿತ್ರ 1.13 • ಕಿತ್ತೂರು ರಾಣಿ ಚೆನ್ನಮ್ಮ

## ಸ್ತ್ರೀಶಕ್ತಿ

ಬ್ರಿಟಿಷರ ಧೋರಣೆಗಳು ಭಾರತದ ಆಡಳಿತಗಾರರ ಮೇಲೂ ಪರಿಣಾಮ ಬೀರಿದುವು. ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಶಸ್ತ್ರಾಸ್ತ್ರ ಹಿಡಿದು ಹೋರಾಡಿದ ಧೀರ ಮಹಿಳೆಯಾಗಿದ್ದಾಳೆ. ಕಿತ್ತೂರು, ಮರಾಠರ ಪ್ರಭುತ್ವವನ್ನು ಅಂಗೀಕರಿಸಿದ ಕರ್ನಾಟಕದ ದೇಶೀಯ ರಾಜ್ಯವಾಗಿತ್ತು. ಬ್ರಿಟಿಷರು ಮೂರನೇ ಆಂಗ್ಲೋ ಮರಾಠ ಯುದ್ಧವನ್ನು ಜಯಗಳಿಸುವುದರೊಂದಿಗೆ ಕಿತ್ತೂರು ಪ್ರದೇಶವು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ನಿಯಂತ್ರಣಕ್ಕೆ ಬಂತು. ಶಿವಲಿಂಗ ರುದ್ರದೇಸಾಯಿ ಕಿತ್ತೂರಿನ ಆಡಳಿತಾಧಿಕಾರಿಯಾಗಿದ್ದನು. ಆತನ ಮರಾಣಾನಂತರ ವಿಧವೆಯಾದ ಚೆನ್ನಮ್ಮ ಒಬ್ಬ ಗಂಡುಮಗುವನ್ನು ದತ್ತು ತೆಗೆದುಕೊಳ್ಳಲು ನಿರ್ಧರಿಸಿದಳು. ಇದನ್ನು ವಿರೋಧಿಸಿದ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ಕಿತ್ತೂರನ್ನು ಬ್ರಿಟಿಷ್ ಇಂಡಿಯಾಕ್ಕೆ ಸೇರಿಸಿತು. ಇದರಿಂದ ಸಿಟ್ಟುಗೊಂಡ ಕಿತ್ತೂರಿನ ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಯುದ್ಧ ಸಾರಿದಳು. ರಾಣಿ ಚೆನ್ನಮ್ಮ 1829 ರಲ್ಲಿ ಬ್ರಿಟಿಷರ ಸೆರೆಮನೆಯಲ್ಲಿ ಮರಣ ಹೊಂದಿದಳು.

*ಬ್ರಿಟಿಷರಿಗೆ ವಿರುದ್ಧವಾಗಿ ಭಾರತದಲ್ಲಿ ನಡೆದ ದಂಗೆಗಳನ್ನು ವಿಶ್ಲೇಷಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.*



## ಬ್ರಿಟಿಷ್ ಸಾಮ್ರಾಜ್ಯವನ್ನು ನಡುಗಿಸಿದ ಚಂಡಮಾರುತ

*“ಕನ್ವರ್ ಮತ್ತು ಆತನ ತಂಡವು ನದಿಯ ಮಧ್ಯಭಾಗಕ್ಕೆ ಚಲಿಸಲು ಆರಂಭಿಸಿದಾಗ ದಡದಿಂದ ಇಂಗ್ಲಿಷ್ ಸೈನ್ಯ ಗುಂಡು ಹಾರಿಸಲು ಆರಂಭಿಸಿತು. ಕನ್ವರ್ ಸಿಂಗ್‌ನ ಎಡಕೈಗೆ ಗುಂಡು ತಗುಲಿತು ಕೈ ಮುರಿದು ನೇತಾಡುತ್ತಿತ್ತು. ಕನ್ವರ್ ಸಿಂಗ್ ಆದರೂ ಹಿಂಜರಿಯದೆ ತನ್ನ ಸೊಂಟದಲ್ಲಿದ್ದ ಕಠಾರಿಯನ್ನು ತೆಗೆದು ನಿಷ್ಪ್ರಯೋಜಕ ಭುಜವನ್ನು ಕತ್ತರಿಸಿದನು. ಗಂಗಾ ಮಾತೆಗೆ ಇದನ್ನು ಅರ್ಪಿಸುತ್ತೇನೆ ಎಂದು ತುಂಡರಿಸಿದ ಭಾಗವನ್ನು ನದಿಗೆ ಎಸೆದನು.”*

***ಕೆ.ಎಸ್.ಐ.ಸಿ.ಎಲ್. ಮಕ್ಕಳಿಗಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಚರಿತ್ರೆ***

ಇದು 1857 ರ ದಂಗೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಕನ್ವರ್ ಸಿಂಗ್‌ನ ಧೀರತೆಯನ್ನು ಬಿಂಬಿಸುವ ಮಾತುಗಳಾಗಿವೆ.

ಕನ್ವರ್ ಸಿಂಗ್ ಬ್ರಿಟಿಷರ ವಿರುದ್ಧ ಹೋರಾಡಲು ಕಾರಣವೇನು?

ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಗೆ ವಿರುದ್ಧವಾಗಿ ಭಾರತದ ಹಲವು ಭಾಗಗಳಲ್ಲಿ ಪ್ರಾದೇಶಿಕ ಹೋರಾಟಗಳು ನಡೆದಿವೆ ಎಂದು ನೀವು ತಿಳಿದಿರಲ್ಲವೇ. ಇಂತಹ ಹೋರಾಟಗಳೆಲ್ಲವನ್ನು ಕಂಪೆನಿಯ ಸೇನೆಯು ಹತ್ತಿಕ್ಕಿತು. ಆದರೂ 1857 ರಲ್ಲಿ ನಡೆದ ಹೋರಾಟವು ಬ್ರಿಟಿಷ್ ಸಾಮ್ರಾಜ್ಯಕ್ಕೆ ಎದುರಾಗಿ ಭಾರತದಲ್ಲಿ ನಡೆದ ಸಂಘಟಿತ ದಂಗೆಯಾಗಿತ್ತು. ಆದುದರಿಂದ ಇತಿಹಾಸಕಾರರು ಈ ದಂಗೆಯನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟ ಎಂದು ಬಣ್ಣಿಸುತ್ತಾರೆ. ಅದು ಜನಸಾಮಾನ್ಯರು, ಕೃಷಿಕರು, ಕರಕುಶಲಕಾರ್ಮಿಕರು, ದೇಶೀಯ ರಾಜರುಗಳು, ಸೈನಿಕರು, ಜಮೀನ್ದಾರರು ಮೊದಲಾದ ಸಮಾಜದ ವಿವಿಧ ಜನವಿಭಾಗಗಳು ಪಾಲ್ಗೊಂಡ ಮೊದಲ ಬ್ರಿಟಿಷ್ ವಿರೋಧಿ ಹೋರಾಟವಾಗಿತ್ತು. ವಿವಿಧ ಜನ ವಿಭಾಗಗಳನ್ನು ದಂಗೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದ ಘಟಕಗಳು ಯಾವುವು?



*ಚಿತ್ರ 1.14 • ಕನ್ವರ್ ಸಿಂಗ್*

ಬ್ರಿಟಿಷರು ಜಾರಿಗೊಳಿಸಿದ ಆಡಳಿತ ಸುಧಾರಣೆಗಳು ಈ ದಂಗೆಗೆ ಕಾರಣವಾದುವು. ಸೈನಿಕ ಸಹಾಯ ಪದ್ಧತಿ ಮತ್ತು ದತ್ತುಪುತ್ರರಿಗೆ ಹಕ್ಕಿಲ್ಲವೆಂಬ ಕಾಯ್ದೆ ಎಂಬಿವು ಈ ರೀತಿಯಲ್ಲಿದ್ದ ಎರಡು ಬ್ರಿಟಿಷ್ ನೀತಿಗಳಾಗಿದ್ದವು.

### ಸೈನಿಕ ಸಹಾಯ ಪದ್ಧತಿ (Subsidiary Alliance Policy)

ಸೈನಿಕ ಸಹಾಯ ಪದ್ಧತಿಯು ಭಾರತದಲ್ಲಿ ಬ್ರಿಟಿಷರ ಸಾಮ್ರಾಜ್ಯ ವಿಸ್ತರಣೆಗೆ ಹಾಗೂ ತಮ್ಮ ಪ್ರಾಬಲ್ಯವನ್ನು ಖಾತರಿಪಡಿಸಲು ಗವರ್ನರ್ ಜನರಲ್ ವೆಲ್ಲೆಸ್ಲಿ ಪ್ರಭು ಜಾರಿಗೆ ತಂದ ಯೋಜನೆಯಾಗಿದೆ. ಇದರ ಪ್ರಕಾರ ಬ್ರಿಟಿಷರೊಂದಿಗೆ ಸೈನಿಕ ಮೈತ್ರಿಯಲ್ಲಿ ಏರ್ಪಡುವ ದೇಶೀಯ ರಾಜ್ಯಗಳು ಕೆಲವು ಷರತ್ತುಗಳನ್ನು ಪಾಲಿಸಬೇಕಾಗಿತ್ತು.

- ಸೈನಿಕ ಸಹಾಯ ಪದ್ಧತಿಯ ಒಪ್ಪಂದದಲ್ಲಿ ಒಳಗೊಂಡ ದೇಶೀಯ ರಾಜನು ಕಂಪೆನಿಯ ಸೈನ್ಯದ ಒಂದು ತುಕಡಿಯನ್ನು ತನ್ನ ರಾಜ್ಯದಲ್ಲಿ ಶಾಶ್ವತವಾಗಿ ನೆಲೆನಿಲ್ಲಿಸಬೇಕು.
- ಕಂಪೆನಿಯ ಆ ಸೈನಿಕ ತುಕಡಿಯ ಎಲ್ಲ ಖರ್ಚು ವೆಚ್ಚಗಳನ್ನು ಒಪ್ಪಂದದಲ್ಲಿ ಏರ್ಪಡುವ ರಾಜನು ಭರಿಸಬೇಕು.
- ಕಂಪೆನಿಯ ಅನುಮತಿಯಿಲ್ಲದೆ ಯುರೋಪಿನ ಇತರ ರಾಷ್ಟ್ರಗಳೊಂದಿಗೆ ಮೈತ್ರಿ ಮಾಡಿಕೊಳ್ಳುವಂತಿಲ್ಲ.

- ಬ್ರಿಟಿಷ್ ಗವರ್ನರ್ ಜನರಲ್‌ನೊಂದಿಗೆ ಮಾತುಕತೆ ನಡೆಸದೆ ಒಪ್ಪಂದದಲ್ಲಿ ಏರ್ಪಟ್ಟ ರಾಜರುಗಳು ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳಬಾರದು.
- ಒಪ್ಪಂದದಲ್ಲಿ ಏರ್ಪಟ್ಟ ರಾಜನು ತನ್ನ ರಾಜ್ಯದಲ್ಲಿ ಒಬ್ಬ ಬ್ರಿಟಿಷ್ ರೆಸಿಡೆಂಟನಿಗೆ ನೆಲೆಸಲು ಅವಕಾಶ ಮಾಡಿಕೊಡಬೇಕು.
- ಈ ಷರತ್ತುಗಳನ್ನು ಉಲ್ಲಂಘಿಸಿದರೆ ದೇಶೀಯ ರಾಜ್ಯವನ್ನು ಬ್ರಿಟಿಷರಿಗೆ ಸ್ವಾಧೀನಪಡಿಸಬಹುದು.

## ದತ್ತುಪುತ್ರರಿಗೆ ಹಕ್ಕಿಲ್ಲ ನಿಯಮ (Doctrine of Lapse)

ಒಂದು ದೇಶೀಯ ರಾಜ್ಯದ ಆಡಳಿತಾಧಿಕಾರಿಗೆ ಉತ್ತರಾಧಿಕಾರಿಯಾಗಿ ಗಂಡು ಮಕ್ಕಳು ಇಲ್ಲದೆ ಮರಣ ಹೊಂದಿದರೆ ಬೇರೊಂದು ಕುಟುಂಬದಿಂದ ಗಂಡು ಮಗುವನ್ನು ಉತ್ತರಾಧಿಕಾರಿಯಾಗಿ ದತ್ತು ಪಡೆಯುವ ಸಂಪ್ರದಾಯವಿತ್ತು. ಆದರೆ ಬ್ರಿಟಿಷ್ ಗವರ್ನರ್ ಜನರಲ್ ಆಗಿದ್ದ ಡಾಲ್‌ಹೌಸಿ ಪ್ರಭು ಜಾರಿಗೊಳಿಸಿದ ದತ್ತು ಪುತ್ರರಿಗೆ ಹಕ್ಕಿಲ್ಲ ಎಂಬ ನಿಯಮದ ಪ್ರಕಾರ ರಾಜನಿಗೆ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಅಧಿಕಾರವು ಇಲ್ಲದಾಯಿತು. ಉತ್ತರಾಧಿಕಾರಿಗಳು ಇಲ್ಲದಿದ್ದರೆ ಆ ದೇಶೀಯ ರಾಜ್ಯವು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ನಿಯಂತ್ರಣಕ್ಕೊಳಪಡುತ್ತದೆ.

ಈ ಎರಡು ರೀತಿಯ ನಿಯಮಗಳಿಗೆ ಅನುಸಾರವಾಗಿ ಅನೇಕ ದೇಶೀಯ ರಾಜ್ಯಗಳು ಬ್ರಿಟಿಷ್ ಭಾರತದೊಂದಿಗೆ ವಿಲೀನಗೊಂಡವು. ದುರಾಡಳಿತದ ಆರೋಪದ ಮೇರೆಗೆ ಅವಧ್ (ಔದ್) ರಾಜ್ಯವನ್ನು ಬ್ರಿಟಿಷ್ ಭಾರತಕ್ಕೆ ಸೇರಿಸಲಾಯಿತು.



ಚಿತ್ರ 1.15 • ಮಂಗಲ್ ಪಾಂಡೆ



ಚಿತ್ರ 1.16 • ಝಾನ್ಸಿ ರಾಣಿ ಲಕ್ಷ್ಮೀಭಾಯಿ



ಚಿತ್ರ 1.17 • ಬಹದ್ದೂರ್ ಷಾ II

*ಸೈನ್ಯ ಸಹಾಯ ವ್ಯವಸ್ಥೆ ಮತ್ತು ದತ್ತುಪುತ್ರರಿಗೆ ಹಕ್ಕಿಲ್ಲ ನಿಯಮ ಎಂಬಿವುಗಳಿಂದಾಗಿ ಭಾರತದ ದೇಶೀಯ ರಾಜ್ಯಗಳನ್ನು ಬ್ರಿಟಿಷರು ಹೇಗೆ ವಶಪಡಿಸಿಕೊಂಡರು ಎಂಬುದನ್ನು ಚರ್ಚಿಸಿರಿ.*

ಈಸ್ಟ್ ಇಂಡಿಯಾ ಕಂಪೆನಿಯಲ್ಲಿದ್ದ ಭಾರತೀಯ ಸೈನಿಕರಿಗೆ ಬ್ರಿಟಿಷರೊಂದಿಗಿದ್ದ ಅಸಂತೃಪ್ತಿಯೇ 1857ರ ದಂಗೆಯ ಇನ್ನೊಂದು ಕಾರಣ.

ಬ್ರಿಟಿಷ್ ಸೈನಿಕರಂತೆ ಸಮರ್ಥರಾಗಿದ್ದರೂ ಭಾರತೀಯ ಸೈನಿಕರಿಗೆ ಕಡಿಮೆ ವೇತನ, ಕಳಪೆ ಆಹಾರ ಮತ್ತು ವಸತಿ ಸೌಕರ್ಯಗಳನ್ನು ಒದಗಿಸಲಾಗುತ್ತಿತ್ತು. ಈ ಅತೃಪ್ತಿಕರವಾದ ಸಂದರ್ಭದಲ್ಲಿ ಕಂಪೆನಿಯು ಸೈನಿಕರಿಗೆ ಹೊಸ ಮಾದರಿಯ ಎನ್‌ಫೀಲ್ಡ್ ಕೋವಿಗಳನ್ನು ಪೂರೈಸಿತು. ಅದರ ಮದ್ದುಗುಂಡುಗಳಿಗೆ ಗ್ರೀಸ್ ಹಚ್ಚಿದ ಕಾಗದದ ಪೊಟ್ಟಣವಿತ್ತು. ಕೋವಿಗೆ ಮದ್ದುಗುಂಡುಗಳನ್ನು ತುಂಬಿಸುವ ಮೊದಲು ಆ ಪೊಟ್ಟಣವನ್ನು ಕಚ್ಚಿ ಬೇರ್ಪಡಿಸಬೇಕಿತ್ತು. ಪೊಟ್ಟಣಕ್ಕೆ ದನದ ಮತ್ತು ಹಂದಿಯ ಕೊಬ್ಬಿನಿಂದ ತಯಾರಿಸಿದ ಗ್ರೀಸ್‌ನ್ನು ಲೇಪಿಸಲಾಗಿದೆ ಎಂಬ ವದಂತಿಯು ಸೈನಿಕರೆಡೆಯಲ್ಲಿ ಪ್ರಚಾರವಾಯಿತು. ಇದು ಅವರ ಧಾರ್ಮಿಕ ನಂಬಿಕೆಗೆ ದಕ್ಕೆಯನ್ನುಂಟುಮಾಡಿತು. ಬರಾಕ್‌ಪುರದ ಸೈನಿಕನಾಗಿದ್ದ ಮಂಗಲ್ ಪಾಂಡೆಯು ಇದಕ್ಕೆದುರಾಗಿ ಮೊತ್ತಮೊದಲು ಪ್ರತಿಭಟಿಸಿದನು. ಕೋವಿಯಲ್ಲಿ ಮದ್ದುಗುಂಡನ್ನು ತುಂಬಿಸಲು ನಿರ್ಬಂಧಿಸಿದ ಬ್ರಿಟಿಷ್ ಸೈನಿಕನನ್ನು ಆಕ್ರಮಿಸಿದುದಕ್ಕಾಗಿ ಮಂಗಲ್ ಪಾಂಡೆಯನ್ನು 1857 ಏಪ್ರಿಲ್ 8 ರಂದು ಬ್ರಿಟಿಷರು ನೇಣುಕಂಬಕ್ಕೆ ಏರಿಸಿದರು.

1857ರ ದಂಗೆಯು ಉತ್ತರ ಪ್ರದೇಶದ ಮೀರತ್‌ನಲ್ಲಿ ಆರಂಭವಾಯಿತು. ಮಂಗಲ್ ಪಾಂಡೆಯ ಹತ್ಯೆಯ ನಂತರ ಸಂಘಟಿತರಾದ ಭಾರತೀಯ ಸೈನಿಕರು ದೆಹಲಿಗೆ ಆಗಮಿಸಿ ಆಡಳಿತಾಧಿಕಾರಿಯಾದ ಮೊಗಲ್ ದೊರೆ 2ನೇ ಬಹದ್ದೂರ್ ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದರು. ಸೈನಿಕರಿಲ್ಲದೆ ತಮ್ಮ ಅಧಿಕಾರವನ್ನು ಕಳೆದುಕೊಂಡ ದೇಶೀಯ ರಾಜ್ಯಗಳ ಆಡಳಿತಗಾರರು, ಕೃಷಿಕರು ಮತ್ತು ಇತರ ಜನರು ಉತ್ತರ ಭಾರತದ ಅನೇಕ ಭಾಗಗಳಲ್ಲಿ ದಂಗೆಯಲ್ಲಿ ಭಾಗವಹಿಸಿದರು. ಕೆಲವೇ ತಿಂಗಳುಗಳಲ್ಲಿ ಬ್ರಿಟಿಷರು ಎಲ್ಲಾ ಕಡೆಗಳಲ್ಲಿ ನಡೆಯುತ್ತಿದ್ದ ದಂಗೆಗಳನ್ನು ಹತ್ತಿಕ್ಕಿದರು. ಅನೇಕ ಭಾರತೀಯರನ್ನು ಗುಂಡಿಕ್ಕಿ ಕೊಂದರು. ಹಲವರು ಫಿರಂಗಿ ದಾಳಿಗೆ ಬಲಿಯಾದರು. ಸಾವಿರಾರು ಜನರನ್ನು ಮರದ ಕೊಂಬೆಗಳಲ್ಲಿ ಜೀವಂತವಾಗಿ ತಲೆಕೆಳಗಾಗಿ ನೇತುಹಾಕಿದರು. ಔದ್ (ಅವಧ್) ನಲ್ಲಿ ಮಾತ್ರ ನಡೆದ ಗಲಭೆಯಲ್ಲಿ ಸಾವನ್ನಪ್ಪಿದ ಒಂದೂವರೆ ಲಕ್ಷ ಜನರಲ್ಲಿ ಒಂದು ಲಕ್ಷ ಜನರೂ ಜನಸಾಮಾನ್ಯರಾಗಿದ್ದರು. ಭಾರತದ ವಿವಿಧ ಜನ ವಿಭಾಗಗಳ ಏಕತಾ ಮನೋಭಾವಕ್ಕೆ ಬ್ರಿಟಿಷರ ಕ್ರೂರ ದಬ್ಬಾಳಿಕೆಯನ್ನು ಬಲವಾಗಿ ವಿರೋಧಿಸಲು ಸಾಧ್ಯವಾಯಿತು. ದಂಗೆ ನಡೆಯದ ಕಡೆಯೂ ಬಂಡಾಯಗಾರರಿಗೆ ಜನಸಾಮಾನ್ಯರ ಬೆಂಬಲವಿತ್ತು. ದಂಗೆಯ ನಿಜವಾದ ಶಕ್ತಿಯು ಹಿಂದೂ-ಮುಸ್ಲಿಂ ಏಕತೆಯಾಗಿತ್ತು.

ಕನ್ವರ್ ಸಿಂಗ್‌ನ ಕಥೆಯನ್ನು ನೀವು ಓದಿದಿರಲ್ಲವೆ? ಇದೇ ರೀತಿಯಲ್ಲಿ ಅನೇಕ ದೇಶಪ್ರೇಮಿಗಳು ಬ್ರಿಟಿಷರಿಗೆ ಎದುರಾಗಿ ಹೋರಾಡಿದ್ದಾರೆ. ಅವರಲ್ಲಿ ಕೆಲವರನ್ನು ನಾವು ಪರಿಚಯಿಸಿಕೊಳ್ಳೋಣ.



*ಚಿತ್ರ 1.18* • ನಾನಾ ಸಾಹಿಬ್



*ಚಿತ್ರ 1.19* • ತಾಂತ್ಯಾ ಟೋಪಿ



*ಚಿತ್ರ 1.20* • ಬೀಗಂ ಹಸ್ರತ್ ಮಹಲ್

| ದಂಗೆ ನಡೆದ ಸ್ಥಳ | ದಂಗೆಗೆ ನೇತೃತ್ವ ನೀಡಿದವರು | ವಿಶೇಷತೆಗಳು |
|---|---|---|
| ದೆಹಲಿ | 2ನೇ ಬಹದ್ದೂರ್ ಷಾ | • ದಂಗೆಗಾರರು ಭಾರತದ ಚಕ್ರವರ್ತಿಯಾಗಿ ಘೋಷಿಸಿದರು.<br>• ದಂಗೆಯ ನಂತರ ಬ್ರಿಟಿಷರು ರಂಗೂನಿಗೆ ಗಡೀಪಾರು ಮಾಡಿದರು. |
| | ಜನರಲ್ ಬಖ್ತ್‌ಖಾನ್ | • 2ನೇ ಬಹದ್ದೂರ್‌ಷಾನ ಮಿಲಿಟರಿ ಜನರಲ್ |
| ಝಾನ್ಸಿ | ರಾಣಿ ಲಕ್ಷ್ಮೀಬಾಯಿ | • ಝಾನ್ಸಿಯ ಆಡಳಿತಾಧಿಕಾರಿ |
| ಕಾನ್ಪುರ್ | ನಾನಾ ಸಾಹಿಬ್ | • ಮರಾಠಾದ ಆಡಳಿತಾಧಿಕಾರಿ |
| | ತಾಂತ್ಯಾ ಟೋಪಿ | • ನಾನಾ ಸಾಹಿಬ್‌ನ ಸೇನಾ ಮುಖ್ಯಸ್ಥ<br>• ಗೆರಿಲ್ಲಾ ಯುದ್ಧ ತಂತ್ರಗಳನ್ನು ಪ್ರಯೋಗ |
| ಲಕ್ನೋ | ಬೇಗಂ ಹಸ್ರತ್ ಮಹಲ್ | • ಔದ್ (ಅವಧ್) ನ ಆಡಳಿತಾಧಿಕಾರಿ |
| ಬಿಹಾರದ ಆರಾ | ಕನ್ವರ್ ಸಿಂಗ್ | • ಜಗದೀಶ್ ಪುರದ ರೈತ ಪ್ರಭು (ಜಮೀನ್ದಾರ) |

### *1857ರ ದಂಗೆ : ಚಲನಚಿತ್ರವೂ ಸಾಹಿತ್ಯವೂ*

*ಮೋಹನಸಿನ್ಹಾ ಅವರ **1857**, ಕೇತನ್ ಮೆಹ್ತಾ ನಿರ್ದೇಶಿಸಿದ **ಮಂಗಲ್ ಪಾಂಡೆ : ದ ರೈಸಿಂಗ್** ಕ್ರಿಶ್, ಜಗರ್ಲಾ ಮುಡಿಯರ **ಮಣಿಕರ್ಣಿಕ – ದ ಕ್ವೀನ್ ಆಫ್ ಝಾನ್ಸಿ** ಎಂಬೀ ಚಲನಚಿತ್ರಗಳು 1857ರ ದಂಗೆಯ ಹಿನ್ನೆಲೆಯಲ್ಲಿ ನಿರ್ಮಿಸಿದವುಗಳಾಗಿವೆ. ಮಹಾಶ್ವೇತಾ ದೇವಿಯ **ಝಾನ್ಸಿ ರಾಣಿ**, ಮಲಯಾಟ್ಟೂರ್ ರಾಮಕೃಷ್ಣನ್ ರ **ಅಮೃತಂ ತೇಡಿ** ಎಂಬೀ ಕಾದಂಬರಿಗಳೂ 1857ರ ದಂಗೆಯ ಆಧಾರದಲ್ಲಿ ರಚಿಸಿದವುಗಳಾಗಿವೆ.*

1857ರ ದಂಗೆಯ ಕೆಲವು ಪರಿಮಿತಿಗಳು ಇಂತಿವೆ.

- ದಂಗೆ ಉತ್ತರ ಭಾರತದ ಕೆಲವು ಭಾಗಗಳಲ್ಲಿ ಮಾತ್ರವೇ ಸೀಮಿತವಾಗಿತ್ತು.
- ದಂಗೆಗೆ ಸಂಘಟಿತ ನೇತೃತ್ವ ಇರಲಿಲ್ಲ.
- ಕಂಪೆನಿಯ ಸೈನ್ಯವು ದಂಗೆಕಾರರಿಗಿಂತ ಉತ್ತಮ ಸೈನಿಕ ಸಾಮರ್ಥ್ಯ ಹಾಗೂ ಸಂಘಟನಾ ಹಿರಿಮೆಯನ್ನು ಹೊಂದಿತ್ತು.
- ಭಾರತದ ಮಧ್ಯಮ ವರ್ಗದ ಹೆಚ್ಚಿನವರು ದಂಗೆಯನ್ನು ಬೆಂಬಲಿಸಲಿಲ್ಲ.
- ದೇಶೀಯ ರಾಜ್ಯಗಳ ಆಡಳಿತಗಾರರ ಒಂದು ವಿಭಾಗವು ದಂಗೆಯನ್ನು ಬೆಂಬಲಿಸಲಿಲ್ಲ.

1857ರ ದಂಗೆಯನ್ನು ಬ್ರಿಟಿಷರು ಹತ್ತಿಕ್ಕಿದ್ದರೂ ಅದು ನಂತರದ ಭಾರತದ ಚರಿತ್ರೆಯಲ್ಲಿ ಗಮನಾರ್ಹವಾದ ಪ್ರಭಾವವನ್ನು ಬೀರಿತು. ಅವುಗಳು ಯಾವುವು ಎಂದು ಪರಿಶೀಲಿಸೋಣ.

- ಭಾರತದಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ ಕೊನೆಗೊಂಡಿತು.
- ಭಾರತದ ಆಡಳಿತವು ಬ್ರಿಟಿಷ್ ರಾಣಿಯ ನೇರ ನಿಯಂತ್ರಣಕ್ಕೆ ಒಳಪಟ್ಟಿತು.
- ಗವರ್ನರ್ ಜನರಲ್ ಎಂಬ ಪದದ ಬದಲಾಗಿ ವೈಸರಾಯ್ ಎಂಬ ಪದವಿ ಜಾರಿಗೆ ಬಂತು.
- ಭಾರತದಲ್ಲಿ ಅನಂತರದ ದೇಶೀಯ ಹೋರಾಟಗಳಿಗೆ ಪ್ರಚೋದನೆಯಾಯಿತು.

ವ್ಯಾಪಾರಕ್ಕಾಗಿ ಬಂದ ವಿದೇಶಿಯರು ಭಾರತದಲ್ಲಿ ರಾಜಕೀಯ ಅಧಿಕಾರವನ್ನು ಗಳಿಸಿದರು. ಇದಕ್ಕೆ ಎದುರಾಗಿ ಭಾರತದ ವಿವಿಧ ಪ್ರದೇಶಗಳಲ್ಲಿನ ಜನವಿಭಾಗಗಳು ನಡೆಸಿದ ಪ್ರತಿಭಟನೆ ಮತ್ತು ಚಳುವಳಿಗಳು ನಂತರದ ರಾಷ್ಟ್ರೀಯ ಹೋರಾಟಗಳಿಗೆ ಸ್ಫೂರ್ತಿಯನ್ನು ನೀಡಿದವು.

## ಮುಂದುವರಿದ ಚಟುವಟಿಕೆಗಳು

- ಪೋರ್ಚುಗೀಸರಿಗಿಂತ ಮೊದಲು ಭಾರತವನ್ನು ಸಂದರ್ಶಿಸಿದ ವಿದೇಶಿಯರ ಕುರಿತಾದ ವಿವರಣೆಗಳು ಹಾಗೂ ಅವರ ಪ್ರವಾಸ ಮಾರ್ಗಗಳು, ಯಾತ್ರಾ ವಿವರಣೆಗಳು ಮೊದಲಾದವುಗಳನ್ನು ಕಂಡುಹಿಡಿದು ಒಂದು ಪತ್ರಿಕೆಯನ್ನು ತಯಾರಿಸಿರಿ.
- ಭಾರತದ ವಿವಿಧ ಭಾಗಗಳಲ್ಲಿ ನಡೆದ ಬ್ರಿಟಿಷ್ ವಿರೋಧಿ ರೈತ, ಬುಡಕಟ್ಟು, ಸ್ತ್ರೀಶಕ್ತಿ ಮೊದಲಾದ ವಿಚಾರಗಳಿಗೆ ಸಂಬಂಧಿಸಿದ ವಾರ್ತೆಗಳನ್ನೂ ಚಿತ್ರಗಳನ್ನೂ ವಿವಿಧ ಮೂಲಗಳಿಂದ ಸಂಗ್ರಹಿಸಿ ಒಂದು ಲೇಖನ ತಯಾರಿಸಿರಿ.
- 1857ರ ದಂಗೆಯ ಕೇಂದ್ರಗಳು ಹಾಗೂ ಅದಕ್ಕೆ ನೇತೃತ್ವ ನೀಡಿದವರ ಕುರಿತು ಒಂದು ಡಿಜಿಟಲ್ ಆಲ್ಬಂ ತಯಾರಿಸಿರಿ.
- ಭಾರತದಲ್ಲಿ ನಡೆದ ಬ್ರಿಟಿಷ್ ವಿರೋಧಿ ದಂಗೆಗಳ ಆಧಾರದಲ್ಲಿ ನಿರ್ಮಿಸುವ ಡೋಕ್ಯುಮೆಂಟರಿಗೆ ಸ್ಕ್ರಿಪ್ಟನ್ನು ತಯಾರಿಸಿರಿ.

ಅಧ್ಯಾಯ 2

# ರಾಷ್ಟ್ರೀಯ ಚಳುವಳಿಯ ಆವಿರ್ಭಾವದೆಡೆಗೆ





*ಚಿತ್ರ 2.1*

ಈ ಸಂಭಾಷಣೆಯನ್ನು ಗಮನಿಸಿದಿರಲ್ಲವೇ. ಇದು ಬಂಗಾಳಿ ಸಾಹಿತಿ ಮತ್ತು ಸಮಾಜ ಸುಧಾರಕರಾದ ದೀನಬಂಧು ಮಿತ್ರ ರಚಿಸಿದ 'ನೀಲ್ ದರ್ಪಣ್' ಎಂಬ ನಾಟಕದ ಭಾಗವಾಗಿದೆ. ಕಳೆದ ಅಧ್ಯಾಯದಲ್ಲಿ ನಾವು ಚರ್ಚಿಸಿದ ನೀಲ ಕೃಷಿಕರ ಶೋಷಣೆಗೆದುರಾಗಿ ಮೇಲಿನ ಕಥಾಪಾತ್ರಗಳು ಮಾತನಾಡುತ್ತಿವೆ. ಶೋಷಣೆಗೆದುರಾಗಿ ಭಾರತೀಯರು ಒಗ್ಗಟ್ಟಾಗಬೇಕಾದ ಅನಿವಾರ್ಯತೆಯನ್ನು ಅವರು ಇಲ್ಲಿ ಒತ್ತಿ ಹೇಳುತ್ತಿದ್ದಾರೆ. ಈ ಸಂಭಾಷಣೆಯಿಂದ ಏನೆಲ್ಲ ತಿಳಿದುಕೊಳ್ಳಬಹುದು?

- ವಿದೇಶಿ ಆಧಿಪತ್ಯಕ್ಕೆದುರಾಗಿ ಹೋರಾಡಬೇಕಾದ ಅನಿವಾರ್ಯತೆ
- ಆರ್ಥಿಕ ಶೋಷಣೆಯಿಂದ ಮುಕ್ತಿ.
- 

ಸ್ವಾತಂತ್ರ್ಯ ಲಭಿಸುವ ಮೊದಲು ಭಾರತವು ಅನೇಕ ದೇಶೀಯ ರಾಜ್ಯಗಳಾಗಿ ವಿಭಜಿಸಲ್ಪಟ್ಟಿತ್ತು. ಜಾತಿ, ಮತ, ವೇಷಭೂಷಣ, ಭಾಷೆ, ಸಂಸ್ಕೃತಿ ಮೊದಲಾದ ಎಲ್ಲಾ ವಲಯಗಳಲ್ಲೂ ವಿಭಾಗೀಯತೆಯು ಅಸ್ತಿತ್ವದಲ್ಲಿತ್ತು. ಆದರೆ ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಇಂತಹ ವಿಭಾಗೀಯತೆಗೆ ಅತೀತವಾಗಿ ಭಾರತೀಯರಲ್ಲಿ ಏಕತಾ ಮನೋಭಾವ ರೂಪುಗೊಂಡಿತು. ತೀವ್ರವಾದ ಬ್ರಿಟಿಷ್ ವಿರೋಧಿ ಮನೋಭಾವವು ಭಾರತೀಯರ ಈ ಏಕತಾ ಭಾವನೆಯ ಅಡಿಪಾಯವಾಗಿತ್ತು. ಈ ಏಕತಾ ಭಾವನೆಯನ್ನು ರಾಷ್ಟ್ರೀಯತೆ ಎಂದು ಅರ್ಥೈಸಿಕೊಳ್ಳಬಹುದು. ಭಾರತದ ರಾಷ್ಟ್ರೀಯತೆಯನ್ನು ಬಲಗೊಳಿಸಲು ಸಹಾಯಕವಾದ ಸನ್ನಿವೇಶಗಳು ಯಾವುವೆಂದು ಪರಿಶೀಲಿಸೋಣ.

## ಆರ್ಥಿಕ ಧೋರಣೆಗಳು

ಭಾರತದ ವಿವಿಧ ದೇಶೀಯ ರಾಜ್ಯಗಳನ್ನು ಬ್ರಿಟಿಷರು ವಶಪಡಿಸಿದುದರ ಕುರಿತು ಮತ್ತು ಅವರು ಜಾರಿಗೊಳಿಸಿದ ಆರ್ಥಿಕ ಧೋರಣೆಗಳ ಕುರಿತು ಹಿಂದಿನ ತರಗತಿಗಳಲ್ಲಿ ಚರ್ಚಿಸಿದ್ದೇವಲ್ಲವೇ. ಬ್ರಿಟಿಷರ ಕೈಗಾರಿಕೆಗಳಿಗೆ ಅಗತ್ಯವಿರುವ ಕಚ್ಚಾವಸ್ತುಗಳನ್ನು ಸಂಗ್ರಹಿಸುವ ಕೇಂದ್ರವಾಗಿ ಮತ್ತು ಬ್ರಿಟಿಷ್ ಉತ್ಪನ್ನಗಳನ್ನು ಮಾರಾಟ ಮಾಡುವ ಮಾರುಕಟ್ಟೆಯಾಗಿ ಭಾರತ ಬದಲಾಯಿತು. ಆರ್ಥಿಕ ಶೋಷಣೆಯು ಬ್ರಿಟಿಷರ ಮುಖ್ಯ ಉದ್ದೇಶವಾಗಿತ್ತು. ಅದಕ್ಕಾಗಿ ಅವರು ಸ್ವೀಕರಿಸಿದ ಧೋರಣೆಗಳು ಭಾರತದಲ್ಲಿ ನಿರುದ್ಯೋಗ ಮತ್ತು ಬಡತನಕ್ಕೆ ಕಾರಣವಾದವು. ಇದರ ಪರಿಣಾಮವಾಗಿ ಕೃಷಿಕರು, ಕೈಕಸುಬುದಾರರು, ಸಣ್ಣ ವ್ಯಾಪಾರಿಗಳು, ಬುಡಕಟ್ಟು ವಿಭಾಗ ಮೊದಲಾದವರು ಬ್ರಿಟಿಷರ ವಿರುದ್ಧ ಹೋರಾಟವನ್ನು ಆರಂಭಿಸಿದರು. ದಾದಾಭಾಯಿ ನವರೋಜಿ, ಆರ್.ಸಿ. ದತ್, ಮಹಾದೇವ ಗೋವಿಂದ ರಾನಡೆ ಮೊದಲಾದವರು ಬ್ರಿಟಿಷರ ಆರ್ಥಿಕ ಶೋಷಣೆಯ ಕುರಿತು ಆಳವಾದ ಅಧ್ಯಯನ ನಡೆಸಿದವರಾಗಿದ್ದರು. ಇವರು ಭಾರತದ ರಾಷ್ಟ್ರೀಯ ಚಳುವಳಿಯ ಆರಂಭಕಾಲದ ನೇತಾರರಾಗಿದ್ದರು.

### ಭಾರತದ ವೃದ್ಧ ಪಿತಾಮಹ



*ಚಿತ್ರ 2.1 • ದಾದಾಭಾಯಿ ನವರೋಜಿ*

*'ಪಾವರ್ಟಿ ಆಂಡ್ ಅನ್ ಬ್ರಿಟಿಷ್ ರೂಲ್ ಇನ್ ಇಂಡಿಯಾ'ವು 'ಭಾರತದ ವೃದ್ಧ ಪಿತಾಮಹ' (Grand Old Man of India) ಎಂದು ಪ್ರಸಿದ್ಧರಾದ ದಾದಾಭಾಯಿ ನವರೋಜಿಯವರ ಪುಸ್ತಕವಾಗಿದೆ. ಬ್ರಿಟಿಷರು ಭಾರತದ ಸಂಪತ್ತನ್ನು ಸೋರಿಕೆ ಮಾಡುತ್ತಿದ್ದಾರೆಂಬ ವಾದವನ್ನು (ಸೋರಿಕೆ ಸಿದ್ಧಾಂತ - Drain Theory) ಈ ಪುಸ್ತಕದ ಮೂಲಕ ಅವರು ಮಂಡಿಸಿದರು. ಬ್ರಿಟಿಷ್ ಆಡಳಿತದ ಆರ್ಥಿಕ ದುಷ್ಪರಿಣಾಮಗಳನ್ನು ಚರ್ಚಾವಿಷಯವನ್ನಾಗಿಸಲು ಈ ಮೂಲಕ ಸಾಧ್ಯವಾಯಿತು.*

## ಪಾಶ್ಚಾತ್ಯ ವಿದ್ಯಾಭ್ಯಾಸ

ಭಾರತದಲ್ಲಿ ಆಧುನಿಕ ಶಿಕ್ಷಣವು 19ನೇ ಶತಮಾನದಲ್ಲಿ ಆರಂಭವಾಯಿತು. ಬ್ರಿಟಿಷರ ಹಿರಿಮೆಯನ್ನು ಎತ್ತಿ ಹಿಡಿಯಲು, ಭಾರತೀಯರನ್ನು ಸಾಂಸ್ಕೃತಿಕವಾಗಿ ತಮಗೆ ವಿಧೇಯರನ್ನಾಗಿಸಲು ಮತ್ತು ಬ್ರಿಟಿಷರಿಗೆ ವಿಧೇಯರಾದ ಭಾರತೀಯರ ವಿಭಾಗವೊಂದನ್ನು ರೂಪಿಸಲು ಅವರು ಇಂಗ್ಲಿಷ್ ವಿದ್ಯಾಭ್ಯಾಸವನ್ನು ಆರಂಭಿಸಿದರು. ಆದರೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪಡೆದ ಭಾರತೀಯರು ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ಸಮಾನ ನ್ಯಾಯ, ವೈಜ್ಞಾನಿಕ ಪ್ರಜ್ಞೆ, ನಾಗರಿಕ ಹಕ್ಕುಗಳು ಮೊದಲಾದವುಗಳ ಕುರಿತು ಪ್ರಜ್ಞಾವಂತರಾದರು.



*ಚಿತ್ರ 2.3 • ಮಹಾದೇವ ಗೋವಿಂದ ರಾನಡೆ*

ನೂತನ ಆಶಯಗಳನ್ನು ಅರ್ಥೈಸಿಕೊಂಡ ಭಾರತೀಯರು ತಮ್ಮ ದೇಶವು ಬ್ರಿಟನಿನ ಅಧೀನಕ್ಕೊಳಗಾಗಲು ಕಾರಣವೇನೆಂದು ಚಿಂತಿಸತೊಡಗಿದರು. ಬ್ರಿಟಿಷ್ ಆಧಿಪತ್ಯವನ್ನು ಕೊನೆಗೊಳಿಸುವುದರ ಅಗತ್ಯದ ಕುರಿತು ಅವರು ನಿರಂತರವಾಗಿ ಚರ್ಚಿಸಿದರು. ದೇಶದ ವಿವಿಧ ಭಾಗಗಳಿಂದ ಬರುವವರಿಗೆ ಆಶಯ ವಿನಿಮಯದ ಸಾಮಾನ್ಯ ಮಾಧ್ಯಮವಾಗಿ ಇಂಗ್ಲಿಷ್ ಭಾಷೆಯು ಬದಲಾಯಿತು. ಪಾಶ್ಚಾತ್ಯ ವಿದ್ಯಾಭ್ಯಾಸವು ಭಾರತೀಯರಿಗೆ ದೇಶದ ಆರ್ಥಿಕ ಹಾಗೂ ಸಾಮಾಜಿಕ ದುಸ್ಥಿತಿಗಳ ಅರಿವನ್ನು ಮೂಡಿಸಲು ಸಹಾಯಕವಾಯಿತು. ಇದು ರಾಷ್ಟ್ರೀಯತೆಯ ಉಗಮಕ್ಕೆ ಕಾರಣವಾಯಿತು.



*ಚಿತ್ರ 2.4 • ಆರ್.ಸಿ. ದತ್*

*ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸುವಲ್ಲಿ ಪಾಶ್ಚಾತ್ಯ ವಿದ್ಯಾಭ್ಯಾಸವು ಎಷ್ಟರ ಮಟ್ಟಿಗೆ ಸಹಾಯಕವಾಯಿತು? ಚರ್ಚಿಸಿ, ಟಿಪ್ಪಣಿ ತಯಾರಿಸಿ.*

## ಸಾಹಿತ್ಯ ಮತ್ತು ವಾರ್ತಾಪತ್ರಿಕೆಗಳು

ಭಾರತದಲ್ಲಿ ರಾಷ್ಟ್ರೀಯತೆಯನ್ನು ಬೆಳೆಸುವಲ್ಲಿ ಸಾಹಿತ್ಯಕೃತಿಗಳು ಮತ್ತು ವಾರ್ತಾಪತ್ರಿಕೆಗಳು ಪ್ರಮುಖ ಪಾತ್ರ ವಹಿಸಿದುವು. ಬ್ರಿಟಿಷ್ ವಿರೋಧಿ ಮನೋಭಾವವು ಸಾಹಿತ್ಯದಲ್ಲಿ ಪ್ರತಿಫಲಿಸಿದುವು. ದೇಶದ ಮೂಲೆಮೂಲೆಗಳಲ್ಲೂ ಜನರು ಅನುಭವಿಸುತ್ತಿದ್ದ ಕಷ್ಟಕಾರ್ಪಣ್ಯಗಳು, ಅವಗಣನೆ, ಶೋಷಣೆ ಮೊದಲಾದುವು ಸಾಹಿತ್ಯ ಕೃತಿಗಳಲ್ಲಿನ ಪ್ರತಿಪಾದಿತ ವಿಷಯಗಳಾಗಿ ಬದಲಾದುವು. ಆ ಕಾಲದ ಪ್ರಮುಖ ಸಾಹಿತಿಗಳಾದ ಧೀನಬಂಧು ಮಿತ್ರ, ಬಂಕಿಮಚಂದ್ರ ಚಟರ್ಜಿ, ರವೀಂದ್ರನಾಥ್ ಠಾಗೋರ್, ವಳ್ಳತ್ತೋಳ್ ನಾರಾಯಣ ಮೆನೋನ್, ಸುಬ್ರಹ್ಮಣ್ಯ ಭಾರತಿ ಮೊದಲಾದವರ ಸಾಹಿತ್ಯ ಕೃತಿಗಳು ಜನರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸುವುದರಲ್ಲಿ ಪ್ರಧಾನ ಪಾತ್ರ ವಹಿಸಿದುವು.

| ಪ್ರಮುಖ ರಾಷ್ಟ್ರೀಯ ಸಾಹಿತಿಗಳು | ಭಾಷೆ |
|---|---|
| • ಬಂಕಿಮಚಂದ್ರ ಚಟರ್ಜಿ<br>• ರವೀಂದ್ರನಾಥ್ ಠಾಗೋರ್ | • ಬಂಗಾಳಿ |
| • ಲಕ್ಷ್ಮಿನಾಥ್ ಬೆಸ್ಬರುವಾ | • ಅಸ್ಸಾಮಿ |
| • ವಿಷ್ಣುಶಾಸ್ತ್ರಿ ಚಿಪ್ಲುಂಕರ್ | • ಮರಾಠಿ |



ಚಿತ್ರ 2.5 • ದೀನಬಂಧು ಮಿತ್ರ



ಚಿತ್ರ 2.6 • ಬಂಕಿಮ್‌ಚಂದ್ರ ಚಟರ್ಜಿ



ಚಿತ್ರ 2.7 • ರವೀಂದ್ರನಾಥ ಠಾಗೋರ್



ಚಿತ್ರ 2.8 • ವಳ್ಳತ್ತೋಳ್ ನಾರಾಯಣ ಮೆನೋನ್



ಚಿತ್ರ 2.9 • ಸುಬ್ರಹ್ಮಣ್ಯ ಭಾರತಿ

| | |
|---|---|
| • ಸುಬ್ರಹ್ಮಣ್ಯ ಭಾರತಿ | • ತಮಿಳು |
| • ಭಾರತೇಂದು ಹರಿಶ್ಚಂದ್ರ<br>• ಪ್ರೇಮ್‌ಚಂದ್ | • ಹಿಂದಿ |
| • ಅಲ್ತಾಫ್ ಹುಸೈನ್ ಹಾಲಿ | • ಉರ್ದು |
| • ವಳ್ಳತ್ತೋಳ್ ನಾರಾಯಣ ಮೆನೋನ್ | • ಮಲಯಾಳಂ |

ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಅನೇಕ ವಾರ್ತಾಪತ್ರಿಕೆಗಳು ಆ ಕಾಲದಲ್ಲಿ ಆರಂಭವಾದುವು. ಸಮಾಜ ಸುಧಾರಕರಾದ ರಾಜಾರಾಮ್ ಮೋಹನ್ ರಾಯ್ ರವರು ಆರಂಭಕಾಲದ ಭಾರತೀಯ ಪತ್ರಿಕೋದ್ಯಮದಲ್ಲಿ ಮುಂಚೂಣಿಯಲ್ಲಿದ್ದರು. ಬಂಗಾಳಿ ಭಾಷೆಯಲ್ಲಿ ಪ್ರಕಟಿಸಿದ ಸಂಬಾದ್ ಕೌಮುದಿ, ಪರ್ಶಿಯನ್ ಭಾಷೆಯಲ್ಲಿ ಪ್ರಕಟಿಸಿದ ಮಿರಾತ್ – ಉಲ್ – ಅಕ್ಬರ್ ಎಂಬಿವು ಅವರು ಆರಂಭಿಸಿದ ವಾರ್ತಾಪತ್ರಿಕೆಗಳಾಗಿವೆ. ಬ್ರಿಟಿಷರ ಧೋರಣೆಗಳನ್ನು ಟೀಕಿಸಲು, ಅವುಗಳ ವಿರುದ್ಧ ಪ್ರತಿಕ್ರಿಯಿಸಲು ಮತ್ತು ಶೋಷಣೆಗಳಿಗೆದುರಾದ ಮನೋಭಾವವನ್ನು ಬೆಳೆಸಲು ಇಂತಹ ವಾರ್ತಾಪತ್ರಿಕೆಗಳಿಗೆ ಸಾಧ್ಯವಾಯಿತು. ಆಧುನಿಕ ಆಶಯಗಳು ಮತ್ತು ರಾಷ್ಟ್ರೀಯತೆಯನ್ನು ಬೆಳೆಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ ಕೆಲವು ವಾರ್ತಾಪತ್ರಿಕೆಗಳನ್ನು ಕೆಳಗೆ ನೀಡಲಾಗಿದೆ.

| ಪತ್ರಿಕೆ | ಭಾಷೆ |
|---|---|
| ಅಮೃತ್ ಬಜಾರ್ ಪತ್ರಿಕೆ | ಬಂಗಾಳಿ |
| ದಿ ಹಿಂದು | ಇಂಗ್ಲಿಷ್ |
| ಟೈಮ್ಸ್ ಓಫ್ ಇಂಡಿಯಾ | |
| ಮಾತೃಭೂಮಿ | ಮಲಯಾಳ |
| ಅಲ್ ಅಮೀನ್ | |

ಬ್ರಿಟಿಷರು ವಾರ್ತಾಪತ್ರಿಕೆಗಳನ್ನು ಅವರಿಗೆದುರಾದ ಪ್ರಚಾರದ ಆಯುಧವಾಗಿ ಕಂಡುಕೊಂಡು ಅವುಗಳನ್ನು ನಿಯಂತ್ರಿಸುವ ಕ್ರಮಗಳನ್ನು ಕೈಗೊಂಡರು. ಲಿಟ್ಟನ್ ಪ್ರಭು ಜಾರಿಗೊಳಿಸಿದ ಪ್ರಾದೇಶಿಕ ಭಾಷಾ ಪತ್ರಿಕಾ ಕಾಯಿದೆ (Vernacular Press Act) ಯು ಅವುಗಳಲ್ಲಿ ಪ್ರಧಾನವಾದುದಾಗಿದೆ. ಇಂತಹ ನಿಯಮಗಳಿಗೆದುರಾಗಿ ಭಾರತೀಯರು ಒಗ್ಗಟ್ಟಾದರು.

'ರಾಷ್ಟ್ರೀಯತೆಯನ್ನು ಬೆಳೆಸುವುದರಲ್ಲಿ ಪತ್ರಿಕಾ ಮಾಧ್ಯಮಗಳ ಪಾತ್ರ' ಎಂಬ ವಿಷಯದಲ್ಲಿ ಒಂದು ಕಿರುಟಿಪ್ಪಣಿ ತಯಾರಿಸಿರಿ.

## ಸಮಾಜ ಸುಧಾರಣಾ ಚಳುವಳಿಗಳು

ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಅನಾಚಾರಗಳು ಮತ್ತು ಮೂಢನಂಬಿಕೆಗಳನ್ನು ಕೊನೆಗೊಳಿಸಬೇಕಾದ ಅನಿವಾರ್ಯತೆಯನ್ನು ಮನಗಾಣಲು ಆಧುನಿಕ ಶಿಕ್ಷಣವು ಸಹಾಯಕವಾಯಿತು. ಸಮಾಜ ಸುಧಾರಣೆಗಾಗಿ ಪ್ರಯತ್ನಿಸಿದ ಭಾರತದ ಆರಂಭಕಾಲದ ಸಮಾಜ ಸುಧಾರಕರು ಮತ್ತು ಅವರು ಕೈಗೊಂಡ ಕಾರ್ಯಗಳನ್ನು ಅವಲೋಕಿಸೋಣ.

### ರಾಜಾರಾಮ್ ಮೋಹನ್ ರಾಯ್

ರಾಜಾರಾಮ್ ಮೋಹನ್ ರಾಯ್ ಭಾರತದಲ್ಲುಂಟಾದ ಸಮಾಜ ಸುಧಾರಣೆಗೆ ನಾಂದಿಹಾಡಿದರು. 1772 ರಲ್ಲಿ ಬಂಗಾಳದಲ್ಲಿ ಜನಿಸಿದ ಅವರಿಗೆ ಹಿಂದು, ಇಸ್ಲಾಂ, ಕ್ರೈಸ್ತ ಮತ್ತು ಯಹೂದಿ ಮತಗಳಲ್ಲಿ ಅಗಾಧವಾದ ಪಾಂಡಿತ್ಯವಿತ್ತು. ಒಬ್ಬ ಬಹುಭಾಷಾ ಪಂಡಿತನಾಗಿದ್ದ ರಾಯ್ ರವರ ಮೇಲೆ ಫ್ರೆಂಚ್ ಕ್ರಾಂತಿಯ ಆಶಯಗಳು ಪ್ರಭಾವ ಬೀರಿದ್ದುವು.

ರಾಜಾರಾಮ್ ಮೋಹನ್ ರಾಯ್ ರವರು ಕೈಗೊಂಡ ಕಾರ್ಯಗಳನ್ನು ಕೆಳಗೆ ನೀಡಲಾಗಿದೆ.



*ಚಿತ್ರ 2.10 • ರಾಜಾರಾಮ್ ಮೋಹನ್ ರಾಯ್*

- ಸತಿಸಹಗಮನ ಪದ್ಧತಿಯ ನಿಷೇಧದಲ್ಲಿ ಪ್ರಮುಖ ಪಾತ್ರ ವಹಿಸಿದರು.
- ಆಧುನಿಕ ವಿದ್ಯಾಭ್ಯಾಸಕ್ಕಾಗಿ ಅನೇಕ ಶಾಲೆಗಳನ್ನು ಆರಂಭಿಸಿದರು.
- ಬ್ರಹ್ಮಸಮಾಜ ಎಂಬ ಸಮಾಜ ಸುಧಾರಣಾ ಸಂಘಟನೆಯನ್ನು ಆರಂಭಿಸಿದರು.
- ಬಾಲ್ಯ ವಿವಾಹ, ಬಹುಪತ್ನಿತ್ವ ಮೊದಲಾದ ಸಾಮಾಜಿಕ ಪಿಡುಗುಗಳಿಗೆದುರಾಗಿ ಹೋರಾಡಿದರು.
- ಮಹಿಳೆಯರಿಗೆ ಪರಂಪರಾಗತ ಆಸ್ತಿಯಲ್ಲಿ ಹಕ್ಕಿದೆ ಎಂದು ವಾದಿಸಿದರು.
- ವಿಗ್ರಹಾರಾಧನೆ, ಬಹು ದೇವತಾರಾಧನೆ ಮೊದಲಾದವುಗಳನ್ನು ವಿರೋಧಿಸಿದರು.

### ಜ್ಯೋತಿರಾವ್ ಫುಲೆ

ಜ್ಯೋತಿರಾವ್ ಫುಲೆ ಮಹಾರಾಷ್ಟ್ರದಲ್ಲಿ ಹಿಂದುಳಿದ ಜಾತಿಗಳೆಂದು ಪರಿಗಣಿಸಲ್ಪಟ್ಟ ಮತ್ತು ಮಹಿಳೆಯರ ಹಕ್ಕುಗಳಿಗಾಗಿ ಹೋರಾಡಿದ ಸಮಾಜ ಸುಧಾರಕರಾಗಿದ್ದಾರೆ. ಸಮಾಜ ಸುಧಾರಣಾ ಕಾರ್ಯಗಳಿಗಾಗಿ ಅವರು ಸತ್ಯಶೋಧಕ ಸಮಾಜ ಎಂಬ ಸಂಘಟನೆಯನ್ನು ಸ್ಥಾಪಿಸಿದರು. ವಿಧವಾ ವಿವಾಹಕ್ಕಾಗಿ ಮತ್ತು ವಿಧವೆಯರ ಮಕ್ಕಳ ಸಂರಕ್ಷಣೆಗಾಗಿ ಈ ಸಂಘಟನೆಯು ಪ್ರಯತ್ನಿಸಿದೆ. ಅವರು ಮಹಿಳೆಯರ ಮತ್ತು ದಲಿತರ ವಿದ್ಯಾಭ್ಯಾಸಕ್ಕಾಗಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಮಹಾರಾಷ್ಟ್ರದ ಜನರು ಗೌರವ ಸೂಚಕವಾಗಿ ಅವರನ್ನು 'ಮಹಾತ್ಮ' ಎಂದು ಕರೆದರು. ಅವರ ಎಲ್ಲಾ ಚಟುವಟಿಕೆಗಳಲ್ಲಿ ಜೀವನ ಸಂಗಾತಿಯಾದ ಸಾವಿತ್ರಿಬಾಯಿ ಫುಲೆ ಜೊತೆಗಿದ್ದರು. ಅನೇಕ ಹೆಣ್ಮಕ್ಕಳ ಶಾಲೆಗಳು ಮತ್ತು ರಾತ್ರಿಶಾಲೆಗಳನ್ನು ಸ್ಥಾಪಿಸುವ ಮೂಲಕ ಸಾವಿತ್ರಿಬಾಯಿಯವರೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗಿಯಾದರು.



*ಚಿತ್ರ 2.11 • ಜ್ಯೋತಿರಾವ್ ಫುಲೆ*

### ಪಂಡಿತ ರಮಾಬಾಯಿ

ಪಂಡಿತ ರಮಾಬಾಯಿಯವರು ಸಮಾಜ ಸುಧಾರಣಾ ರಂಗದ ಮಹಿಳಾ ಪ್ರತಿನಿಧಿಯಾಗಿದ್ದರು. ಕರ್ನಾಟಕದವರಾದ ರಮಾಬಾಯಿಯವರಿಗೆ ಸಂಸ್ಕೃತ, ಮರಾಠಿ, ಬಂಗಾಳಿ ಮೊದಲಾದ ಭಾಷೆಗಳಲ್ಲಿ ಅಪಾರ ಜ್ಞಾನವಿತ್ತು. ಸಂಸ್ಕೃತ ಸಾಹಿತ್ಯದಲ್ಲಿದ್ದ ಪಾಂಡಿತ್ಯವನ್ನು ಪರಿಗಣಿಸಿ ಕಲ್ಕತ್ತಾ ವಿಶ್ವವಿದ್ಯಾಲಯದ ಅಧ್ಯಾಪಕರು ಅವರಿಗೆ 'ಪಂಡಿತ' ಎಂಬ ಬಿರುದನ್ನು ನೀಡಿ ಗೌರವಿಸಿದರು.



*ಚಿತ್ರ 2.12 • ಪಂಡಿತ ರಮಾಬಾಯಿ*

ಬಾಲ್ಯವಿವಾಹಕ್ಕೆದುರಾಗಿ ಧ್ವನಿಯೆತ್ತಿದ ಪಂಡಿತ ರಮಾಬಾಯಿಯವರು ವಿಧವೆಯರ ಮತ್ತು ಹೆಣ್ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅನೇಕ ಶಾಲೆಗಳನ್ನು ಆರಂಭಿಸಿದರು. ಇಂತಹ ಚಟುವಟಿಕೆಗಳಿಗಾಗಿ ಅವರು 'ಆರ್ಯ ಮಹಿಳಾ ಸಮಾಜ' ಎಂಬ ಸಂಘಟನೆಯನ್ನು ಸ್ಥಾಪಿಸಿದರು. ವಿಧವೆಯರ ಪುನರ್ವಸತಿಗಾಗಿ 'ಶಾರದಾ ಸದನ' ಎಂಬ ಪುನರ್ವಸತಿ ಕೇಂದ್ರವನ್ನು ಮತ್ತು ಮಹಿಳೆಯರ ಉದ್ಯೋಗ ತರಬೇತಿಗಾಗಿ 'ಮುಕ್ತಿ ಮಿಷನ್' ಎಂಬ ಯೋಜನೆಯನ್ನು ಆರಂಭಿಸಿದರು. 1889 ರಲ್ಲಿ ಬೊಂಬಾಯಿಯಲ್ಲಿ ನಡೆದ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಸಮ್ಮೇಳನದಲ್ಲೂ ಅವರು ಭಾಗವಹಿಸಿದ್ದರು.

*ರಾಜಾರಾಮ್ ಮೋಹನ್ ರಾಯ್, ಜ್ಯೋತಿರಾವ್ ಫುಲೆ, ಪಂಡಿತ ರಮಾಬಾಯಿ ಮೊದಲಾದವರ ಕಾರ್ಯಚಟುವಟಿಕೆಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸಿರಿ.*

ಭಾರತದ ಇತರ ಪ್ರಮುಖ ಸಮಾಜ ಸುಧಾರಣಾ ಚಳುವಳಿಗಳು ಮತ್ತು ಅವುಗಳ ಸ್ಥಾಪಕರ ಕುರಿತು ಪರಿಚಯಿಸೋಣ.

| ಸಮಾಜ ಸುಧಾರಣಾ ಚಳುವಳಿಗಳು | ಸ್ಥಾಪಕರು |
|---|---|
| ಪ್ರಾರ್ಥನಾ ಸಮಾಜ | ಆತ್ಮಾರಾಮ ಪಾಂಡುರಂಗ |
| ಆರ್ಯ ಸಮಾಜ | ಸ್ವಾಮಿ ದಯಾನಂದ ಸರಸ್ವತಿ |
| ಅಲಿಘಡ್ ಚಳುವಳಿ | ಸರ್ ಸಯ್ಯದ್ ಅಹಮ್ಮದ್ ಖಾನ್ |
| ಥಿಯೋಸೋಫಿಕಲ್ ಸೊಸೈಟಿ | ಮೇಡಂ ಬ್ಲಾವಿಟ್ಸ್ಕಿ, ಕರ್ನಲ್ ಆಲ್ಕಾಟ್ |
| ರಾಮಕೃಷ್ಣ ಮಿಷನ್ | ಸ್ವಾಮಿ ವಿವೇಕಾನಂದ |
| ಹಿತಕಾರಿಣಿ ಸಮಾಜ | ವಿರೇಶಲಿಂಗಂ ಪಂತುಲು |
| ಸ್ವಾಭಿಮಾನ ಚಳುವಳಿ | ಇ.ವಿ. ರಾಮಸ್ವಾಮಿ ನಾಯ್ಕರ್ |
| ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ | ಶ್ರೀನಾರಾಯಣ ಗುರು |
| ಸಾಧುಜನ ಪರಿಪಾಲನಾ ಸಂಘಂ | ಅಯ್ಯಂಗಾಳಿ |

ಸಮಾಜ ಸುಧಾರಣಾ ಚಳುವಳಿಗಳು ಭಾರತೀಯರ ಆತ್ಮಸ್ಥೈರ್ಯವನ್ನು ಹೆಚ್ಚಿಸಿದುವು. ಇದು ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾಯಿತು.

## ಸಾರಿಗೆ ಮತ್ತು ವಾರ್ತಾವಿನಿಮಯ

ಬ್ರಿಟಿಷರು ವ್ಯಾಪಾರ, ಕೈಗಾರಿಕೆ ಮತ್ತು ಸೈನಿಕ ಅಗತ್ಯಗಳಿಗಾಗಿ ಭಾರತದಲ್ಲಿ ಸಾರಿಗೆ ಮತ್ತು ವಾರ್ತಾವಿನಿಮಯ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರು. ಅವರು ರೈಲು, ಅಂಚೆ ಮತ್ತು ತಂತಿ ವ್ಯವಸ್ಥೆಗಳನ್ನು ಆರಂಭಿಸಿದರು. ಸರಕು ಸಾಗಾಟವನ್ನು ಸುಗಮಗೊಳಿಸಲು ರಸ್ತೆ ಸಾರಿಗೆಯನ್ನು ಅಭಿವೃದ್ಧಿಪಡಿಸಿದರು. ಈ ಸೌಕರ್ಯಗಳು ಭಾರತದ ಎಲ್ಲಾ ಪ್ರದೇಶಗಳಿಗೆ ಸಂಚರಿಸಲು, ಆಶಯವಿನಿಮಯ ನಡೆಸಲು ಮತ್ತು ಪರಸ್ಪರ ಅರ್ಥೈಸಲು ಭಾರತೀಯರಿಗೆ ಸಹಾಯಕವಾದುವು. ಇದು ಭಾರತದ ರಾಷ್ಟ್ರೀಯತೆ ಮತ್ತು ರಾಷ್ಟ್ರೀಯ ಚಳುವಳಿಗಳು ಪ್ರಬಲವಾಗಲು ಸಹಾಯಕವಾಯಿತು. ಏಕೀಕೃತ ಆಡಳಿತ ವ್ಯವಸ್ಥೆ, ಕಾನೂನು ವ್ಯವಸ್ಥೆ ಮತ್ತು ನಾಣ್ಯ ವ್ಯವಸ್ಥೆಗಳ ಆರಂಭವು ಭಾರತೀಯರಲ್ಲಿ ಏಕತಾ ಮನೋಭಾವವು ಬೆಳೆಯಲು ಕಾರಣವಾದುವು.

*'ಭಾರತದ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾದ ಘಟಕಗಳು' ಎಂಬ ವಿಷಯದಲ್ಲಿ ಸೆಮಿನಾರ್ ಪ್ರಬಂಧವನ್ನು ತಯಾರಿಸಿ.*

***ಸೂಚಕಗಳು :***

- ಆರ್ಥಿಕ ಧೋರಣೆಗಳು
- ಸಮಾಜ ಸುಧಾರಣಾ ಚಳುವಳಿಗಳು
- ಸಾಹಿತ್ಯ ಮತ್ತು ವಾರ್ತಾಪತ್ರಿಕೆಗಳು
- ಪಾಶ್ಚಾತ್ಯ ವಿದ್ಯಾಭ್ಯಾಸ
- ಸಾರಿಗೆ ಮತ್ತು ವಾರ್ತಾವಿನಿಮಯ

## ರಾಜಕೀಯ ಸಂಘಟನೆಗಳ ರೂಪೀಕರಣ

ಬ್ರಿಟಿಷರಿಗೆದುರಾಗಿ ಜನರನ್ನು ಒಗ್ಗೂಡಿಸಲು ಸಂಘಟನೆಗಳು ಅನಿವಾರ್ಯವೆಂಬ ಅಭಿಪ್ರಾಯವು ಭಾರತದ ವಿವಿಧ ಭಾಗಗಳಿಂದ ಮೂಡಿಬಂತು. ಇದರ ಪರಿಣಾಮವಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ಅನೇಕ ಹೊಸ ರಾಜಕೀಯ ಸಂಘಟನೆಗಳು ರೂಪುಗೊಂಡವು. ಅವುಗಳಲ್ಲಿ ಕೆಲವನ್ನು ಕೆಳಗೆ ನೀಡಲಾಗಿದೆ.

| ಆರಂಭಕಾಲದ ರಾಜಕೀಯ ಸಂಘಟನೆಗಳು | ಕಾರ್ಯಕ್ಷೇತ್ರ | ನೇತೃತ್ವ ನೀಡಿದ ರಾಷ್ಟ್ರೀಯ ನಾಯಕರು |
|---|---|---|
| ಇಂಡಿಯನ್ ಅಸೋಸಿಯೇಷನ್ | ಕಲ್ಕತ್ತಾ | ಸುರೇಂದ್ರನಾಥ ಬ್ಯಾನರ್ಜಿ,<br>ಆನಂದಮೋಹನ್ ಬೋಸ್ |
| ಮದ್ರಾಸ್ ಮಹಾಜನ್ ಸಭಾ | ಮದ್ರಾಸ್ | ಎಂ. ವೀರರಾಘವಾಚಾರಿ,<br>ಜಿ. ಸುಬ್ರಹ್ಮಣ್ಯ ಅಯ್ಯರ್,<br>ಆನಂದಚಾರ್ಲು |
| ಬೋಂಬೆ ಪ್ರಸಿಡೆನ್ಸಿ ಅಸೋಸಿಯೇಷನ್ | ಬೋಂಬೆ | ಫಿರೋಜ್ ಷಾ ಮೆಹ್ತಾ, ಕೆ.ಟಿ. ತೆಲಾಂಗ್,<br>ಬದ್ರುದ್ದೀನ್ ತಯ್ಯಬ್ಜಿ |

ಆದರೆ ಇವುಗಳು ಅಖಿಲ ಭಾರತ ಸ್ವರೂಪವಿರುವ ಸಂಘಟನೆಗಳಾಗಿರಲಿಲ್ಲ. ಇವುಗಳ ಕಾರ್ಯಕ್ಷೇತ್ರವು ಕೆಲವು ಪ್ರಾಂತ್ಯಗಳಿಗೆ ಮತ್ತು ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು. ಧನಿಕರ ಮತ್ತು ಮಧ್ಯಮವರ್ಗದ ನೇತೃತ್ವದಲ್ಲಿದ್ದ ಇಂತಹ ಸಂಘಟನೆಗಳಿಗೆ ಜನಸಾಮಾನ್ಯರಲ್ಲಿ ರಾಜಕೀಯದ ಪ್ರಜ್ಞೆಯನ್ನು ಮೂಡಿಸಲು ಸಾಧ್ಯವಾಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅಖಿಲ ಭಾರತ ಸಂಘಟನೆಯೊಂದನ್ನು ರೂಪಿಸಬೇಕೆಂಬ ಬೇಡಿಕೆಯು ತೀವ್ರಗೊಂಡಿತು.

*ಆರಂಭಕಾಲದ ರಾಜಕೀಯ ಸಂಘಟನೆಗಳ ಇತಿಮಿತಿಗಳನ್ನು ಚರ್ಚಿಸಿ ಪಟ್ಟಿ ತಯಾರಿಸಿರಿ.*

## ಅಖಿಲ ಭಾರತ ಸಂಘಟನೆ ರೂಪುಗೊಳ್ಳುತ್ತಿದೆ

*1885 ಡಿಸೆಂಬರ್ 28 ಹಗಲು 12 ಗಂಟೆ. ಬೋಂಬೆಯ ಗೋಕುಲ್‌ದಾಸ್ ತೇಜ್‌ಪಾಲ್ ಸಂಸ್ಕೃತ ಕಾಲೇಜಿನ ವಿಶಾಲವಾದ ಕೋಣೆಯಲ್ಲಿ ಸಭೆಯೊಂದು ನಡೆಯುತ್ತಿದೆ. 72 ಜನರು ಅಲ್ಲಿ ಸಭೆ ಸೇರಿದ್ದಾರೆ. ಅವರು ಭಾರತದ ವಿವಿಧ ಪ್ರದೇಶಗಳಲ್ಲಿ ಕೆಲವು ಪ್ರಮುಖ ಸಂಘಟನೆಗಳ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸಿದವರಾಗಿದ್ದರು. ಭಾಷೆ, ಧರ್ಮ, ಸಮಾಜದಲ್ಲಿನ ಸ್ಥಾನಮಾನ ಮೊದಲಾದವುಗಳಲ್ಲಿ ವೈವಿಧ್ಯ ವ್ಯಕ್ತಿತ್ವವುಳ್ಳವರು.... ಆಂಗ್ಲೇಯನಾದ ಅಲನ್ ಒಕ್ಟೇವಿಯನ್ ಹ್ಯೂಂ ಸಂಘಟಕರಲ್ಲಿ ಒಬ್ಬನಾಗಿದ್ದನು. ಡಬ್ಲ್ಯೂ.ಸಿ. ಬ್ಯಾನರ್ಜಿ ಎಂಬ ವಕೀಲನು ಅಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದನು.*

*ಕೆ.ಎಸ್.ಐ.ಸಿ.ಎಲ್. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಚರಿತ್ರೆ ಮಕ್ಕಳಿಗಾಗಿ*

ಇದು ಇಂಡಿಯನ್ ನೇಶನಲ್ ಕಾಂಗ್ರೆಸ್ ಎಂಬ ರಾಷ್ಟ್ರೀಯ ಸಂಘಟನೆಯ ಉದಯಕ್ಕೆ ಕಾರಣವಾದ ಚಾರಿತ್ರಿಕ ಸಮ್ಮೇಳನದ ಕುರಿತಾದ ವಿವರಣೆಯಾಗಿದೆ.

*ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ರೂಪೀಕರಣಕ್ಕೆ ಸಂಬಂಧಿಸಿದ ಯಾವೆಲ್ಲಾ ಮಾಹಿತಿಗಳನ್ನು ಮೇಲಿನ ವಿವರಣೆಯಿಂದ ಕಂಡುಹಿಡಿಯಬಹುದು?*

- 1885ರಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ ರೂಪುಗೊಂಡಿತು.
- 
- 



*ಚಿತ್ರ 2.13 • ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಪ್ರಥಮ ಸಮ್ಮೇಳನದಲ್ಲಿ ಭಾಗವಹಿಸಿದವರು*

ವಿವಿಧ ಪ್ರದೇಶಗಳ ಸಾಮಾಜಿಕ – ರಾಜಕೀಯ ಕಾರ್ಯಕರ್ತರ ನಡುವೆ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದು ಈ ಸಮ್ಮೇಳನದ ಪ್ರಧಾನ ಉದ್ದೇಶವಾಗಿತ್ತು. ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಘೋಷಿತ ಉದ್ದೇಶಗಳನ್ನು ಕೆಳಗೆ ನೀಡಲಾಗಿದೆ.

- ಭಾರತದ ವಿವಿಧ ಭಾಗಗಳಲ್ಲಿರುವ ರಾಜಕೀಯ ಕಾರ್ಯಕರ್ತರ ನಡುವೆ ಸೌಹಾರ್ದತೆಯನ್ನು ಬೆಳೆಸುವುದು.
- ಜಾತಿ, ಮತ ಅಥವಾ ಪ್ರಾಂತ್ಯಗಳೆಂಬ ವ್ಯತ್ಯಾಸವಿಲ್ಲದೆ ಭಾರತೀಯರಲ್ಲಿ ರಾಷ್ಟ್ರೀಯ ಏಕತೆಯನ್ನು ಬೆಳೆಸುವುದು ಮತ್ತು ಬಲಪಡಿಸುವುದು.
- ಸಾರ್ವಜನಿಕ ಬೇಡಿಕೆಗಳನ್ನು ರೂಪಿಸುವುದು ಮತ್ತು ಅವುಗಳನ್ನು ಬ್ರಿಟಿಷ್ ಸರಕಾರದ ಮುಂದಿಡುವುದು.
- ಭಾರತದಲ್ಲಿ ಸಾರ್ವಜನಿಕ ಅಭಿಪ್ರಾಯ ರೂಪಿಸುವುದು ಮತ್ತು ಜನರನ್ನು ಸಂಘಟಿಸುವುದು.
- ಅಖಿಲ ಭಾರತೀಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಭಾರತದಲ್ಲೂ ಕೇಂದ್ರಗಳನ್ನು ಆರಂಭಿಸುವುದು.

ಪ್ರತಿ ವರ್ಷವೂ ಡಿಸೆಂಬರ್ ತಿಂಗಳಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ವಾರ್ಷಿಕ ಸಮ್ಮೇಳನವನ್ನು ದೇಶದ ವಿವಿಧ ಭಾಗಗಳಲ್ಲಿ ನಡೆಸುತ್ತಿದ್ದರು. ದಾದಾಭಾಯಿ ನವರೋಜಿ, ಸುರೇಂದ್ರನಾಥ ಬ್ಯಾನರ್ಜಿ, ಫಿರೋಜ್ ಷಾ ಮೆಹ್ತಾ, ಬದ್ರುದ್ದೀನ್ ತಯ್ಯಬ್ಜಿ, ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ್ ತಿಲಕ್, ಪಿ. ಆನಂದಚಾರ್ಲು, ಆರ್.ಸಿ. ದತ್ತ್, ಆನಂದ ಮೋಹನ ಬೋಸ್ ಮೊದಲಾದವರು ಆ ಕಾಲದ ಪ್ರಮುಖ ನೇತಾರರಾಗಿದ್ದರು.

*ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಆರಂಭಕಾಲದ ಚಟುವಟಿಕೆಗಳು ಭಾರತದಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಲು ಸಹಾಯಕವಾಯಿತು. ಚರ್ಚಿಸಿರಿ.*

## ವಿಭಜನೆ ಮತ್ತು ಒಡೆದು ಆಳುವ ನೀತಿ

*"ಐಕ್ಯ ಬಂಗಾಳವೆಂಬುದು ಒಂದು ಶಕ್ತಿಯಾಗಿದೆ. ಬಂಗಾಳವು ವಿಭಜಿಸಲ್ಪಟ್ಟರೆ ಶಕ್ತಿಯು ಕ್ಷಯಿಸುತ್ತದೆ – ಇದು ಕಾಂಗ್ರೆಸ್ ನೇತಾರರ ಭಾವನೆ. ಅವರ ಆತಂಕ ಸಂಪೂರ್ಣವಾಗಿ ಸರಿ. ಬಂಗಾಳದ ವಿಭಜನೆಯ ಹಿಂದಿನ ನಮ್ಮ ಉದ್ದೇಶವೂ ಇದೇ ಆಗಿದೆ. ನಮ್ಮ ಆಡಳಿತವನ್ನು ಎದುರಿಸುವವರನ್ನು ವಿಭಜಿಸುವುದು ಮತ್ತು ಆ ಮೂಲಕ ನಮ್ಮ ಎದುರಾಳಿ ಸಂಘಟನೆಯನ್ನು ದುರ್ಬಲಗೊಳಿಸುವುದು ನಮ್ಮ ಮುಖ್ಯ ಗುರಿಗಳಲ್ಲೊಂದು"*

*ಎಚ್.ಎಚ್. ರಿಸ್ಲೆ*

*ಕೆ.ಎಸ್.ಐ.ಸಿ.ಎಲ್. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಚರಿತ್ರೆ ಮಕ್ಕಳಿಗಾಗಿ*



*ಚಿತ್ರ 2.14 •*
*ಅಲನ್ ಒಕ್ಟೇವಿಯನ್ ಹ್ಯೂಂ*



*ಚಿತ್ರ 2.15 •*
*ಡಬ್ಲ್ಯೂ.ಸಿ. ಬ್ಯಾನರ್ಜಿ*

### ಸರ್ ಸಿ. ಶಂಕರನ್ ನಾಯರ್



ಚಿತ್ರ 2.16 •

ಇವರು ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಮೊದಲ ಮಲಯಾಳಿಯಾಗಿದ್ದಾರೆ. 1897ರ ಅಮರಾವತಿ ಕಾಂಗ್ರೆಸ್ ಸಮ್ಮೇಳನದಲ್ಲಿ ಇವರು ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ವಹಿಸಿದ್ದರು.

ಬಂಗಾಳ ವಿಭಜನೆಯ ಉದ್ದೇಶವನ್ನು ವಿವರಿಸಿ ಆಗಿನ ಭಾರತ ಸರಕಾರದ ಗೃಹ ಕಾರ್ಯದರ್ಶಿಯಾಗಿದ್ದ ರಿಸ್ಲೆ ಬರೆದ ಅಧಿಕೃತ ಪತ್ರದ ವಿವರಣೆಯನ್ನು ಓದಿದಿರಲ್ಲವೇ.

ಕಾಂಗ್ರೆಸ್ಸಿನ ನೇತೃತ್ವದಲ್ಲಿ ನಡೆಯುತ್ತಿದ್ದ ಹೋರಾಟಗಳನ್ನು ದುರ್ಬಲಗೊಳಿಸಲು ಬ್ರಿಟಿಷ್ ಅಧಿಕಾರಿಗಳು ಹಲವು ತಂತ್ರಗಳನ್ನು ಆವಿಷ್ಕರಿಸಿದ್ದರು. ಬಂಗಾಳದ ವಿಭಜನೆಯು ಅವುಗಳಲ್ಲಿ ಪ್ರಮುಖವಾದುದಾಗಿದೆ. ರಾಷ್ಟ್ರೀಯ ಚಳುವಳಿಗಳ ಶಕ್ತಿಕೇಂದ್ರವಾಗಿದ್ದ ಬಂಗಾಳ ಪ್ರಾಂತ್ಯವನ್ನು ಇಬ್ಭಾಗ ಮಾಡುವುದು ಅವರ ಉದ್ದೇಶವಾಗಿತ್ತು. ಅಸ್ತಿತ್ವದಲ್ಲಿರುವ ಬಂಗಾಳ ಪ್ರಾಂತ್ಯವು ವಿಸ್ತಾರವಾಗಿದೆಯೆಂದೂ ಕಾರ್ಯದಕ್ಷತೆಯಿಂದ ಕೂಡಿದ ಆಡಳಿತಕ್ಕೆ ಬಂಗಾಳ ವಿಭಜನೆಯು ಅನಿವಾರ್ಯವಾಗಿದೆಯೆಂದೂ ಅಂದಿನ ಬ್ರಿಟಿಷ್ ವೈಸರಾಯಿಯಾಗಿದ್ದ ಕರ್ಜನ್ ಪ್ರಭು ವಾದಿಸಿದ್ದನು.

**ಬಂಗಾಳದ ವಿಭಜನೆ**

ಬಂಗಾಳವನ್ನು ಪೂರ್ವ ಬಂಗಾಳ ಮತ್ತು ಪಶ್ಚಿಮ ಬಂಗಾಳವೆಂದು ಎರಡಾಗಿ ವಿಭಜಿಸಿದರು. ಪೂರ್ವ ಬಂಗಾಳವು ಮುಸ್ಲಿಂ ಬಾಹುಳ್ಯದ ಪ್ರದೇಶವಾಗಿದ್ದರೆ ಪಶ್ಚಿಮ ಬಂಗಾಳವು ಹಿಂದೂ ಬಾಹುಳ್ಯದ ಪ್ರದೇಶವಾಗಿತ್ತು.

*ಬಂಗಾಳದ ವಿಭಜನೆಯ ಹಿಂದಿನ ನಿಜವಾದ ಉದ್ದೇಶ ಏನಾಗಿತ್ತು?*

- 

ವಿಭಜನೆಯು ಜಾರಿಗೊಂಡ 1905 ಅಕ್ಟೋಬರ್ 16ರಂದು ಬಂಗಾಳದಾದ್ಯಂತ ಶೋಕಾಚರಣೆ ನಡೆಯಿತು. ಕಲ್ಕತ್ತಾದಲ್ಲಿ ಹರತಾಳ ಆಚರಿಸಿದರು. ರವೀಂದ್ರನಾಥ ಠಾಗೋರರು ರಚಿಸಿದ 'ಅಮರ್ ಸೋನಾರ್ ಬಾಂಗ್ಲಾ' ಎಂಬ ದೇಶಭಕ್ತಿ ಗೀತೆಯನ್ನು ಹಾಡುತ್ತಾ ಜನರು ಬೀದಿಗಳಲ್ಲಿ ಒಗ್ಗೂಡಿದರು. ಈ ಪ್ರತಿಭಟನೆಗಳು ಮುಂದೆ ದೊಡ್ಡ ಹೋರಾಟವಾಗಿ ಬದಲಾಯಿತು. ಈ ಹೋರಾಟವನ್ನು 'ಸ್ವದೇಶಿ ಚಳುವಳಿ' ಎಂದು ಕರೆಯುತ್ತಾರೆ. ಸ್ವದೇಶಿ ಚಳುವಳಿಯೊಂದಿಗೆ ಭಾರತದಲ್ಲಿನ ರಾಷ್ಟ್ರೀಯ ಚಳುವಳಿಯು ತೀವ್ರ ಸ್ವರೂಪವನ್ನು ಪಡೆಯಿತು.

ಭಾರತೀಯ ವಸ್ತುಗಳ ಉಪಯೋಗ ಮತ್ತು ಬ್ರಿಟಿಷ್ ವಸ್ತುಗಳ ಬಹಿಷ್ಕಾರವು ಈ ಚಳುವಳಿಯ ಪ್ರಧಾನ ಹೋರಾಟ ವಿಧಾನವಾಗಿತ್ತು. 'ಸ್ವಾವಲಂಬನೆ' ಎಂಬುದು ಸ್ವದೇಶಿ ಚಳುವಳಿಯ ಮುಖ್ಯ ಆಶಯವಾಗಿತ್ತು. ಸ್ವದೇಶಿ ಕೈಗಾರಿಕೆಗಳು ಮತ್ತು ಇತರ ಉದ್ಯಮಗಳನ್ನು ಪ್ರೋತ್ಸಾಹಿಸುವುದು ಇದರ ಉದ್ದೇಶವಾಗಿತ್ತು. ಬ್ರಿಟಿಷ್ ಉತ್ಪನ್ನಗಳನ್ನು ಬಹಿಷ್ಕರಿಸುವ ಮೂಲಕ ಸರಕಾರಕ್ಕೆ ವ್ಯಾಪಾರದ ಮೂಲಕ ಲಭಿಸುವ ಆದಾಯವನ್ನು ಕೊನೆಗೊಳಿಸುವುದು ಸ್ವದೇಶಿ ಹೋರಾಟದ ಉದ್ದೇಶವಾಗಿತ್ತು. ಇದರ ಅಂಗವಾಗಿ,

- ಅನೇಕ ಬಟ್ಟೆ ಗಿರಣಿಗಳು, ಸಾಬೂನು ನಿರ್ಮಾಣ ಕಾರ್ಖಾನೆಗಳು, ಬೆಂಕಿಪೆಟ್ಟಿಗೆ ಕಾರ್ಖಾನೆಗಳು, ಕೈಮಗ್ಗ ನಿರ್ಮಾಣ ಕೇಂದ್ರಗಳು, ರಾಷ್ಟ್ರೀಯ ಬ್ಯಾಂಕುಗಳು, ವಿಮಾ ಕಂಪೆನಿಗಳು ಮೊದಲಾದವು ಆರಂಭವಾದವು.

- ಆಚಾರ್ಯ ಪಿ.ಸಿ. ರಾಯ್ ಆರಂಭಿಸಿದ ಬೆಂಗಾಲ್ ಕೆಮಿಕಲ್ ಸ್ಟೋರ್, ಮಹಾಕವಿ ರವೀಂದ್ರನಾಥ ಠಾಗೋರರು ಆರಂಭಿಸಿದ ಸ್ವದೇಶಿ ಸ್ಟೋರ್, ವಿ. ಚಿದಂಬರಂ ಪಿಳ್ಳೆಯವರ ನೇತೃತ್ವದಲ್ಲಿ ಆರಂಭವಾದ ಸ್ವದೇಶಿ ಸ್ಟೀಮ್ ನ್ಯಾವಿಗೇಷನ್ ಕಂಪೆನಿ, ಜೆಮ್ಸೆಡ್ಜಿ ಟಾಟಾ ಸ್ಥಾಪಿಸಿದ ಉಕ್ಕಿನ ಕಾರ್ಖಾನೆ ಮೊದಲಾದವು ಸ್ವದೇಶಿ ಹೋರಾಟದ ಭಾಗವಾಗಿ ರೂಪುಗೊಂಡವುಗಳಾಗಿವೆ.

ಸ್ವದೇಶಿ ಚಳುವಳಿಯ ಕುರಿತಾಗಿ ಸುರೇಂದ್ರನಾಥ ಬ್ಯಾನರ್ಜಿಯವರು ನೀಡಿದ ವಿವರಣೆಯನ್ನು ಕೆಳಗೆ ನೀಡಲಾಗಿದೆ.



*ಚಿತ್ರ 2.17*
*ಸುರೇಂದ್ರನಾಥ ಬ್ಯಾನರ್ಜಿ*

*"ಶಕ್ತಿಯುತವಾದ ದಿನಗಳಲ್ಲಿ ಸ್ವದೇಶಿ ಚಳುವಳಿಯು ನಮ್ಮ ಸಾಮಾಜಿಕ, ಕೌಟುಂಬಿಕ ಜೀವನದ ಎಲ್ಲ ವಲಯಗಳಲ್ಲೂ ಪ್ರಭಾವ ಬೀರಿತು. ಭಾರತದಲ್ಲಿ ನಿರ್ಮಿಸಬಹುದಾಗಿದ್ದ ವಿದೇಶಿ ವಸ್ತುಗಳನ್ನೊಳಗೊಂಡ ಮದುವೆಯ ಉಡುಗೊರೆಗಳನ್ನು ಹಿಂತಿರುಗಿಸಲಾಯಿತು. ದೇವರಿಗೆ ನೈವೇದ್ಯವಾಗಿ ವಿದೇಶಿ ವಸ್ತುಗಳನ್ನು ಸಮರ್ಪಿಸಿದ ಆಚರಣೆಗಳಲ್ಲಿ ಪೌರೋಹಿತ್ಯವನ್ನು ವಹಿಸಲು ಪುರೋಹಿತರು ಹಲವು ಸಂದರ್ಭಗಳಲ್ಲಿ ವಿರೋಧವನ್ನು ವ್ಯಕ್ತಪಡಿಸಿದರು. ವಿದೇಶಿ ಉಪ್ಪು, ಸಕ್ಕರೆಯನ್ನುಪಯೋಗಿಸಿದ ಹಬ್ಬಗಳಲ್ಲಿ ಭಾಗವಹಿಸಲು ಅತಿಥಿಗಳು ನಿರಾಕರಿಸಿದರು."*

***ಆಧಾರ : ಬಿಪಿನ್ ಚಂದ್ರ - ಆಧುನಿಕ ಇಂಡಿಯಾ***

ಈ ವಿವರಣೆಯಿಂದ ಸ್ವದೇಶಿ ಚಳುವಳಿಗೆ ಸಂಬಂಧಿಸಿ ಕಂಡುಕೊಳ್ಳಲು ಸಾಧ್ಯವಾಗುವ ವಿಷಯಗಳನ್ನು ಪಟ್ಟಿ ಮಾಡಿರಿ.

- ವಿದೇಶಿ ವಸ್ತುಗಳನ್ನೊಳಗೊಂಡ ವಿವಾಹ ಉಡುಗೊರೆಗಳನ್ನು ಹಿಂತಿರುಗಿಸಲಾಯಿತು.
- 

ಇಂತಹ ಪ್ರಚಾರ ಅಭಿಯಾನಗಳು ಸ್ವದೇಶಿ ಚಳುವಳಿಯ ಆಶಯಗಳ ಕುರಿತು ಭಾರತೀಯರಲ್ಲಿ ಜಾಗೃತಿಯನ್ನುಂಟುಮಾಡುವುದರೊಂದಿಗೆ ಅವರ ಮೇಲೆ ಹೆಚ್ಚಿನ ಪ್ರಭಾವವನ್ನೂ ಬೀರಿದುವು. ಈ ಮೂಲಕ, ಭಾರತದಲ್ಲಿ ಮೊದಲ ಬಾರಿಗೆ ಜನಸಾಮಾನ್ಯರು, ಮಹಿಳೆಯರು ಮತ್ತು ವಿದ್ಯಾರ್ಥಿಗಳು ರಾಷ್ಟ್ರೀಯ ಆಂದೋಲನವೊಂದರಲ್ಲಿ ಭಾಗಿಗಳಾದರು. ಸಾಂಸ್ಕೃತಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಮೊದಲಾದ ವಲಯಗಳಲ್ಲಿ ಈ ಚಳುವಳಿಯ ಪ್ರಭಾವವನ್ನು ಕಾಣಬಹುದಾಗಿತ್ತು.

ಸ್ವದೇಶಿ ಎಂಬ ನೂತನ ಹೋರಾಟಮಾರ್ಗವನ್ನು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆಯಾಗಿ ನೀಡಲೂ ಭಾರತದ ಸ್ವಾತಂತ್ರ್ಯಹೋರಾಟವು ದೇಶೀಯ ಹಂತಕ್ಕೆ ವ್ಯಾಪಿಸುವಂತೆ ಮಾಡಲೂ ಸ್ವದೇಶಿ ಚಳುವಳಿಗೆ ಸಾಧ್ಯವಾಯಿತು. ಈ ಚಳುವಳಿಯು ಜನಸಾಮಾನ್ಯರನ್ನೂ ಸ್ವಾತಂತ್ರ್ಯ ಹೋರಾಟದೆಡೆಗೆ ತಲುಪಿಸಿತು.

## ಸ್ವದೇಶಿ ಸಮಿತಿಗಳು



*ಚಿತ್ರ 2.18 ● ಅಶ್ವಿನಿಕುಮಾರ್ ದತ್ತ್*

*ಸ್ವದೇಶಿ ಸಮಿತಿಗಳು, ಸ್ವದೇಶಿ ಚಳುವಳಿಯ ಸಂದೇಶವನ್ನು ಪ್ರಚಾರ ಮಾಡಲು ಮತ್ತು ಜನರನ್ನು ಸಂಘಟಿಸಲು ರೂಪಿಸಿದ ಸ್ವಯಂಸೇವಾ ಸಮಿತಿಗಳಾಗಿವೆ. ಅಶ್ವಿನಿ ಕುಮಾರ್ ದತ್ತ್ ರೂಪಿಸಿದ ಸ್ವದೇಶಿ ಬಾಂದಬ್ ಸಮಿತಿಯು ಇವುಗಳಲ್ಲಿ ಪ್ರಮುಖವಾದುದು.*

- *ಸ್ವಯಂ ಸೇವಕ ಸೈನಿಕರಿಗೆ ದೈಹಿಕ ತರಬೇತಿ ನೀಡುವುದು.*
- *ಸಾಂಕ್ರಾಮಿಕ ರೋಗಗಳು ಮತ್ತು ಇತರ ರೋಗಗಳಿಂದ ಬಳಲುವವರಿಗೆ ಸಹಾಯವನ್ನೊದಗಿಸುವುದು.*
- *ಸ್ವದೇಶಿ ವಿದ್ಯಾಲಯಗಳನ್ನು ಸ್ಥಾಪಿಸುವುದು.*

*ಮೊದಲಾದುವುಗಳು ಇವುಗಳ ಪ್ರಧಾನ ಉದ್ದೇಶಗಳಾಗಿದ್ದವು.*

*'ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸ್ವದೇಶಿ ಚಳುವಳಿಯ ಪ್ರಭಾವ' ಎಂಬ ವಿಷಯದಲ್ಲಿ ಸೆಮಿನಾರ್ ಪ್ರಬಂಧವೊಂದನ್ನು ತಯಾರಿಸಿ.*

## ಮಂದಗಾಮಿಗಳು ಮತ್ತು ತೀವ್ರಗಾಮಿಗಳು

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಕಾರ್ಯವಿಧಾನಗಳ ಕುರಿತು ನಾಯಕರಲ್ಲಿ ವ್ಯತ್ಯಸ್ತ ಅಬಿಪ್ರಾಯಗಳಿದ್ದವು. ಆರಂಭ ಕಾಲದ ನಾಯಕರು ಬ್ರಿಟಿಷರ ವಿರುದ್ಧ ಪ್ರತ್ಯಕ್ಷ ಹೋರಾಟಕ್ಕೆ ಸಿದ್ಧರಿರಲಿಲ್ಲ. ಅವರನ್ನು ಮಂದಗಾಮಿಗಳೆಂದು ಕರೆದರು. ಫಿರೋಜ್ ಷಾ ಮೆಹ್ತಾ, ಗೋಪಾಲಕೃಷ್ಣ ಗೋಖಲೆ, ದಾದಾಭಾಯಿ ನವರೋಜಿ ಮೊದಲಾದವರು ಅವರಲ್ಲಿ ಪ್ರಮುಖರು. ಶಾಂತಿಯುತ ಮತ್ತು ರಕ್ತರಹಿತ ಹೋರಾಟಗಳು, ಸಭೆಗಳು, ಭಾಷಣಗಳು ಮತ್ತು ನಿರ್ಣಯಗಳ ಮೂಲಕ ಅವರು ತಮ್ಮ ಆಶಯಗಳನ್ನು ಪ್ರಚಾರ ಮಾಡಿದರು.

ಮಂದಗಾಮಿಗಳ ಆಶಯಗಳು ಮತ್ತು ಚಟುವಟಿಕೆಗಳಲ್ಲಿ ಅತೃಪ್ತರಾದ ಇನ್ನೊಂದು ವಿಭಾಗವು ಕಾಂಗ್ರೆಸ್ಸಿನಲ್ಲಿ ಪ್ರಬಲರಾದರು. ಅವರನ್ನು ತೀವ್ರಗಾಮಿಗಳೆಂದು ಕರೆದರು. ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರ ಪಾಲ್, ಲಾಲಾ ಲಜಪತ್ ರಾಯ್ ಅವರಲ್ಲಿ ಪ್ರಮುಖರಾಗಿದ್ದರು. ತೀವ್ರಗಾಮಿಗಳ ಹೋರಾಟದ ವಿಧಾನಗಳು ಮಂದಗಾಮಿಗಳ ಹೋರಾಟದ ವಿಧಾನಗಳಿಗಿಂತ ತೀರಾ ಭಿನ್ನವಾಗಿದ್ದುವು. ಸ್ವದೇಶಿ ಮತ್ತು ಬಹಿಷ್ಕಾರ ಮೊದಲಾದ ಕ್ರಾಂತಿಕಾರಿ ಹೋರಾಟದ ಮಾರ್ಗಗಳನ್ನು ಸ್ವೀಕರಿಸಿದ ಇವರು ತೀವ್ರವಾದ ನೇರ ಹೋರಾಟದ ಮೂಲಕ ಮಾತ್ರವೇ ಸ್ವಾತಂತ್ರ್ಯವನ್ನು ಗಳಿಸಲು ಸಾಧ್ಯವೆಂದು ವಾದಿಸಿದರು.

*ಭಾರತದ ರಾಷ್ಟ್ರೀಯ ಆಂದೋಲನದಲ್ಲಿ ಮಂದಗಾಮಿಗಳ ಮತ್ತು ತೀವ್ರಗಾಮಿಗಳ ಹೋರಾಟದ ವಿಧಾನಗಳನ್ನು ಹೋಲಿಸಿ ಟಿಪ್ಪಣಿ ತಯಾರಿಸಿರಿ.*

ಮಂದಗಾಮಿಗಳ ಮತ್ತು ತೀವ್ರಗಾಮಿಗಳ ಅಭಿಪ್ರಾಯ ವ್ಯತ್ಯಾಸವು 1907ರ ಸೂರತ್ ಕಾಂಗ್ರೆಸ್ ಸಮ್ಮೇಳನದಲ್ಲಿ ತೀವ್ರಗೊಂಡಿತು. ಸಮ್ಮೇಳನವನ್ನು ಮುಂದುವರಿಸುವುದು ಅಸಾಧ್ಯವಾಯಿತು. ಈ ಘಟನೆಗಳು ಕಾಂಗ್ರೆಸ್ಸನ್ನು ವಿಭಜನೆಯತ್ತ ಕೊಂಡೊಯ್ದುವು.

ಕಾಂಗ್ರೆಸ್ಸಿನ ವಿಭಜನೆಯ ಲಾಭವನ್ನು ಬ್ರಿಟಿಷರು ಬಹಳ ಸಮರ್ಥವಾಗಿ ಬಳಸಿಕೊಂಡರು. ಇದು ಬ್ರಿಟಿಷರಿಗೆ ಒಡೆದು ಆಳುವ ನೀತಿಯನ್ನು ಹೆಚ್ಚು ವ್ಯಾಪಕವಾಗಿ ಜಾರಿಗೊಳಿಸಲು ಅವಕಾಶವನ್ನೊದಗಿಸಿತು. ಅವರು ತೀವ್ರಗಾಮಿಗಳಿಗೆದುರಾಗಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾರಂಭಿಸಿದರು. ತೀವ್ರಗಾಮಿ ನೇತಾರರನ್ನು ಬಂಧಿಸಿ ಜೈಲಲ್ಲಿರಿಸಿದರು. ಬಾಲಗಂಗಾಧರ

## ಅಖಿಲ ಭಾರತ ಮುಸ್ಲಿಂ ಲೀಗಿನ ಸ್ಥಾಪನೆ

*ಆಗಾಖಾನ್ ರ ನೇತೃತ್ವದ ಮುಸ್ಲಿಂ ಪ್ರತಿನಿಧಿಗಳ ನಿಯೋಗವು ಸಿಮ್ಲಾದಲ್ಲಿ ಲಾರ್ಡ್ ಮಿಂಟೋ ಅವರನ್ನು ಭೇಟಿಯಾಗಿ ಕೆಲವು ಬೇಡಿಕೆಗಳನ್ನು ಮುಂದಿಟ್ಟಿತು. ಸರಕಾರದ ಎಲ್ಲಾ ವಲಯಗಳಲ್ಲೂ ತಮ್ಮ ಸಮುದಾಯಕ್ಕೆ ವಿಶೇಷ ಪ್ರಾತಿನಿಧ್ಯವನ್ನು ನೀಡಬೇಕೆಂದೂ ಮುಸ್ಲಿಮರಿಗೆ ಪ್ರತ್ಯೇಕ ಮತದಾರ ಕ್ಷೇತ್ರಗಳನ್ನು ನೀಡಬೇಕೆಂದೂ ಅವರು ಒತ್ತಾಯಿಸಿದರು. ಈ ಬೇಡಿಕೆಗಳಿಗೆ ವೈಸರಾಯಿಯವರ ಪ್ರತಿಕ್ರಿಯೆಯು ಸಂಪೂರ್ಣವಾಗಿ ಅನುಕೂಲಕರವಾಗಿತ್ತು. ಇದು ಮುಸ್ಲಿಮರಿಗೆ ಪ್ರತ್ಯೇಕ ರಾಜಕೀಯ ಪಕ್ಷವೊಂದರ ಸ್ಥಾಪನೆಗೆ ಪ್ರೇರಣೆಯಾಯಿತು ಮತ್ತು 1906ರಲ್ಲಿ ಅಖಿಲ ಭಾರತ ಮುಸ್ಲಿಂ ಲೀಗಿನ ಸ್ಥಾಪನೆಗೆ ಕಾರಣವಾಯಿತು.*



*ಚಿತ್ರ 2.19 • ಫಿರೋಜ್‌ಷಾ ಮೆಹ್ತಾ*



*ಚಿತ್ರ 2.20 • ಗೋಪಾಲಕೃಷ್ಣ ಗೋಖಲೆ*

ತಿಲಕರನ್ನೊಳಗೊಂಡಂತೆ ಅನೇಕರನ್ನು ಗಡಿಪಾರು ಮಾಡಿದರು. ಅನೇಕ ನೇತಾರರು ರಾಜಕೀಯವನ್ನು ತ್ಯಜಿಸಿದರು.

ಜನಾಕ್ರೋಶವನ್ನು ಶಮನಗೊಳಿಸಲು ಮತ್ತು ಕಾಂಗ್ರೆಸ್ಸಿನ ಮಂದಗಾಮಿಗಳ ಮನವೊಲಿಸಲು ಕೆಲವು ಆಡಳಿತಾತ್ಮಕ ಸುಧಾರಣೆಗಳನ್ನು ಬ್ರಿಟಿಷರು ಜಾರಿಗೊಳಿಸಿದರು. 1909ರ ಮಿಂಟೋ-ಮೋರ್ಲೆ ಸುಧಾರಣೆಯು ಇವುಗಳಲ್ಲೊಂದಾಗಿದೆ. ಮುಸ್ಲಿಮರಿಗೆ ಪ್ರತ್ಯೇಕ ಮತದಾರ ಕ್ಷೇತ್ರಗಳನ್ನು ರೂಪಿಸುವುದು, ನಿಯಮ ನಿರ್ಮಾಣ ಸಭೆಗಳ ಕಾರ್ಯ ಚಟುವಟಿಕೆಗಳನ್ನು ಮತ್ತು ಅಧಿಕಾರಗಳನ್ನು ವಿಪುಲಗೊಳಿಸುವುದು ಎಂಬಿವುಗಳು ಈ ಸುಧಾರಣೆಯ ಕೆಲವು ಪ್ರಮುಖ ನಿಬಂಧನೆಗಳಾಗಿವೆ.

## ಲಾಲ್-ಬಾಲ್-ಪಾಲ್

*ಲಾಲಾ ಲಜಪತ್ ರಾಯ್, ಬಾಲಗಂಗಾಧರ ತಿಲಕ್ ಮತ್ತು ಬಿಪಿನ್ ಚಂದ್ರಪಾಲ್ ಮುಂತಾದವರು ಸ್ವದೇಶಿ ಚಳುವಳಿಗೆ ಹೆಚ್ಚಿನ ಬಲವನ್ನು ನೀಡುವ ಮೂಲಕ ಬ್ರಿಟಿಷ್ ಆಳ್ವಿಕೆಯನ್ನು ಕೊನೆಗೊಳಿಸಬೇಕಾದುದರ ಅಗತ್ಯವನ್ನು ಒತ್ತಿ ಹೇಳಿದ ತೀವ್ರಗಾಮಿ ನೇತಾರರಾಗಿದ್ದಾರೆ. ಇವರನ್ನು ಲಾಲ್-ಬಾಲ್-ಪಾಲ್ ಎಂದು ಕರೆಯುತ್ತಾರೆ.*



*ಚಿತ್ರ 2.21 • ಲಾಲಾ ಲಜಪತ್ ರಾಯ್*



*ಬಾಲಗಂಗಾಧರ ತಿಲಕ್*



*ಬಿಪಿನ್ ಚಂದ್ರಪಾಲ್*

*ಬಂಗಾಳ ವಿಭಜನೆ ಮತ್ತು ಮಿಂಟೋ – ಮೋರ್ಲೆ ಸುಧಾರಣೆಗಳು ಬ್ರಿಟಿಷರ ಒಡೆದು ಆಳುವ ನೀತಿಗೆ ಉದಾಹರಣೆಗಳಾಗಿವೆ. ಈ ಹೇಳಿಕೆಯ ಕುರಿತಾಗಿ ನಿಮ್ಮ ಪ್ರತಿಕ್ರಿಯೆಗಳನ್ನು ದಾಖಲಿಸಿರಿ.*

## ಹೋಂ ರೂಲ್ ಲೀಗ್



*ಚಿತ್ರ 2.22 • ಅನ್ನಿಬೆಸೆಂಟ್*

1914ರಲ್ಲಿ ಆರಂಭವಾದ ಒಂದನೇ ಜಾಗತಿಕ ಯುದ್ಧದ ಸಂದರ್ಭದಲ್ಲಿ ರಾಜಕೀಯ ಚಟುವಟಿಕೆಗಳು ಮತ್ತೆ ಸಕ್ರಿಯವಾದುವು. ಹೋಂ ರೂಲ್ ಲೀಗ್ ಎಂಬ ಸಂಘಟನೆಯು ಇದಕ್ಕೆ ನೇತೃತ್ವವನ್ನು ನೀಡಿತು. ಅನ್ನಿಬೆಸೆಂಟ್ ಮತ್ತು ಬಾಲಗಂಗಾಧರ ತಿಲಕರ ನೇತೃತ್ವದಲ್ಲಿ ಆರಂಭವಾದ ಹೋಂ ರೂಲ್ ಲೀಗ್‌ಗೆ ನಗರಗಳಲ್ಲಿ ಮತ್ತು ಗ್ರಾಮಗಳಲ್ಲಿ ಜನಮನ್ನಣೆಯನ್ನು ಪಡೆಯಲು ಸಾಧ್ಯವಾಯಿತು. ಹೋಂರೂಲ್ ಅಥವಾ ಸ್ವಯಂ ಆಡಳಿತವು ಈ ಸಂಘಟನೆಯ ಗುರಿಯಾಗಿತ್ತು. ಹೋಂರೂಲ್ ಲೀಗಿನ ಪ್ರಚಾರದ ಭಾಗವಾಗಿ ಅನ್ನಿಬೆಸೆಂಟರು ಮತ್ತು ಬಾಲಗಂಗಾಧರ ತಿಲಕರು ದೇಶದಾದ್ಯಂತ ಸಂಚರಿಸಿದರಲ್ಲದೆ ಇದರ ಶಾಖೆಗಳನ್ನು ಆರಂಭಿಸಿದರು. ಹೋಂ ರೂಲ್ ಲೀಗಿನ ಚಟುವಟಿಕೆಗಳು ಬ್ರಿಟಿಷ್ ಆಡಳಿತಕ್ಕೆ ಬೆದರಿಕೆಯೊಡ್ಡುವುದನ್ನು ಗಮನಿಸಿದ ಸರಕಾರವು ಅನ್ನಿಬೆಸೆಂಟರನ್ನು ಬಂಧಿಸಿ ಸೆರೆಮನೆಯಲ್ಲಿರಿಸಿತು. ಸೆರೆಮನೆಯಿಂದ ಬಿಡುಗಡೆಗೊಂಡ ನಂತರ ಅವರು 1917ರ ಕಲ್ಕತ್ತಾ ಸಮ್ಮೇಳನದಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆಯ್ಕೆಯಾದರು. ಅನ್ನಿಬೆಸೆಂಟರು ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಮೊದಲ ಮಹಿಳೆಯಾಗಿದ್ದಾರೆ.



*ಚಿತ್ರ 2.23 • ಹೋಂ ರೂಲ್ ಲೀಗಿನ ಪ್ರಚಾರ ಕಾರ್ಯಕ್ರಮ*

## ಏಕತೆಯ ಲಕ್ನೋ

1916ರ ಕಾಂಗ್ರೆಸ್ ವಾರ್ಷಿಕ ಸಮ್ಮೇಳನವು ಲಕ್ನೋದಲ್ಲಿ ನಡೆಯಿತು. ಈ ಸಮ್ಮೇಳನವು ಕೆಲವು ಪ್ರಮುಖ ನಿರ್ಧಾರಗಳಿಂದ ಗಮನಾರ್ಹವಾಗಿದೆ. ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಏಕತೆಯಿಂದಿರಲು ಮತ್ತು ಇಂಡಿಯನ್ ನೇಶನಲ್ ಕಾಂಗ್ರೆಸ್ ಹಾಗೂ ಅಖಿಲ ಭಾರತ ಮುಸ್ಲಿಂ ಲೀಗ್ ಒಂದುಗೂಡಿ ಕಾರ್ಯನಿರ್ವಹಿಸಲು ಈ ಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು.

## ವಿಭಿನ್ನ ಹಾದಿಗಳು

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಹೋರಾಟ ವಿಧಾನಗಳಿಗಿಂತ ಭಿನ್ನವಾಗಿ ಕೆಲವರು ರಹಸ್ಯ ಕ್ರಾಂತಿಕಾರಿ ಸಂಘಟನೆಗಳನ್ನು ರಚಿಸಿ ಸಶಸ್ತ್ರ ಹೋರಾಟದ ಮಾರ್ಗವನ್ನು ಅವಲಂಬಿಸಿದರು. ಪಾಶ್ಚಾತ್ಯ ಸಾಮ್ರಾಜ್ಯವನ್ನು ಹಿಂಸೆಯ ಮೂಲಕ ಮಾತ್ರ ಕೊನೆಗೊಳಿಸಲು ಸಾಧ್ಯವೆಂದು ಅವರು ನಂಬಿದ್ದರು. ಅವುಗಳಲ್ಲಿ ಕೆಲವನ್ನು ಪಟ್ಟಿಯಲ್ಲಿ ನೀಡಲಾಗಿದೆ.

| ಕ್ರಾಂತಿಕಾರಿ ಸಂಘಟನೆಗಳು | ಸ್ಥಳ | ನೇತೃತ್ವ ನೀಡಿದವರು |
|---|---|---|
| ಅನುಶೀಲನ್ ಸಮಿತಿ | ಬಂಗಾಳ | ಸಚ್ಚಿಂದ್ರನಾಥ ಸನ್ಯಾಲ್, ಅರಬಿಂದೋ ಘೋಷ್ |
| ಭಾರತ್ ಮಾತಾ ಅಸೋಸಿಯೇಷನ್ | ಮದ್ರಾಸ್ | ನೀಲಕಂಠ ಬ್ರಹ್ಮಚಾರಿ, ವಾಂಜಿ ಅಯ್ಯರ್, ಅಜಿತ್ ಸಿಂಗ್ |
| ಯುಗಾಂತರ್ ಪಾರ್ಟಿ | ಬಂಗಾಳ | ರಾಶ್ ಬಿಹಾರಿ ಬೋಸ್, ಖುದಿರಾಮ್ ಬೋಸ್ |
| ಗದ್ದರ್ ಪಾರ್ಟಿ | ಅಮೇರಿಕ | ಲಾಲಾ ಹರ್‌ದಯಾಳ್ |

ಬ್ರಿಟಿಷರ ವಿವಿಧ ಶೋಷಣೆಗಳು ಮತ್ತು ಅದಕ್ಕೆದುರಾಗಿ ಭಾರತೀಯರ ಪ್ರತಿಭಟನೆಗಳು ಭಾರತದ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾದುವು. ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ರೂಪೀಕರಣದೊಂದಿಗೆ ಬ್ರಿಟಿಷರಿಗೆದುರಾದ ಭಾರತೀಯರ ಪ್ರತಿಭಟನೆಗಳಿಗೆ ಒಂದು ಸಂಘಟಿತ ರೂಪವು ಲಭಿಸಿತು. ಬಂಗಾಳದ ವಿಭಜನೆಗೆದುರಾಗಿ ನಡೆದ ಸ್ವದೇಶಿ ಚಳುವಳಿಯು ಆ ಕಾಲದ ಪ್ರಬಲವಾದ ಜನಪರ ಚಳುವಳಿಯಾಗಿತ್ತು. ಗಾಂಧಿಜಿಯವರು ನೇತೃತ್ವವನ್ನು ವಹಿಸಿದ ನಂತರ ಸ್ವಾತಂತ್ರ್ಯ ಹೋರಾಟವು ಮತ್ತಷ್ಟು ಜನಪರ ಮತ್ತು ಶಕ್ತಿಯುತವಾಯಿತು.

## ಮುಂದುವರಿದ ಚಟುವಟಿಕೆಗಳು

- 'ನೀಲ್ ದರ್ಪಣ್' ಎಂಬ ನಾಟಕದ ಹೆಚ್ಚಿನ ಸಂಭಾಷಣೆಗಳನ್ನು ಸೇರಿಸಿ ಒಂದು ರೋಲ್ ಪ್ಲೇ ಅಭಿನಯಿಸಿರಿ.
- ಭಾರತದ ವಿವಿಧ ಸಮಾಜ ಸುಧಾರಕರು ಮತ್ತು ಅವರ ಚಳುವಳಿಗಳನ್ನು ಒಳಗೊಂಡ ಡಿಜಿಟಲ್ ಮ್ಯಾಗಜಿನ್/ ಡಿಜಿಟಲ್ ಪ್ರಸೆಂಟೇಷನ್ ತಯಾರಿಸಿರಿ.
- ರಾಷ್ಟ್ರೀಯತೆಯನ್ನು ಪ್ರತಿಬಿಂಬಿಸುವ ಕವಿತೆಗಳು, ಹಾಡುಗಳು ಮೊದಲಾದವುಗಳನ್ನು ಸಂಗ್ರಹಿಸಿ ಮಂಡಿಸಿರಿ.

ಅಧ್ಯಾಯ 3



# ಭೂಮಿಯ ಚಲನೆಗಳು : ಭ್ರಮಣ ಮತ್ತು ಪರಿಕ್ರಮಣ

ಹಲೋ ಶ್ರುತಿ... ಹೊಸ ವರುಷದ ಶುಭಾಶಯಗಳು!
ಹೊಸ ವರ್ಷಾಚರಣೆ ಆರಂಭವಾಯಿತೆ?

ಹಾಯ್ ರಾಹುಲ್! ಇಲ್ಲಿ ಭಾರತದಲ್ಲಿ ಹೊಸ ವರ್ಷ ಆಗಮನವಾಗಲಿಲ್ಲ. ಇನ್ನೂ ಐದೂವರೆ ಗಂಟೆಗಳ ಬಳಿಕವೇ ಇಲ್ಲಿ ಹೊಸ ವರ್ಷವಾಗುವುದು.

ಓ ಸರಿ, ನಾನದನ್ನು ಮರೆತೆನು. ಇಲ್ಲಿ ಆಸ್ಟ್ರೇಲಿಯಾದಲ್ಲಿ ಭಾರತಕ್ಕಿಂತ ಮೊದಲೇ ಹೊಸ ವರ್ಷ ಆಗಮಿಸುತ್ತದೆಯಲ್ಲವೇ.

ಅಲ್ಲಿ ಚಳಿ ಹೇಗಿದೆ?
ಇಲ್ಲಿ ಒಳ್ಳೆಯ ತಂಪು ಹವೆ ಇದೆ.
ಸಂಜೆ ಬೇಗನೆ ಕತ್ತಲೆ ಕವಿಯುತ್ತದೆ.

ಅದಲ್ಲವೇ ತಮಾಷೆ! ಇಲ್ಲಿ ಈಗ ಬೇಸಿಗೆ ಕಾಲ.
ರಾತ್ರಿ 8 ಗಂಟೆಯವರೆಗೆ ಸೂರ್ಯಪ್ರಕಾಶವಿರುತ್ತದೆ.



*ಚಿತ್ರ 3.1*



*ಚಿತ್ರ 3.2*

ಆಸ್ಟ್ರೇಲಿಯಾ ಮತ್ತು ಭಾರತದಲ್ಲಿರುವ ಗೆಳೆಯರ ಸಂಭಾಷಣೆಯನ್ನು ಗಮನಿಸಿದಿರಲ್ಲವೇ. ಎರಡು ವಿಭಿನ್ನ ಸ್ಥಳಗಳಲ್ಲಿ ಅನುಭವಕ್ಕೆ ಬರುವ ಸಮಯ ವ್ಯತ್ಯಾಸ ಮತ್ತು ಅಲ್ಲಿರುವ ಋತುಗಳೊಳಗಿನ ಬದಲಾವಣೆಗಳನ್ನು ಸಂಭಾಷಣೆಯಲ್ಲಿ ಹೇಳಲಾಗಿದೆ. ದೈನಂದಿನ ಜೀವನದಲ್ಲಿ ನಾವು ಅನುಭವಿಸುವ ಈ ವಿದ್ಯಮಾನಗಳ ವಿಶೇಷತೆಗಳು ಯಾವುವೆಂದು ಪರಿಶೀಲಿಸೋಣ.

## ಭ್ರಮಣ (Rotation)

ಭ್ರಮಣದ ಕುರಿತು ಹಿಂದಿನ ತರಗತಿಗಳಲ್ಲಿ ಚರ್ಚಿಸಿದ್ದೇವಲ್ಲವೆ?

*ಭ್ರಮಣಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಚಿತ್ರವನ್ನು ನಿರೀಕ್ಷಿಸಿ ಉತ್ತರವನ್ನು ಕಂಡುಹಿಡಿಯಿರಿ.*




• ಚಿತ್ರ 3.3

| | |
|---|---|
| • *ಭೂಮಿಯ ಭ್ರಮಣದ ದಿಕ್ಕು* | |
| • *ಅಕ್ಷದ ಬಾಗುವಿಕೆ* | |

### ಶುಕ್ರ ಮತ್ತು ಯುರೇನಸ್

*ಸೌರವ್ಯೂಹದ ಶುಕ್ರ ಗ್ರಹ ಮತ್ತು ಯುರೇನಸ್ ಗ್ರಹವನ್ನು ಬಿಟ್ಟು ಉಳಿದ ಎಲ್ಲಾ ಗ್ರಹಗಳ ಭ್ರಮಣದ ದಿಕ್ಕು ಪಶ್ಚಿಮದಿಂದ ಪೂರ್ವಕ್ಕೆ ಆಗಿದೆ. ಆದರೆ ಶುಕ್ರನ ಮತ್ತು ಯುರೇನಸ್‌ನ ಭ್ರಮಣದ ದಿಕ್ಕು ಪೂರ್ವದಿಂದ ಪಶ್ಚಿಮಕ್ಕೆ ಆಗಿದೆ.*

ಚಿತ್ರದಿಂದ ಭೂಮಿಯ ಭ್ರಮಣವು ಪಶ್ಚಿಮದಿಂದ ಪೂರ್ವಕ್ಕೆ ಆಗಿದೆಯೆಂದು ತಿಳಿದಿರಲ್ಲವೇ. ಆದಕಾರಣ ಸೂರ್ಯನು ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಅಸ್ತಮಿಸುವಂತೆ ನಮಗೆ ಕಂಡುಬರುತ್ತಾನೆ.

ಹಗಲು ರಾತ್ರಿಗಳು ಮತ್ತು ಕೋರಿಯೋಲಿಸ್ ಪ್ರಭಾವವು ಭ್ರಮಣದ ಪರಿಣಾಮವಾಗಿ ಉಂಟಾಗುವ ಪ್ರಮುಖವಾದ ಬದಲಾವಣೆಗಳಾಗಿವೆ.

## ಹಗಲು ರಾತ್ರಿಗಳು

ಭ್ರಮಣವನ್ನು ಪೂರ್ತಿಗೊಳಿಸಲು ಭೂಮಿಯು ತೆಗೆದುಕೊಳ್ಳುವ ಸಮಯ 24 ಗಂಟೆಯಾಗಿದೆಯೆಂದು (23 ಗಂಟೆ 56 ಮಿನಿಟು 4 ಸೆಕೆಂಡು) ನಿಮಗೆ ತಿಳಿದಿದೆಯಲ್ಲವೇ. ಸೂರ್ಯನಿಂದ ಭೂಮಿಗೆ ಪ್ರಕಾಶವು ಲಭಿಸುತ್ತದೆ. ಭ್ರಮಣದ ವೇಳೆಯಲ್ಲಿ ಸೂರ್ಯನಿಗೆ ಅಭಿಮುಖವಾಗಿರುವ ಪ್ರದೇಶಗಳಲ್ಲಿ ಹಗಲೂ ವಿರುದ್ಧ ಭಾಗದಲ್ಲಿರುವ ಪ್ರದೇಶಗಳಲ್ಲಿ ರಾತ್ರಿಯೂ ಆಗಿರುತ್ತದೆ. ಹೀಗೆ ಭೂಮಿಯ ಹಗಲು ಮತ್ತು ರಾತ್ರಿಯನ್ನು ಬೇರ್ಪಡಿಸುವ ಕಾಲ್ಪನಿಕ ರೇಖೆಯೇ ಪ್ರಕಾಶ ವೃತ್ತವಾಗಿದೆ (Circle of Illumination). ಭೂಮಿಯ ಅಕ್ಷ ಮತ್ತು ಪ್ರಕಾಶ ವೃತ್ತವು ಸಮಾನಾಂತರವಾಗಿಲ್ಲ ಎಂಬುದು ಚಿತ್ರ 3.4 ರಿಂದ ಸ್ಪಷ್ಟವಾಯಿತಲ್ಲವೆ?




• ಚಿತ್ರ 3.4

ಭ್ರಮಣವು ಇಲ್ಲದೇ ಇರುತ್ತಿದ್ದರೆ ಭೂಮಿಯ ಹಗಲು ರಾತ್ರಿಗಳ ಸ್ಥಿತಿಯು ಏನಾಗುತ್ತಿತ್ತು ಎಂದು ಆಲೋಚಿಸಿರಿ.

## ಕೋರಿಯೋಲಿಸ್ ಪ್ರಭಾವ (Coriolis Effect)



• ಚಿತ್ರ 3.5 ಅಡ್ಮಿರಲ್ ಫೆರಲ್

ಭೂಭ್ರಮಣದಿಂದಾಗಿ ಭೂಮಿಯ ಮೇಲ್ಮೈಯಲ್ಲಿ ಸ್ವತಂತ್ರವಾಗಿ ಚಲಿಸುವ ವಸ್ತುಗಳಿಗೆ ದಿಕ್ಕು ಬದಲಾವಣೆ ಸಂಭವಿಸುತ್ತದೆ. ಇದಕ್ಕೆ ಕಾರಣವಾದ ಬಲವನ್ನು ಕೋರಿಯೋಲಿಸ್ ಬಲ (Coriolis Force) ಎಂದೂ ಈ ದಿಕ್ಪಲ್ಲಟವನ್ನು ಕೋರಿಯೋಲಿಸ್ ಪ್ರಭಾವವೆಂದೂ ಕರೆಯುತ್ತಾರೆ.

ಕೋರಿಯೋಲಿಸ್ ಪ್ರಭಾವದಿಂದ ಸಾಗರ ಜಲಪ್ರವಾಹಗಳ ಹಾಗೂ ಮಾರುತಗಳ ಸಂಚಾರ ದಿಕ್ಕು ಉತ್ತರಾರ್ಧಗೋಲದಲ್ಲಿ ಬಲಕ್ಕೂ ದಕ್ಷಿಣಾರ್ಧಗೋಲದಲ್ಲಿ ಎಡಕ್ಕೂ ಗತಿ ಬದಲಾಯಿಸಿ ಚಲಿಸುತ್ತವೆಯೆಂದು ಅಡ್ಮಿರಲ್ ಫೆರಲ್ ಕಂಡುಹಿಡಿದನು. ಇದನ್ನು ಫೆರಲನ ನಿಯಮ (Ferrel's Law) ಎನ್ನುತ್ತಾರೆ.

*ಭ್ರಮಣದ ಕುರಿತಾದ ಕೆಲವು ವಿಚಾರಗಳನ್ನು ಕೆಳಗೆ ಕೊಡಲಾಗಿದೆ. ಅವುಗಳ ಕಾರಣಗಳನ್ನು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| | |
|---|---|
| • ಸೂರ್ಯನು ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಅಸ್ತಮಿಸುತ್ತಾನೆ. | |
| • ಎರಡೂ ಅರ್ಧಗೋಲಗಳಲ್ಲಿ ಸ್ವತಂತ್ರವಾಗಿ ಚಲಿಸುವ ವಸ್ತುಗಳು ದಿಕ್ಪಲ್ಲಟಗೊಳ್ಳುತ್ತವೆ. | |

## ಪರಿಕ್ರಮಣ (Revolution)

ಚಿತ್ರ 3.6ನ್ನು ಗಮನಿಸಿರಿ. ಭೂಮಿಯು ತನ್ನ ಅಕ್ಷದಲ್ಲಿ ಸುತ್ತುವುದರೊಂದಿಗೆ ನಿಶ್ಚಿತ ಭ್ರಮಣ ಪಥದ ಮೂಲಕ ಸೂರ್ಯನಿಗೂ ಪ್ರದಕ್ಷಿಣೆ ಬರುತ್ತದೆ. ಇದನ್ನು ಪರಿಕ್ರಮಣ ಎಂದು ಕರೆಯುತ್ತಾರೆ.ಹೀಗೆ ದೀರ್ಘ ವೃತ್ತಾಕಾರದಲ್ಲಿರುವ ಸಂಚಾರ ಪಥದ ಮೂಲಕ ಒಂದು ಪರಿಕ್ರಮಣವನ್ನು ಪೂರ್ತಿಗೊಳಿಸಲು 365¼ ದಿನಗಳು ಬೇಕಾಗುತ್ತವೆ. ಪ್ರಾಯೋಗಿಕ ಅನುಕೂಲಕ್ಕಾಗಿ ಇದರಲ್ಲಿ 365 ದಿನಗಳನ್ನು ಒಂದು ವರ್ಷವಾಗಿ ಪರಿಗಣಿಸಲಾಗುತ್ತದೆ.ಪ್ರತಿಯೊಂದು ವರ್ಷದಲ್ಲಿ ಅಧಿಕವಾಗಿ ಬರುವ ಕಾಲು (¼) ದಿನವನ್ನು ನಾಲ್ಕು ವರ್ಷಗಳಿಗೊಮ್ಮೆ ಒಟ್ಟು ಸೇರಿಸಿ ಫೆಬ್ರವರಿ ತಿಂಗಳಲ್ಲಿ 29 ದಿನಗಳಾಗಿ ಲೆಕ್ಕಹಾಕಲಾಗುತ್ತದೆ. ಈ ರೀತಿಯಲ್ಲಿ 366 ದಿನಗಳುಳ್ಳ ವರ್ಷವನ್ನು ಅಧಿಕ ವರ್ಷ (Leap Year) ಎಂದು ಕರೆಯುತ್ತಾರೆ.




• ಚಿತ್ರ 3.6

ಫೆಬ್ರವರಿ 2024

| Sunday | Monday | Tuesday | Wednesday | Thursday | Friday | Saturday |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | | |

*ಕೊಟ್ಟಿರುವ ಕ್ಯಾಲೆಂಡರಿನಿಂದ 2024 ಒಂದು ಅಧಿಕವರ್ಷವಾಗಿದೆ ಎಂದು ತಿಳಿಯಿತಲ್ಲವೇ.*

*2024ರ ನಂತರ ನಿರಂತರವಾಗಿ ಬರುವ ಐದು ಅಧಿಕವರ್ಷಗಳನ್ನು ಕಂಡುಹಿಡಿಯಿರಿ.*

## ಪ್ರೆಸೆಶನ್ (ಬುಗುರಿ ಚಲನೆ) (Precession)




• *ಚಿತ್ರ 3.7*

*ಭೂಮಿಯ ಅಕ್ಷದ ಚಲನೆಯಾದ ಪ್ರೆಸೆಶನ್ ಎಂದರೆ ಭ್ರಮಣ ಮತ್ತು ಪರಿಕ್ರಮಣಗಳಂತೆಯೇ ಇರುವ ಭೂಮಿಯ ಇನ್ನೊಂದು ಚಲನೆಯಾಗಿದೆ.ಭೂಮಿಯು ತನ್ನ ಅಕ್ಷದಲ್ಲಿ ಒಂದು ಭ್ರಮಣವನ್ನು ಪೂರ್ತಿಗೊಳಿಸಲು 24 ಗಂಟೆಗಳನ್ನು ತೆಗೆದುಕೊಳ್ಳುವಾಗ ಸುಮಾರು 26,000 ವರ್ಷಗಳನ್ನು ತೆಗೆದುಕೊಂಡು ಚಿತ್ರದಲ್ಲಿ ಕಂಡುಬರುವಂತೆ ಒಂದು ವೃತ್ತವನ್ನು ಉಂಟುಮಾಡುವ ರೀತಿಯಲ್ಲಿ ಬಹಳ ನಿಧಾನಗತಿಯಲ್ಲಿ ಭೂಮಿಯ ಅಕ್ಷವು ಚಲಿಸುತ್ತದೆ.*

## ಸೂರ್ಯನೀಚಬಿಂದು (Perihelion) ಮತ್ತು ಸೂರ್ಯೋಚ್ಚ ಬಿಂದು (Aphelion)

ಭೂಮಿಯ ಸಂಚಾರ ಪಥವು ದೀರ್ಘ ವೃತ್ತಾಕಾರದಲ್ಲಾಗಿರುವುದರಿಂದ ಭೂಮಿ ಮತ್ತು ಸೂರ್ಯನ ಮಧ್ಯೆ ಇರುವ ದೂರಕ್ಕೆ ಕೆಲವೊಂದು ದಿನಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಒಂದು ಪರಿಕ್ರಮಣ ವೇಳೆಯಲ್ಲಿ ಸೂರ್ಯನು ಭೂಮಿಯ ಅತಿ ಸಮೀಪಕ್ಕೆ ಬರುವುದನ್ನು (147 ದಶಲಕ್ಷ ಕಿಲೋಮೀಟರ್) ಸೂರ್ಯನೀಚಬಿಂದು (Perihelion) ಎನ್ನುತ್ತಾರೆ. ಇದು ಜನವರಿ ತಿಂಗಳಿನಲ್ಲಿ (ಸಾಮಾನ್ಯವಾಗಿ ಜನವರಿ 3) ಸಂಭವಿಸುತ್ತದೆ. ಜುಲೈ (ಸಾಮಾನ್ಯವಾಗಿ ಜುಲೈ 4) ತಿಂಗಳಿನಲ್ಲಿ ಸೂರ್ಯ ಮತ್ತು ಭೂಮಿಯ ನಡುವಿನ ಅಂತರವು ಅತ್ಯಂತ ಹೆಚ್ಚಾಗಿರುತ್ತದೆ (152 ದಶಲಕ್ಷ ಕಿಲೋಮೀಟರ್). ಇದನ್ನು ಸೂರ್ಯೋಚ್ಚಬಿಂದು (Aphelion) ಎನ್ನುತ್ತಾರೆ.




• *ಚಿತ್ರ 3.8*

ಭೂಮಿಯ ಪರಿಕ್ರಮಣ ವೇಗವು ಒಂದು ಸೆಕೆಂಡಿಗೆ ಸುಮಾರು 30 ಕಿಲೋಮೀಟರ್ ಆಗಿದೆ. ಸೂರ್ಯ ಮತ್ತು ಭೂಮಿಯ ಮಧ್ಯೆ ಇರುವ ಅಂತರದಲ್ಲಿ ಉಂಟಾಗುವ ಬದಲಾವಣೆಯು ಗುರುತ್ವಾಕರ್ಷಣಾ ಬಲದಲ್ಲಿ ವ್ಯತ್ಯಾಸ ಉಂಟಾಗಲು ಹಾಗೂ ಆ ಮೂಲಕ ಪರಿಕ್ರಮಣ ವೇಗದಲ್ಲಿ ವ್ಯತ್ಯಾಸ ಉಂಟಾಗುವುದಕ್ಕೂ ಕಾರಣವಾಗುತ್ತದೆ.

## ಅಯನ (Apparent Movement of the Sun)




• *ಚಿತ್ರ 3.9 ಅಪೇಕ್ಷಿತ ಸ್ಥಾನವನ್ನು ಸ್ಪಷ್ಟಪಡಿಸಲಿರುವ ಚಿತ್ರಣ. ಮಾನದ ಆಧಾರದಲ್ಲಿಲ್ಲ*

ಅಕ್ಷದ 23½° ವಾಲುವಿಕೆಯು ಪರಿಕ್ರಮಣದುದ್ದಕ್ಕೂ ಸ್ಥಿರವಾಗಿರುವುದರಿಂದ ಸೂರ್ಯನ ಅಪೇಕ್ಷಿತ ಸ್ಥಾನಬದಲಾವಣೆಯು ದಕ್ಷಿಣದಲ್ಲಿ ದಕ್ಷಿಣಾಯನ ರೇಖೆ ಮತ್ತು ಉತ್ತರದಲ್ಲಿ ಉತ್ತರಾಯಣ ರೇಖೆಗಳ ಮಧ್ಯೆ ಉಂಟಾಗುತ್ತದೆ. ಸೂರ್ಯನ ಈ ಅಪೇಕ್ಷಿತ ಸ್ಥಾನ ಬದಲಾವಣೆಯನ್ನು ಅಯನ ಎಂದು ಕರೆಯುತ್ತಾರೆ. ಇದಕ್ಕೆ ಅನುಸಾರವಾಗಿ ದಿನರಾತ್ರಿಗಳ ಅವಧಿಯಲ್ಲಿ (ದೈರ್ಘ್ಯ) ವ್ಯತ್ಯಾಸ ಅನುಭವಕ್ಕೆ ಬರುತ್ತದೆ. ಹೀಗೆ ಸೂರ್ಯನ ಸ್ಥಾನವು ವಿವಿಧ ಅಕ್ಷಾಂಶಗಳ ನೇರ ಮೇಲ್ಭಾಗದಲ್ಲಿ ಬರುವಂತಹ ಕೆಲವು ಪ್ರಮುಖ ದಿನಗಳು ಯಾವುವೆಂದು ನೋಡೋಣ.

## ಸಮರಾತ್ರಿ ದಿನ / ವಿಷುವತ್ಸಂಕ್ರಾಂತಿ (Equinox)




*ಚಿತ್ರ 3.10*

*ಚಿತ್ರ3.10 ನ್ನು ನಿರೀಕ್ಷಿಸಿ ಉತ್ತರ ಕಂಡುಹಿಡಿಯಿರಿ.*

- *ಸೂರ್ಯನ ಕಿರಣಗಳು ಯಾವ ಅಕ್ಷಾಂಶ ರೇಖೆಗೆ ಲಂಬವಾಗಿ ಬೀಳುತ್ತವೆ?*
- *ಯಾವ ಯಾವ ದಿನಗಳಲ್ಲಿ ಹೀಗೆ ಸಂಭವಿಸುತ್ತದೆ?*

ಪರಿಕ್ರಮಣದ ವೇಳೆಯಲ್ಲಿ ಭೂಮಧ್ಯ ರೇಖೆಯಲ್ಲಿ ಸೂರ್ಯನ ಕಿರಣಗಳು ಲಂಬವಾಗಿ ಬೀಳುವ ದಿನಗಳಾದ ಮಾರ್ಚ್ 21 ಮತ್ತು ಸೆಪ್ಟೆಂಬರ್ 23ರಂದು ಎರಡೂ ಅರ್ಧ ಗೋಲಗಳಲ್ಲಿ ರಾತ್ರಿ ಮತ್ತು ಹಗಲಿನ ಅವಧಿಯು ಸಮಾನವಾಗಿರುತ್ತದೆ. ಈ ದಿನಗಳನ್ನು ವಿಷುವತ್ಸಂಕ್ರಾಂತಿ ಅಥವಾ ಸಮರಾತ್ರಿ ದಿನಗಳು (Equinox) ಎಂದು ಕರೆಯುತ್ತಾರೆ. ಮಾರ್ಚ್ 21ನ್ನು ವಸಂತ ವಿಷುವತ್ಸಂಕ್ರಾಂತಿ (Spring Equinox) ಎಂದೂ ಸೆಪ್ಟೆಂಬರ್ 23 ನ್ನು ಶರತ್ ವಿಷುವತ್ಸಂಕ್ರಾಂತಿ (Autumnal Equinox) ಎಂದೂ ಕರೆಯುತ್ತಾರೆ. ಚಿತ್ರ 3.6 ನ್ನು ಕೂಡಾ ನಿರೀಕ್ಷಿಸಿ ಸಮರಾತ್ರಿ ದಿನಗಳಲ್ಲಿ ಭೂಮಿಯ ಯಾವ ಭಾಗಕ್ಕೆ ಸೂರ್ಯರಶ್ಮಿಗಳು ಲಂಬವಾಗಿ ಬೀಳುತ್ತವೆ ಎಂಬುದನ್ನು ತಿಳಿದುಕೊಳ್ಳಿರಿ.

*ಕ್ಯಾಲೆಂಡರಿನಲ್ಲಿ ಕೊಟ್ಟಿರುವ ಸೂರ್ಯೋದಯ ಮತ್ತು ಸೂರ್ಯಾಸ್ತಮಾನದ ಸಮಯದ ಆಧಾರದಲ್ಲಿ ಮಾರ್ಚ್ 21 ಮತ್ತು ಸೆಪ್ಟೆಂಬರ್ 23 ಎಂಬೀ ದಿನಗಳಲ್ಲಿ ನಿಮ್ಮ ಪ್ರದೇಶದ ಹಗಲಿನ ಅವಧಿಯನ್ನು ಕಂಡುಹಿಡಿಯಿರಿ.*

## ಗ್ರೀಷ್ಮ ಅಯನಾಂತ (Summer Solstice)




*ಚಿತ್ರ 3.11*
*ಆಶಯ ಸ್ಪಷ್ಟತೆಗಿರುವ ಚಿತ್ರಣ. ಮಾನದ ಆಧಾರದಲ್ಲಿಲ್ಲ*

### *ಸೂರ್ಯನ ಅಪೇಕ್ಷಿತ ಸ್ಥಾನ*

*ಉತ್ತರಾಯಣ ರೇಖೆ ಮತ್ತು ದಕ್ಷಿಣಾಯನ ರೇಖೆಗಳ ಮಧ್ಯದಲ್ಲಿ ಸೂರ್ಯನ ಸ್ಥಾನವು ಬದಲಾಗುವುದಾಗಿ ಕಂಡುಬರುತ್ತದೆ. ವಾಸ್ತವಿಕವಾಗಿ ಭೂಮಿಯ ಅಕ್ಷದ ಬಾಗುವಿಕೆ ಮತ್ತು ಪರಿಕ್ರಮಣದ ಫಲವಾಗಿ ಭೂಮಿಯಿಂದ ನೋಡುವಾಗ ಸೂರ್ಯನ ಸ್ಥಾನವು ಬದಲಾಗುವುದಾಗಿ ನಮಗೆ ಕಂಡುಬರುತ್ತದೆ.*

*ಚಿತ್ರ 3.11 ಗಮನಿಸಿರಿ.*

- *ಮಾರ್ಚ್ 21ರ ನಂತರ ಸೂರ್ಯನ ಅಪೇಕ್ಷಿತ ಸ್ಥಾನವು ಯಾವ ದಿಕ್ಕಿಗೆ ಬದಲಾಗುತ್ತದೆ?*
- *ಜೂನ್ 21ರಂದು ಯಾವ ಅಕ್ಷಾಂಶ ರೇಖೆಯ ಮೇಲೆ ಸೂರ್ಯನ ಕಿರಣಗಳು ಲಂಬವಾಗಿ ಬೀಳುತ್ತವೆ?*

ಉತ್ತರಾರ್ಧಗೋಲದಲ್ಲಿ ಮಾರ್ಚ್ 21ರಿಂದ ಜೂನ್ 21ರ ವರೆಗಿನ ಕಾಲಾವಧಿಯಲ್ಲಿ ಭೂಮಧ್ಯ ರೇಖೆಯಿಂದ ಸೂರ್ಯನ ಅಪೇಕ್ಷಿತ ಸ್ಥಾನ ಬದಲಾವಣೆಯು ಉತ್ತರದಲ್ಲಿ ಉತ್ತರಾಯಣ ರೇಖೆಯವರೆಗೆ ಆಗಿದೆ. ತತ್ಪರಿಣಾಮವಾಗಿ ಉತ್ತರಾರ್ಧಗೋಲದಲ್ಲಿ ಜೂನ್ 21ರಂದು ಅತ್ಯಂತ ದೀರ್ಘವಾದ ಹಗಲು ಮತ್ತು ಹ್ರಸ್ವವಾದ ರಾತ್ರಿಯು ಅನುಭವಕ್ಕೆ ಬರುತ್ತದೆ. ಈ ದಿನವನ್ನು ಗ್ರೀಷ್ಮಾಯನಾಂತ ದಿನ ಎಂದು ಕರೆಯುತ್ತಾರೆ. ಚಿತ್ರ 3.6 ನೋಡಿ ಗ್ರೀಷ್ಮಾಯನಾಂತ ದಿನದಂದು ಭೂಮಿಯ ಯಾವ ಭಾಗಕ್ಕೆ ಸೂರ್ಯರಶ್ಮಿಗಳು ಲಂಬವಾಗಿ ಬೀಳುತ್ತವೆ ಎಂಬುದನ್ನು ಗುರುತಿಸಬಹುದಲ್ಲವೆ?

ಮಾರ್ಚ್‌ನಿಂದ ಸೆಪ್ಟೆಂಬರ್‌ವರೆಗಿನ ಆರು ತಿಂಗಳುಗಳ ಕಾಲ ಸೂರ್ಯನು ಉತ್ತರಾರ್ಧಗೋಲದಲ್ಲಿರುವುದರಿಂದ ಈ ಕಾಲಾವಧಿಯಲ್ಲಿ ಉತ್ತರಧ್ರುವ ಪ್ರದೇಶಗಳಲ್ಲಿ ಆರು ತಿಂಗಳುಗಳ ಕಾಲ ನಿರಂತರವಾದ ಹಗಲು ಅನುಭವಕ್ಕೆ ಬರುತ್ತದೆ.

### ಸೂರ್ಯನ ಚಲನೆಗಳು

*ಭೂಮಿ ಮತ್ತು ಚಂದ್ರನಂತೆ ಸಮಾನವಾದ ರೀತಿಯಲ್ಲಿ ಸೂರ್ಯನಿಗೂ ಎರಡು ವಿಧದ ಚಲನೆಗಳಿವೆ - ಅವು ಭ್ರಮಣ ಮತ್ತು ಪರಿಕ್ರಮಣಗಳಾಗಿವೆ. ಸೂರ್ಯನು ತನ್ನ ಅಕ್ಷದಲ್ಲಿ 27 ದಿನಗಳಲ್ಲಿ ಒಂದು ಭ್ರಮಣವನ್ನು ಪೂರ್ತಿಗೊಳಿಸುತ್ತಾನೆ. ಆದರೆ ಸೂರ್ಯನನ್ನು ಒಳಗೊಂಡ ಸೌರವ್ಯೂಹವು ನಕ್ಷತ್ರಪುಂಜವಾದ ಕ್ಷೀರಪಥದ ಕೇಂದ್ರಕ್ಕೆ ಒಂದು ಪರಿಕ್ರಮಣವನ್ನು ಪೂರ್ತಿಗೊಳಿಸಲು ಸುಮಾರು 230 ರಿಂದ 250 ದಶಲಕ್ಷ ವರ್ಷಗಳು ಬೇಕಾಗುತ್ತದೆ.*

ಉತ್ತರಾರ್ಧಗೋಲದ ಗ್ರೀಷ್ಮಾಯನಾಂತ ದಿನದಂದು (ಜೂನ್ 21) ವಿವಿಧ ಅಕ್ಷಾಂಶ ರೇಖೆಗಳಲ್ಲಿ ಹಗಲಿನ ಅವಧಿಯನ್ನು ಸೂಚಿಸುವ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ.

| ಅಕ್ಷಾಂಶರೇಖೆ | ಹಗಲಿನ ಅವಧಿ |
|---|---|
| $90^0$ ಉತ್ತರ | 24 ಗಂಟೆ |
| $66½^0$ ಉತ್ತರ | 24 ಗಂಟೆ |
| $23½^0$ ಉತ್ತರ | 13 ಗಂಟೆ 27 ನಿಮಿಷ |
| $0^0$ | 12 ಗಂಟೆ |
| $23½^0$ ದಕ್ಷಿಣ | 10 ಗಂಟೆ 33 ನಿಮಿಷ |
| $66½^0$ ದಕ್ಷಿಣ | ಇಲ್ಲ |
| $90^0$ ದಕ್ಷಿಣ | ಇಲ್ಲ |

*ಗ್ರೀಷ್ಮಾಯನಾಂತ ದಿನ (ಜೂನ್ 21) ದಂದು ದಕ್ಷಿಣಾರ್ಧಗೋಲದ ಹಗಲಿನ ಅವಧಿಯಲ್ಲಿ ಯಾವ ಬದಲಾವಣೆ ಉಂಟಾಗುತ್ತದೆ?*

*ಉತ್ತರಾರ್ಧಗೋಲದ ಧ್ರುವ ಪ್ರದೇಶದಲ್ಲಿ ಆರು ತಿಂಗಳುಗಳ ಕಾಲ ಹಗಲಾಗಿರುತ್ತದೆ. ಹಾಗಾದರೆ ಈ ಕಾಲಾವಧಿಯಲ್ಲಿ ದಕ್ಷಿಣ ಧ್ರುವ ಪ್ರದೇಶಗಳಲ್ಲಿ ರಾತ್ರಿಯ ಅವಧಿಯು ಎಷ್ಟಾಗಿರಬಹುದು?*

## ಶೈತ್ಯ ಅಯನಾಂತ (Winter Solstice)




*ಚಿತ್ರ 3.12* •

*ಆಶಯ ಸ್ಪಷ್ಟತೆಗಿರುವ ಚಿತ್ರಣ. ಮಾನದ ಆಧಾರದಲ್ಲಿಲ್ಲ*

*ಚಿತ್ರ 3.12 ಗಮನಿಸಿರಿ.*
*ಸೆಪ್ಟೆಂಬರ್ 23ರಿಂದ ಸೂರ್ಯನ ಅಪೇಕ್ಷಿತ ಸ್ಥಾನವು ಯಾವ ದಿಕ್ಕಿಗೆ ಬದಲಾಗುತ್ತದೆ?*
*ಡಿಸೆಂಬರ್ 22ರಂದು ಸೂರ್ಯನ ಕಿರಣಗಳು ಯಾವ ಅಕ್ಷಾಂಶ ರೇಖೆಯ ಮೇಲೆ ಲಂಬವಾಗಿ ಬೀಳುತ್ತವೆ?*

ದಕ್ಷಿಣಾರ್ಧಗೋಲದಲ್ಲಿ ಸೆಪ್ಟೆಂಬರ್ 23ರಿಂದ ಡಿಸೆಂಬರ್ 22 ರವರೆಗಿನ ಕಾಲಾವಧಿಯಲ್ಲಿ ಭೂಮಧ್ಯರೇಖೆಯಿಂದ ಸೂರ್ಯನ ಅಪೇಕ್ಷಿತ ಸ್ಥಾನ ಬದಲಾವಣೆಯು ದಕ್ಷಿಣಕ್ಕೆ ದಕ್ಷಿಣಾಯನ ರೇಖೆಯವರೆಗಾಗಿರುತ್ತದೆ. ಇದರ ಪರಿಣಾಮವಾಗಿ ಡಿಸೆಂಬರ್ 22ರಂದು ದಕ್ಷಿಣಾರ್ಧಗೋಲದಲ್ಲಿ ಅತ್ಯಂತ ದೀರ್ಘವಾದ ಹಗಲು ಹಾಗೂ ಅತ್ಯಂತ ಹ್ರಸ್ವವಾದ ರಾತ್ರಿಯು ಅನುಭವಕ್ಕೆ ಬರುತ್ತದೆ. ಈ ದಿನವನ್ನು ಶೈತ್ಯಾಯನಾಂತ ದಿನ ಎಂದು ಕರೆಯುತ್ತಾರೆ. ಚಿತ್ರ 3.6 ನಿರೀಕ್ಷಿಸಿ ಶೈತ್ಯಾಯನಾಂತ ದಿನದಂದು ಭೂಮಿಯ ಯಾವ ಭಾಗಕ್ಕೆ ಸೂರ್ಯ ರಶ್ಮಿಗಳು ಲಂಬವಾಗಿ ಬೀಳುತ್ತವೆ ಎಂಬುದನ್ನು ತಿಳಿಯಿರಿ.

ಸೆಪ್ಟೆಂಬರ್ ತಿಂಗಳಿನಿಂದ ಮಾರ್ಚ್ ತಿಂಗಳವರೆಗೆ ಆರು ತಿಂಗಳುಗಳ ಕಾಲ ಸೂರ್ಯನ ಅಪೇಕ್ಷಿತ ಸ್ಥಾನವು ದಕ್ಷಿಣಾರ್ಧಗೋಲದಲ್ಲಿರುವುದರಿಂದ ಉತ್ತರಧ್ರುವದಲ್ಲಿ ಆರು ತಿಂಗಳುಗಳ ಕಾಲ ನಿರಂತರವಾಗಿ ರಾತ್ರಿಯಾಗಿರುತ್ತದೆ.

ಶೈತ್ಯಾಯನಾಂತ ದಿನದಲ್ಲಿ (ಡಿಸೆಂಬರ್ 22) ವಿವಿಧ ಅಕ್ಷಾಂಶ ರೇಖೆಗಳ ಹಗಲಿನ ಅವಧಿಯನ್ನು ಸೂಚಿಸುವ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ.

| ಅಕ್ಷಾಂಶ ರೇಖೆ | ಹಗಲಿನ ಅವಧಿ |
|---|---|
| $90^0$ ಉತ್ತರ | ಇಲ್ಲ |
| $66½^0$ ಉತ್ತರ | ಇಲ್ಲ |

### ಧ್ರುವದೀಪ್ತಿ
*(Aurora)*



*ಚಿತ್ರ 3.13* •

*ಧ್ರುವ ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಪ್ರಬಲವಾದ ಸೌರಮಾರುತಗಳು ಉಂಟಾಗುವ ಸಮಯದಲ್ಲಿ ಕಾಣಲು ಸಾಧ್ಯವಾಗುವ ಒಂದು ಪ್ರಾಕೃತಿಕವಾದ ವಿದ್ಯಮಾನವನ್ನು ಧ್ರುವದೀಪ್ತಿ ಎನ್ನುತ್ತಾರೆ. ಧ್ರುವದೀಪ್ತಿಯು ಉನ್ನತ ಅಕ್ಷಾಂಶಗಳ ವಾತಾವರಣದಲ್ಲಿ ಕಂಡು ಬರುವ ಪ್ರಾಕೃತಿಕವಾದ ವರ್ಣಮಯ ಬೆಳಕಾಗಿದೆ. ಇದನ್ನು ಉತ್ತರಧ್ರುವ ಪ್ರದೇಶಗಳಲ್ಲಿ ಅರೋರ ಬೋರಿಯಾಲಿಸ್ (Aurora Borealis) ಎಂದೂ ದಕ್ಷಿಣ ಧ್ರುವ ಪ್ರದೇಶಗಳಲ್ಲಿ ಅರೋರ ಓಸ್ಟ್ರಾಲಿಸ್ (Aurora Australis) ಎಂದೂ ಕರೆಯುತ್ತಾರೆ.*

| | |
|---|---|
| 23½$^{0}$ ಉತ್ತರ | 10 ಗಂಟೆ 33 ಮಿನಿಟು |
| 0$^{0}$ | 12 ಗಂಟೆ |
| 23½$^{0}$ ದಕ್ಷಿಣ | 13 ಗಂಟೆ 27 ಮಿನಿಟು |
| 66½$^{0}$ ದಕ್ಷಿಣ | 24 ಗಂಟೆ |
| 90$^{0}$ ದಕ್ಷಿಣ | 24 ಗಂಟೆ |

*ಶೈತ್ಯಾಯನಾಂತ ದಿನದದಂದು (ಡಿಸೆಂಬರ್ 22) ಉತ್ತರಾರ್ಧಗೋಲದ ಹಗಲಿನ ಅವಧಿಯಲ್ಲಿ ಯಾವ ಯಾವ ಬದಲಾವಣೆಗಳು ಉಂಟಾಗಬಹುದು?*

## ಉತ್ತರಾಯಣ ಮತ್ತು ದಕ್ಷಿಣಾಯನ

ಶೈತ್ಯಾಯನಾಂತ ದಿನದ ನಂತರ (ಡಿಸೆಂಬರ್ 22) ದಕ್ಷಿಣಾಯನ ರೇಖೆ (23½$^{0}$ ದಕ್ಷಿಣ) ಯಿಂದ ಉತ್ತರಾಯಣ ರೇಖೆಯ ಕಡೆಗಿರುವ ಸೂರ್ಯನ ಅಯನವನ್ನು ಉತ್ತರಾಯಣವೆಂದೂ ಗ್ರೀಷ್ಮಾಯನಾಂತ ದಿನದ ನಂತರ (ಜೂನ್ 21 )ಉತ್ತರಾಯಣ ರೇಖೆ (23½$^{0}$ ಉತ್ತರ) ಯಿಂದ ದಕ್ಷಿಣಾಯನ ರೇಖೆಯ ಕಡೆಗಿರುವ ಸೂರ್ಯನ ಅಯನವನ್ನು ದಕ್ಷಿಣಾಯನವೆಂದೂ ಕರೆಯುತ್ತಾರೆ.

*ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ಸೂರ್ಯನ ಅಪೇಕ್ಷಿತ ಸ್ಥಾನ | ದಿವಸ | ದಿನ | ಉತ್ತರಾರ್ಧಗೋಲ | | ದಕ್ಷಿಣಾರ್ಧಗೋಲ | |
|---|---|---|---|---|---|---|
| | | | ಹಗಲಿನ ಅವಧಿ | ರಾತ್ರಿಯ ಅವಧಿ | ಹಗಲಿನ ಅವಧಿ | ರಾತ್ರಿಯ ಅವಧಿ |
| ಭೂಮಧ್ಯರೇಖೆ | ---------------------- | ವಸಂತ ವಿಷುವತ್ಸಂ-ಕ್ರಾಂತಿ | ಸಮಾನವಾಗಿರುತ್ತದೆ | | ------------------------------ | |
| | ಸೆಪ್ಟೆಂಬರ್ 23 | ------------- | | | | |
| ಉತ್ತರಾಯಣ ರೇಖೆ | ----------------------- | ಗ್ರೀಷ್ಮ ಅಯನಾಂತ ದಿನ | --------------- | ಅತ್ಯಂತ ಕಡಿಮೆ | ------------ | ಅತ್ಯಂತ ಹೆಚ್ಚು |
| ದಕ್ಷಿಣಾಯನ ರೇಖೆ | ಡಿಸೆಂಬರ್ 22 | ------------- | ಅತ್ಯಂತ ಕಡಿಮೆ | ----------------- | ಅತ್ಯಂತ ಹೆಚ್ಚು | ---------------- |

## ಋತುಗಳು (Seasons)



ವಸಂತಕಾಲ | ಗ್ರೀಷ್ಮ ಕಾಲ | ಶರತ್ಕಾಲ | ಶೈತ್ಯಕಾಲ

*ಚಿತ್ರಗಳು 3.14*

ಸೂರ್ಯನ ಅಪೇಕ್ಷಿತ ಸ್ಥಾನ ಬದಲಾವಣೆಗೆ ಅನುಸಾರವಾಗಿ ಪ್ರತಿಯೊಂದು ಪ್ರದೇಶದಲ್ಲೂ ವಿಶೇಷವಾದ ಹವಾಗುಣ ಸನ್ನಿವೇಶಗಳು ಸೃಷ್ಟಿಯಾಗುತ್ತವೆ. ಈ ಕಾಲಾವಧಿಯನ್ನು ಋತುಗಳೆಂದು ಕರೆಯುತ್ತಾರೆ. ಭೂಮಿಯ ಪರಿಕ್ರಮಣ ಮತ್ತು ಸೌರಚೈತನ್ಯದ ಲಭ್ಯತೆಯಲ್ಲಿ ಉಂಟಾಗುವ ಏರುಪೇರುಗಳು ಇದಕ್ಕೆ ಕಾರಣವಾಗುತ್ತವೆ. ಒಂದು ವರ್ಷದಲ್ಲಿ ವಸಂತಕಾಲ, ಗ್ರೀಷ್ಮಕಾಲ, ಶರತ್ಕಾಲ, ಶೈತ್ಯಕಾಲ ಎಂಬೀ ಋತುಗಳು ಚಕ್ರೀಯವಾಗಿ ಆವರ್ತನೆಗೊಳ್ಳುವುದನ್ನು ಋತುಭೇದಗಳು ಎಂದು ಕರೆಯುತ್ತಾರೆ.

## ವಿವಿಧ ಋತುಗಳು ಮತ್ತು ಅವುಗಳ ವಿಶೇಷತೆಗಳು



**ವಸಂತಕಾಲ (Spring)**

- ಸಸ್ಯಗಳಲ್ಲಿ ಹೂಗಳು ಮತ್ತು ಕಾಯಿಗಳು ಉಂಟಾಗುತ್ತವೆ.
- ಈ ಕಾಲದಲ್ಲಿ ಹಗಲಿನ ಅವಧಿ ಹೆಚ್ಚುತ್ತಾ ಹೋಗುತ್ತದೆ.



**ಗ್ರೀಷ್ಮಕಾಲ (Summer)**

- ವಾತಾವರಣದ ಉಷ್ಣತೆ ಅಧಿಕ
- ಸಾಮಾನ್ಯವಾಗಿ ದೀರ್ಘವಾದ ಹಗಲುಗಳು



**ಶರತ್ಕಾಲ (Autumn)**

- ಚಳಿಗಾಲದ ಆರಂಭವನ್ನು ಸೂಚಿಸುತ್ತಾ ಮರಗಳು ಎಲೆಗಳನ್ನು ಉದುರಿಸುತ್ತವೆ.
- ಹಗಲಿನ ಅವಧಿಯು ಕಡಿಮೆಯಾಗುತ್ತಾ ಬರುತ್ತದೆ.



**ಶೈತ್ಯಕಾಲ (Winter)**

- ವಾತಾವರಣದ ಉಷ್ಣತೆ ಕಡಿಮೆ.
- ಮಂಜು ಬೀಳುತ್ತದೆ.
- ಸಾಮಾನ್ಯವಾಗಿ ದೀರ್ಘವಾದ ರಾತ್ರಿಗಳು

*ಚಿತ್ರಗಳು 3.15*

*ಉತ್ತರ ಮತ್ತು ದಕ್ಷಿಣಾರ್ಧಗೋಲಗಳಲ್ಲಿ ಅನುಭವಕ್ಕೆ ಬರುವ ವಿವಿಧ ಋತುಗಳ ಕುರಿತಾದ ಪಟ್ಟಿಯನ್ನು ನಿರೀಕ್ಷಿಸಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯಿರಿ.*

| ಸೂರ್ಯನ ಅಯನ | ಸಮಯ | ಋತುಗಳು | |
|---|---|---|---|
| | | ಉತ್ತರಾರ್ಧಗೋಲ | ದಕ್ಷಿಣಾರ್ಧಗೋಲ |
| • ಭೂಮಧ್ಯ ರೇಖೆಯಿಂದ ಉತ್ತರಾಯಣ ರೇಖೆಯ ಕಡೆಗೆ | ಮಾರ್ಚ್ 21 ರಿಂದ ಜೂನ್ 21ರ ವರೆಗೆ | ವಸಂತಕಾಲ | ಶರತ್ಕಾಲ |
| • ಉತ್ತರಾಯಣ ರೇಖೆಯಿಂದ ಭೂಮಧ್ಯ ರೇಖೆಯ ಕಡೆಗೆ | ಜೂನ್ 21ರಿಂದ ಸೆಪ್ಟೆಂಬರ್ 23ರ ವರೆಗೆ | ಗ್ರೀಷ್ಮಕಾಲ | ಶೈತ್ಯಕಾಲ |
| • ಭೂಮಧ್ಯ ರೇಖೆಯಿಂದ ದಕ್ಷಿಣಾಯನ ರೇಖೆಯ ಕಡೆಗೆ | ಸೆಪ್ಟೆಂಬರ್ 23 ರಿಂದ ಡಿಸೆಂಬರ್ 22ರ ವರೆಗೆ | ಶರತ್ಕಾಲ | ವಸಂತಕಾಲ |
| • ದಕ್ಷಿಣಾಯನ ರೇಖೆಯಿಂದ ಭೂಮಧ್ಯ ರೇಖೆಯ ಕಡೆಗೆ | ಡಿಸೆಂಬರ್ 22 ರಿಂದ ಮಾರ್ಚ್ 21ರ ವರೆಗೆ | ಶೈತ್ಯಕಾಲ | ಗ್ರೀಷ್ಮಕಾಲ |

- *ಉತ್ತರಾರ್ಧಗೋಲದ ಗ್ರೀಷ್ಮ ಕಾಲದಲ್ಲಿ ಸೂರ್ಯನ ಅಪೇಕ್ಷಿತ ಸ್ಥಾನದಲ್ಲಿ ಯಾವ ಬದಲಾವಣೆಯು ಉಂಟಾಗುತ್ತದೆ?*
- *ದಕ್ಷಿಣಾರ್ಧಗೋಲದಲ್ಲಿ ಶರತ್ಕಾಲವಾಗಿರುವಾಗ ಉತ್ತರಾರ್ಧಗೋಲದಲ್ಲಿ ಯಾವ ಋತುವಾಗಿದೆ?*
- *ಸೆಪ್ಟೆಂಬರ್ 23 ರಿಂದ ಡಿಸೆಂಬರ್ 22ರವರೆಗೆ ದಕ್ಷಿಣಾರ್ಧಗೋಲದಲ್ಲಿ ಯಾವ ಋತುವಾಗಿದೆ?*
- *ಸೂರ್ಯನ ಅಪೇಕ್ಷಿತ ಸ್ಥಾನವು ದಕ್ಷಿಣಾಯನ ರೇಖೆಯಿಂದ ಭೂಮಧ್ಯ ರೇಖೆಯ ಕಡೆಗೆ ಸಾಗುವಾಗ ದಕ್ಷಿಣಾರ್ಧಗೋಲದಲ್ಲಿ ಯಾವ ಋತುವಾಗಿದೆ?*

### *ಭಾರತದ ಪರಂಪರಾಗತ ಋತುಗಳು*

*ಋತುಗಳನ್ನು ಸಾಮಾನ್ಯವಾಗಿ ನಾಲ್ಕು ಋತುಗಳಾಗಿ ವರ್ಗೀಕರಿಸಲಾಗಿದೆಯಾದರೂ ಭಾರತದಲ್ಲಿ ವಾತಾವರಣದ ಸ್ಥಿತಿಗತಿಗಳಲ್ಲಿ ಉಂಟಾಗುವ ಬದಲಾವಣೆಗಳನ್ನು ಆಧಾರವಾಗಿಟ್ಟುಕೊಂಡು ಆರು ವಿಭಿನ್ನ ಋತುಗಳಿರುವುದಾಗಿ ಗಣನೆ ಮಾಡಲಾಗಿದೆ.*

- *ವಸಂತಕಾಲ – ಮಾರ್ಚ್, ಏಪ್ರಿಲ್*
- *ಗ್ರೀಷ್ಮಕಾಲ – ಮೇ, ಜೂನ್*
- *ವರ್ಷಕಾಲ – ಜುಲೈ, ಆಗಸ್ಟ್*
- *ಶರತ್ಕಾಲ – ಸೆಪ್ಟೆಂಬರ್, ಅಕ್ಟೋಬರ್*
- *ಹೇಮಂತಕಾಲ – ನವಂಬರ್, ಡಿಸೆಂಬರ್*
- *ಶಿಶಿರಕಾಲ – ಜನವರಿ, ಫೆಬ್ರವರಿ*

ಋತುಭೇದಗಳು ಮತ್ತು ಹಗಲು ರಾತ್ರಿಗಳು ಹೇಗೆ ಉಂಟಾಗುತ್ತವೆಯೆಂದು ಚರ್ಚಿಸಿದೆವಲ್ಲವೆ? ಇದಲ್ಲದೆ ಭ್ರಮಣದ ಇನ್ನೊಂದು ವಿಶೇಷತೆಯನ್ನು ಕೂಡಾ ನಾವು ಪರಿಚಯಿಸಿಕೊಳ್ಳೋಣ.

## ಸಮಯ

2024 ಜನವರಿ 14ರಂದು ರಿಯಲ್ ಮಾಡ್ರಿಡ್ ಮತ್ತು ಎಫ್. ಸಿ. ಬಾರ್ಸಿಲೋನಗಳ ನಡುವೆ ಬಾರ್ಸಿಲೋನದಲ್ಲಿ ನಡೆದ ಸೂಪರ್ ಕಪ್ ಫುಟ್ಬಾಲ್ ಫೈನಲ್ ಸ್ಪರ್ಧೆಯ ನೇರ ಪ್ರಸಾರದ ವೇಳಾಪಟ್ಟಿಯನ್ನು ಚಿತ್ರ 3.16 ರಲ್ಲಿ ನೀಡಲಾಗಿದೆ.




*ಚಿತ್ರಗಳು 3.16*

ಇದು ನೇರ ಪ್ರಸಾರವಾಗಿದ್ದರೂ ಜಗತ್ತಿನ ನಾನಾ ಭಾಗಗಳಲ್ಲಿರುವವರು ವಿಭಿನ್ನ ಸಮಯಗಳಲ್ಲಿ ಈ ಸ್ಪರ್ಧೆಯನ್ನು ನೋಡುತ್ತಿದ್ದಾರೆ ಎಂಬುದು ತಿಳಿಯಿತಲ್ಲವೇ. ಇದು ಯಾಕೆಂದು ನಾವು ಪರಿಶೀಲಿಸೋಣ.




*ಚಿತ್ರ 3.17*

ಭೂಮಿಗೆ ಒಂದು ಭ್ರಮಣವನ್ನು ಪೂರ್ತಿಗೊಳಿಸಲು ಅಥವಾ ಅಕ್ಷದಲ್ಲಿ $360^0$ ತಿರುಗಲು 24 ಗಂಟೆಗಳ ಸಮಯವು ಅಗತ್ಯವಾಗಿದೆ. ಅಂದರೆ $15^0$ ತಿರುಗಲು ಒಂದು ಗಂಟೆ (60 ನಿಮಿಷಗಳು) ಅಗತ್ಯವಾದರೆ ಒಂದು ಡಿಗ್ರಿಯನ್ನು ಕ್ರಮಿಸಲು ಎಷ್ಟು ಸಮಯ ಬೇಕು?

$15^0$ = 1 ಗಂಟೆ = 60 ನಿಮಿಷ

$1^0 = \frac{60}{15}$ = 4 ನಿಮಿಷ

ಪ್ರತಿಯೊಂದು ರೇಖಾಂಶ ರೇಖೆಯ ವ್ಯಾಪ್ತಿಗೆ ಅನುಪಾತಿಕವಾದ ಸಮಯ ವ್ಯತ್ಯಾಸವು 4 ನಿಮಿಷಗಳಾಗಿವೆ.

ರೇಖಾಂಶ ರೇಖೆಗಳಲ್ಲಿ ಸಮಯವನ್ನು ಗಣನೆ ಮಾಡುವುದು ಹೇಗೆಂದು ತಿಳಿಯಿತಲ್ಲವೇ. ಸಮಯ ನಿರ್ಣಯಕ್ಕೆ ಸಂಬಂಧಿಸಿದ ಕೆಲವು ಪ್ರಧಾನ ಆಶಯಗಳನ್ನು ಪರಿಶೀಲಿಸೋಣ.

## ಸ್ಥಳೀಯ ಸಮಯ (Local Time)

ಹಿಂದಿನ ಕಾಲಗಳಲ್ಲಿ ನೆರಳು ಮತ್ತು ಸೂರ್ಯನ ಉಚ್ಚಸ್ಥಾನದ ಆಧಾರದಲ್ಲಿ ಪ್ರತಿಯೊಂದು ಪ್ರದೇಶದ ಸ್ಥಳೀಯ ಸಮಯವನ್ನು ನಿರ್ಣಯಿಸುತ್ತಿದ್ದರು. ಸೂರ್ಯನ ಸ್ಥಾನವು ಒಬ್ಬ ವ್ಯಕ್ತಿಯ ತಲೆಯ ನೇರ ಮೇಲೆ ಇರುವ ಸಮಯವನ್ನು ಮಧ್ಯಾಹ್ನ 12 ಗಂಟೆ ಎಂದು ಪರಿಗಣಿಸಲಾಗುತ್ತಿತ್ತು. ಇದು ನೆರಳಿನ ಉದ್ದವು ಅತ್ಯಂತ ಕಡಿಮೆಯಾಗಿರುವ ಸಮಯವಾಗಿದೆ. ಈ ರೀತಿಯಲ್ಲಿ ನೆರಳಿನ ಉದ್ದ ಹಾಗೂ ಸೂರ್ಯನ ಸ್ಥಾನವನ್ನು ಆಧಾರವಾಗಿಟ್ಟುಕೊಂಡು ಗಣನೆ ಮಾಡುವ ಸಮಯವನ್ನು ಸ್ಥಳೀಯ ಸಮಯವೆಂದು ಕರೆಯುತ್ತಾರೆ.



*ಚಿತ್ರ 3.18*

## ಜಂತರ್ ಮಂತರ್



*ಚಿತ್ರ 3.19*

*ಜಂತರ್ ಮಂತರ್ ಹದಿನೆಂಟನೇ ಶತಮಾನದ ಆರಂಭದಲ್ಲಿ ಜೈಪುರದ ಮಹಾರಾಜನಾದ ಜೈಸಿಂಗ್ ಎರಡನೆಯವನು ಜೈಪುರದಲ್ಲಿ ನಿರ್ಮಿಸಿದ ಖಗೋಳ ವೀಕ್ಷಣಾಲಯವಾಗಿದೆ. ಇದರಲ್ಲಿ 20 ಪ್ರಧಾನ ಜ್ಯೋತಿಶ್ಶಾಸ್ತ್ರ ಉಪಕರಣಗಳನ್ನು ಒಂದೇ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಇವುಗಳನ್ನು ಉಪಯೋಗಿಸಿ ಬರಿಗಣ್ಣಿನಿಂದ ಜ್ಯೋತಿಶ್ಶಾಸ್ತ್ರ ಸ್ಥಾನಗಳನ್ನು ನಿರೀಕ್ಷಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಇದು ಭಾರತದ ಐದು ಖಗೋಳ ವೀಕ್ಷಣಾಲಯಗಳಲ್ಲಿ ಅತ್ಯಂತ ದೊಡ್ಡದೂ ಪ್ರಧಾನವಾದುದೂ ಆಗಿದೆ. ದೆಹಲಿ, ಉಜ್ಜಯಿನಿ, ಮಥುರಾ, ವಾರಣಾಸಿ ಎಂಬೆಡೆಗಳಲ್ಲಿ ಇತರ ವೀಕ್ಷಣಾಲಯಗಳಿವೆ. 2010 ರಲ್ಲಿ ಈ ಸ್ಥಳವನ್ನು ಯುನೆಸ್ಕೋದ ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಒಳಪಡಿಸಲಾಯಿತು. ಇಲ್ಲಿರುವ ಉಪಕರಣಗಳು ಆ ಕಾಲದಲ್ಲಿ ನಿಖರವಾಗಿ ಸ್ಥಳೀಯ ಸಮಯವನ್ನು ನಿರ್ಣಯಿಸಲು ಸಹಾಯಕವಾಗಿದ್ದುವು.*

## ಪ್ರಮಾಣವೇಳೆ (Standard Time)

ಪ್ರತಿಯೊಂದು ರೇಖಾಂಶ ರೇಖೆಯಲ್ಲೂ ಸ್ಥಳೀಯ ಸಮಯವು ವಿಭಿನ್ನವಾಗಿರಬಹುದು. ಹಾಗಾದರೆ ಒಂದು ದೇಶದೊಳಗೆ ವಿಭಿನ್ನ ಸ್ಥಳೀಯ ಸಮಯವು ಅನುಭವಕ್ಕೆ ಬರಬಹುದಲ್ಲವೆ? ಇದು ಒಂದು ದೇಶದ ಸಾರ್ವಜನಿಕ ಪರೀಕ್ಷೆಗಳು , ರೈಲ್ವೆ ವೇಳಾಪಟ್ಟಿ, ರೇಡಿಯೋ ಕಾರ್ಯಕ್ರಮಗಳ ಪ್ರಸಾರ ಮುಂತಾದವುಗಳಿಗೆ ಅಡ್ಡಿಯನ್ನುಂಟು ಮಾಡಬಹುದು. ಈ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ದೇಶಗಳು ಅಂತಾರಾಷ್ಟ್ರೀಯ ತೀರ್ಮಾನಗಳ ಆಧಾರದಲ್ಲಿ ಏಳುವರೆ ಡಿಗ್ರಿ ರೇಖಾಂಶ ರೇಖೆಗಳ ಅಪವರ್ತ್ಯಗಳಾಗಿ ಬರುವ ರೇಖಾಂಶ ರೇಖೆಯನ್ನು ಪ್ರಮಾಣ ರೇಖಾಂಶ ರೇಖೆಯಾಗಿ ಪರಿಗಣಿಸುತ್ತವೆ. ಹೀಗೆ ಆಯ್ಕೆ ಮಾಡುವ ಪ್ರಮಾಣ ರೇಖಾಂಶ ರೇಖೆಯ ಮೇಲಿನ ಸ್ಥಳೀಯ ಸಮಯವನ್ನು ಆ ದೇಶದ ಪ್ರಮಾಣ ವೇಳೆಯಾಗಿ ಪರಿಗಣಿಸಲಾಗುತ್ತದೆ.

## ಗ್ರೀನಿಚ್ ಸಮಯ (Greenwich Mean Time)




*ಚಿತ್ರ 3.20*

ಅಕ್ಷಾಂಶ ರೇಖೆಗಳ ಗಾತ್ರವು ಭೂಮಧ್ಯ ರೇಖೆಯಿಂದ ಧ್ರುವಗಳೆಡೆಗೆ ಸಾಗಿದಂತೆ ಕಡಿಮೆಯಾಗುತ್ತದೆ ಎಂದು ನಿಮಗೆ ತಿಳಿದಿದೆಯಲ್ಲವೆ? ಆದರೆ ಎಲ್ಲಾ ರೇಖಾಂಶ ರೇಖೆಗಳೂ ಅರ್ಧವೃತ್ತಗಳಲ್ಲವೆ? ಆದಕಾರಣ ಪ್ರಪಂಚದಾದ್ಯಂತ ಸಮಯನಿರ್ಣಯಕ್ಕಾಗಿ ಇಂಗ್ಲೆಂಡಿನ ರಾಯಲ್ ಬ್ರಿಟಿಷ್ ಖಗೋಳ ವೀಕ್ಷಣಾಲಯವಿರುವ ಗ್ರೀನಿಚ್ ಎಂಬ ಸ್ಥಳದ ಮೂಲಕ ಹಾದುಹೋಗುವ ರೇಖಾಂಶರೇಖೆಯನ್ನು $0^0$ ರೇಖಾಂಶರೇಖೆಯಾಗಿ ಪರಿಗಣಿಸಲಾಗುತ್ತದೆ. ಇದನ್ನು ಪ್ರಧಾನ ರೇಖಾಂಶ (Prime Meridian) ಎಂದೂ ಪ್ರಧಾನ ರೇಖಾಂಶದ ಸ್ಥಳೀಯ ಸಮಯವನ್ನು ಗ್ರೀನಿಚ್ ಸಮಯವೆಂದೂ (Greenwich Mean Time) ಕರೆಯುತ್ತಾರೆ.ಪ್ರಪಂಚದಾದ್ಯಂತ ಪ್ರಯಾಣಿಕರು ಗ್ರೀನಿಚ್ ಸಮಯದ ಆಧಾರದಲ್ಲಿ ಸಮಯವನ್ನು ನಿರ್ಣಯಿಸುತ್ತಾರೆ. ಭೂಮಿಯ ಭ್ರಮಣವು ಪಶ್ಚಿಮದಿಂದ ಪೂರ್ವದ ಕಡೆಗೆ ಆಗಿರುವುದರಿಂದ ಗ್ರೀನಿಚ್ ರೇಖೆಯಿಂದ ಪೂರ್ವಕ್ಕೆ ಪ್ರತಿಯೊಂದು ರೇಖಾಂಶ ರೇಖೆಯನ್ನು ಹಾದುಹೋಗುವಾಗ ಸಮಯವು 4 ನಿಮಿಷಗಳಂತೆ ಹೆಚ್ಚಾಗುತ್ತದೆ ಮತ್ತು ಪಶ್ಚಿಮಕ್ಕೆ ಹೋಗುವಾಗ 4 ನಿಮಿಷಗಳಂತೆ ಕಡಿಮೆಯಾಗುತ್ತದೆ.

1. *ಗ್ರೀನಿಚ್ ರೇಖೆಯಲ್ಲಿ ($0^0$ ರೇಖಾಂಶ) ಬೆಳಗ್ಗೆ 10 ಗಂಟೆಯಾಗಿರುವಾಗ ಸಮೀಪದ ಒಂದು ಡಿಗ್ರಿ ಪೂರ್ವ ಮತ್ತು ಒಂದು ಡಿಗ್ರಿ ಪಶ್ಚಿಮದ ಸಮಯ ಎಷ್ಟಾಗಿರಬಹುದು?*

| $1^0$ ಪಶ್ಚಿಮ | $0^0$ | $1^0$ ಪೂರ್ವ |
|---|---|---|
| ? | 10 AM | ? |

2. *ಗ್ರೀನಿಚ್ ರೇಖೆಯಲ್ಲಿ ($0^0$ ರೇಖಾಂಶ) ರಾತ್ರಿ 9 ಗಂಟೆಯಾಗಿರುವಾಗ $30^0$ ಪೂರ್ವ ರೇಖಾಂಶ ರೇಖೆಯ ಸಮಯ ಎಷ್ಟಾಗಿರಬಹುದು?*

| $0^0$ | $30^0$ ಪೂರ್ವ |
|---|---|
| 9 PM | ? |

## ಭಾರತೀಯ ಕಾಲಮಾನ (Indian Standard Time)

ಭಾರತದಲ್ಲಿ ಪ್ರಮಾಣ ವೇಳೆಯನ್ನು ಗಣನೆ ಮಾಡುವುದು ಹೇಗೆಂದು ನೋಡೋಣ. ಭಾರತದ ಅತ್ಯಂತ ಪೂರ್ವದಲ್ಲಿರುವ ರಾಜ್ಯವಾದ ಅರುಣಾಚಲ ಪ್ರದೇಶ ($97^0.25^|$ ಪೂರ್ವ) ಮತ್ತು ಅತ್ಯಂತ ಪಶ್ಚಿಮದಲ್ಲಿರುವ ರಾಜ್ಯವಾದ ಗುಜರಾತ್ ($68^0.7^|$ ಪೂರ್ವ) ಗಳೊಳಗೆ ಸುಮಾರು $30^0$ ರೇಖಾಂಶ ವ್ಯತ್ಯಾಸವಿರುವುದರಿಂದ ಸ್ಥಳೀಯ ಸಮಯದಲ್ಲಿ ಎರಡು ಗಂಟೆಗಳಷ್ಟು ವ್ಯತ್ಯಾಸವಿದೆ. ಇದರಿಂದ ಉಂಟಾಗುವ ಪ್ರಾಯೋಗಿಕ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ದೇಶದಲ್ಲಿ ಒಂದು ಪ್ರಮಾಣ ವೇಳೆಯನ್ನು ನಿರ್ಧರಿಸಲಾಗಿದೆ. ಭಾರತದ ಸರಿಸುಮಾರು ಮಧ್ಯಭಾಗದ ಮೂಲಕ ಹಾದು ಹೋಗುವ $7½^0$ ಯ ಅಪವರ್ತ್ಯವಾದ $82½^0$ ಪೂರ್ವ ರೇಖಾಂಶ ರೇಖೆಯನ್ನು ಭಾರತದ ಪ್ರಮಾಣ ರೇಖಾಂಶ ರೇಖೆಯಾಗಿ ಆಯ್ಕೆ ಮಾಡಲಾಗಿದೆ. ಈ ರೇಖೆಯ ಮೇಲಿನ ಸ್ಥಳೀಯ ಸಮಯವನ್ನು ಭಾರತೀಯ ಕಾಲಮಾನವಾಗಿ ಪರಿಗಣಿಸಲಾಗುತ್ತದೆ.




*ಚಿತ್ರ 3.21*

*ಗ್ರೀನಿಚ್ ರೇಖೆ ($0^0$) ಮತ್ತು ಭಾರತದ ಪ್ರಮಾಣ ರೇಖಾಂಶ ರೇಖೆಗಳ ($82½^0$ ಪೂರ್ವ) ನಡುವಿನ ಸಮಯ ವ್ಯತ್ಯಾಸ ಎಷ್ಟು?*

## ಸಮಯ ವಲಯಗಳು (Time Zones)

ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾಡಿಕೊಂಡ ತೀರ್ಮಾನದ ಪ್ರಕಾರ ಪ್ರಪಂಚವನ್ನು ಒಂದು ಗಂಟೆಯ ಸಮಯ ವ್ಯತ್ಯಾಸವಿರುವ 24 ವಲಯಗಳನ್ನಾಗಿ ವಿಂಗಡಿಸಲಾಗಿದೆ. ಇವುಗಳನ್ನು ಸಮಯವಲಯಗಳು ಎಂದು ಕರೆಯುತ್ತಾರೆ. ಪ್ರತಿಯೊಂದು ಸಮಯವಲಯಕ್ಕೂ $15^0$ ರೇಖಾಂಶ ವ್ಯಾಪ್ತಿ ಇದೆ.




*ಚಿತ್ರ 3.22* •

ಭಾರತದ ಅತ್ಯಂತ ಪೂರ್ವದಲ್ಲಿರುವ ರಾಜ್ಯವಾದ ಅರುಣಾಚಲ ಪ್ರದೇಶ ಮತ್ತು ಅತ್ಯಂತ ಪಶ್ಚಿಮದಲ್ಲಿರುವ ಗುಜರಾತ್‌ಗಳೊಳಗೆ ಸುಮಾರು ಎರಡು ಗಂಟೆಗಳ ಸಮಯ ವ್ಯತ್ಯಾಸವಿದೆಯೆಂದು ತಿಳಿದೆವಲ್ಲವೇ. ಈ ವ್ಯತ್ಯಾಸವು ಕಡಿಮೆಯಾಗಿರುವುದರಿಂದಲೇ ದೇಶಕ್ಕೆ ಒಂದು ಸಾಮಾನ್ಯವಾದ ಪ್ರಮಾಣ ವೇಳೆಯನ್ನು ನಿರ್ಣಯಿಸಲು ಯಾವುದೇ ಸಮಸ್ಯೆಗಳಿಲ್ಲ. ಆದರೆ ರೇಖಾಂಶ ವ್ಯಾಪ್ತಿ ಹೆಚ್ಚಾಗಿರುವ ರಷ್ಯಾ, ಕೆನಡ, ಯು. ಎಸ್. ಎ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಅನೇಕ ಸಮಯವಲಯಗಳು ಮತ್ತು ಪ್ರಮಾಣ ವೇಳೆಯು ಇವೆ.

## ಅಂತಾರಾಷ್ಟ್ರೀಯ ದಿನಾಂಕ ರೇಖೆ (International Date Line)




*ಚಿತ್ರ 3.23* •

ಚಿತ್ರ 3.23ರಲ್ಲಿ ಗ್ರೀನಿಚ್ ರೇಖೆಯಲ್ಲಿ ಡಿಸೆಂಬರ್ 25ರಂದು ಸಂಜೆ 6 ಗಂಟೆಯಾಗಿರುವಾಗ 180° ಪೂರ್ವ ಮತ್ತು 180° ಪಶ್ಚಿಮದಲ್ಲಿ ಯಾವ ದಿವಸ ಮತ್ತು ಯಾವ ಸಮಯವಾಗಿದೆ?

ಚಿತ್ರ 3.24 ರಿಂದ 180 ಡಿಗ್ರಿ ಪೂರ್ವ ಮತ್ತು 180 ಡಿಗ್ರಿ ಪಶ್ಚಿಮದಲ್ಲಿರುವ ರೇಖಾಂಶ ರೇಖೆಗಳು ಒಂದೇ ರೇಖಾಂಶ ರೇಖೆಯಾಗಿಯೆಂದು ತಿಳಿದು ಕೊಳ್ಳಬಹುದಲ್ಲವೇ. ಅಂದರೆ 180 ಡಿಗ್ರಿ ರೇಖಾಂಶ ರೇಖೆಯ ಇಕ್ಕಡೆಗಳಲ್ಲಾಗಿ 24 ಗಂಟೆಗಳ ಸಮಯ ವ್ಯತ್ಯಾಸವಿದೆ. ಈ ರೇಖೆಯನ್ನು ದಾಟಿ ಪೂರ್ವದ ಕಡೆಗೆ ಪ್ರಯಾಣಿಸುವ ವ್ಯಕ್ತಿಗೆ ಕ್ಯಾಲೆಂಡರಿನ ಒಂದು ದಿನ ನಷ್ಟವಾಗುತ್ತದೆ ಮತ್ತು ಪಶ್ಚಿಮದ ಕಡೆಗೆ ಪ್ರಯಾಣಿಸುವ ವ್ಯಕ್ತಿಗೆ ಒಂದು ದಿನ ಅಧಿಕವೂ ಲಭಿಸುತ್ತದೆ.




*ಚಿತ್ರ 3.24*

ಅಂತಾರಾಷ್ಟ್ರೀಯ ಒಪ್ಪಂದದ ಪ್ರಕಾರ 180° ರೇಖಾಂಶ ರೇಖೆಯನ್ನು ಅಂತಾರಾಷ್ಟ್ರೀಯ ದಿನಾಂಕರೇಖೆಯಾಗಿ ಪರಿಗಣಿಸಲಾಗುತ್ತದೆ. ಈ ರೇಖೆಯನ್ನು ದಾಟಿ ಪಶ್ಚಿಮದ ಕಡೆಗೆ ಪ್ರಯಾಣಿಸುವ ಸಂಚಾರಿಗಳು ಕ್ಯಾಲೆಂಡರಿನ ದಿನವನ್ನು ಒಂದು ದಿವಸ ಮುಂದಕ್ಕೆ ಮಾಡಿ ಮತ್ತು ಪೂರ್ವದ ಕಡೆಗೆ ಪ್ರಯಾಣಿಸುವ ಸಂಚಾರಿಗಳು ಒಂದು ದಿವಸ ಹಿಂದಕ್ಕೆ ಮಾಡಿ ಸಮಯವನ್ನು ಗಣನೆ ಮಾಡುತ್ತಾರೆ.




*ಚಿತ್ರ 3.25*

ಅಂತಾರಾಷ್ಟ್ರೀಯ ದಿನಾಂಕ ರೇಖೆಯು ಹಾದುಹೋಗುವ ದೇಶಗಳಲ್ಲಿ ಈ ರೇಖೆಯ ಎರಡು ಬದಿಗಳಲ್ಲಿ ವಿಭಿನ್ನ ದಿವಸಗಳು ಬರುವಂತಹ ಸ್ಥಿತಿಯನ್ನು ನಿವಾರಿಸಲು ದಿನಾಂಕ ರೇಖೆಯಲ್ಲಿ ಕೆಲವು ಕ್ರಮೀಕರಣಗಳನ್ನು ಮಾಡಲಾಗಿದೆ. ಚಿತ್ರ 3.25 ರಲ್ಲಿ ಕಾಣುವಂತೆ ಪೆಸಿಫಿಕ್ ಸಾಗರದ ಜನವಾಸವಿರುವ ನೆಲ ಭಾಗಗಳನ್ನು ಹೊರತುಪಡಿಸಿ ಈ ರೇಖಾಂಶ ರೇಖೆಯನ್ನು ಕ್ರಮೀಕರಿಸಲಾಗಿದೆ.

ಭೂಮಿಯ ಭ್ರಮಣ ಮತ್ತು ಪರಿಕ್ರಮಣವು ನಮ್ಮ ಜೀವನದ ಮೇಲೆ ಹೇಗೆ ಪ್ರಭಾವ ಬೀರುತ್ತವೆಯೆಂದು ತಿಳಿದುಕೊಂಡಿರಲ್ಲವೇ. ಇದರಿಂದಾಗಿ ಪ್ರಕೃತಿಯಲ್ಲುಂಟಾಗುವ ವೈವಿಧ್ಯದಿಂದೊಡಗೂಡಿದ ಬದಲಾವಣೆಗಳು ನಮ್ಮ ದೈನಂದಿನ ಚಟುವಟಿಕೆಗಳಿಗೆ ಅಗತ್ಯವಾದ ಚೈತನ್ಯವನ್ನು ಮತ್ತು ಉತ್ಸಾಹವನ್ನು ನೀಡುತ್ತವೆ. ಜಗತ್ತಿನ ನಾನಾ ಭಾಗಗಳಲ್ಲಿ ಋತುಗಳಲ್ಲಿ ಮತ್ತು ಸಮಯದಲ್ಲಿ ಕಂಡುಬರುವ ಈ ವ್ಯತ್ಯಾಸವು ಆ ಪ್ರದೇಶಗಳ ಸಾಮಾಜಿಕ -ಸಾಂಸ್ಕೃತಿಕ ಜೀವನದ ಮೇಲೆ ಪ್ರಭಾವ ಬೀರುತ್ತವೆ.

## ಮುಂದುವರಿದ ಚಟುವಟಿಕೆಗಳು

- ನಿಮ್ಮ ಪ್ರದೇಶದಲ್ಲಿ ವಿವಿಧ ಋತುಗಳಲ್ಲಿ ಪ್ರಕೃತಿಯಲ್ಲಿ ಕಂಡುಬರುವ ಬದಲಾವಣೆಗಳನ್ನು ನಿರೀಕ್ಷಿಸಿ ಸಮಾಜಶಾಸ್ತ್ರ ನಿರೀಕ್ಷಣಾ ಪುಸ್ತಕದಲ್ಲಿ ದಾಖಲಿಸಿರಿ.
- ಡಿಸೆಂಬರ್ 22 ಮತ್ತು ಜೂನ್ 21 ಎಂಬೀ ದಿವಸಗಳಲ್ಲಿ ನಿಮ್ಮ ಪ್ರದೇಶದ ರಾತ್ರಿ ಮತ್ತು ಹಗಲಿನ ಅವಧಿಯನ್ನು ಸೂರ್ಯೋದಯ ಮತ್ತು ಸೂರ್ಯಾಸ್ತಮಾನ ಸಮಯಗಳ ಆಧಾರದಲ್ಲಿ ಗಣನೆಮಾಡಿ ಕಂಡುಹಿಡಿಯಿರಿ.



ಅಧ್ಯಾಯ 4

# ಮೂಲಭೂತ ಆರ್ಥಿಕ ಸಮಸ್ಯೆಗಳು ಮತ್ತು ಆರ್ಥಿಕ ವ್ಯವಸ್ಥೆ

ಗೆಳೆಯರಾದ ಆದಿ, ಜೋಬ್ ಮತ್ತು ಆಶ್ನಾ ತಮ್ಮ ಆವಶ್ಯಕತೆಗಳ ಕುರಿತಾದ ಚರ್ಚೆಯಲ್ಲಿ ನಿರತರಾಗಿದ್ದಾರೆ.




ಚಿತ್ರ 4.1

ದೈನಂದಿನ ಜೀವನದಲ್ಲಿ ನಮಗೆಲ್ಲರಿಗೂ ಇಂತಹ ಆವಶ್ಯಕತೆಗಳಿರಬಹುದು. ನಮ್ಮ ಆವಶ್ಯಕತೆಗಳನ್ನು ಪೂರೈಸುವುದು ಹೇಗೆ? ಅನೇಕ ವಿಧದ ಸರಕುಗಳು ಮತ್ತು ಸೇವೆಗಳ ಸರಿಯಾದ ಬಳಕೆಯ ಮೂಲಕ ನಮ್ಮ ಆವಶ್ಯಕತೆಗಳು ಪೂರೈಸಲ್ಪಡುತ್ತವೆ. ಜೀವನಕ್ಕೆ ಅತೀ ಅಗತ್ಯವಾದ ಆಹಾರ, ಬಟ್ಟೆ, ವಸತಿ ಮೊದಲಾದ ಆವಶ್ಯಕತೆಗಳನ್ನು ಮೂಲಭೂತ ಆವಶ್ಯಕತೆಗಳು (Basic Needs) ಎಂದು ಕರೆಯಬಹುದು. ಆದರೆ ನಾವು ನಿತ್ಯ ಜೀವನದಲ್ಲಿ ಉಪಯೋಗಿಸುವ ಎಲ್ಲಾ ಸರಕು ಮತ್ತು ಸೇವೆಗಳು ಮೂಲಭೂತ ಆವಶ್ಯಕತೆಗಳನ್ನು ಪೂರೈಸಲು ಮಾತ್ರ ಉಪಯೋಗಿಸುವವುಗಳೆ? ನಮ್ಮ ಜೀವನವನ್ನು ಹೆಚ್ಚು ಆರಾಮದಾಯಕಗೊಳಿಸುವ ಮತ್ತು ಸಂತೋಷಪಡಿಸುವ ಕೆಲವು ಆವಶ್ಯಕತೆಗಳಿವೆ. ಈ ಆವಶ್ಯಕತೆಗಳನ್ನು ಸಂತೋಷದಾಯಕ ಆವಶ್ಯಕತೆಗಳು ಎಂದು ಕರೆಯುತ್ತಾರೆ. ಐಷಾರಾಮಿ ಕಾರುಗಳು, ಬೆಲೆಬಾಳುವ ಆಭರಣಗಳು, ಹೆಚ್ಚಿನ ಬೆಲೆಯ ಉಡುಪುಗಳು ಮೊದಲಾದವುಗಳ ಉಪಯೋಗಗಳು ಇದಕ್ಕೆ ಉದಾಹರಣೆಗಳಾಗಿವೆ.

*ನಮ್ಮ ಜೀವನದ ಮೂಲಭೂತ ಆವಶ್ಯಕತೆಗಳು ಮತ್ತು ಸಂತೋಷದಾಯಕ ಆವಶ್ಯಕತೆಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ.*

ದೈನಂದಿನ ಜೀವನದ ಮೂಲಭೂತ ಆವಶ್ಯಕತೆಗಳು ಮತ್ತು ಸಂತೋಷದಾಯಕ ಆವಶ್ಯಕತೆಗಳನ್ನು ನಾವು ಚರ್ಚಿಸಿದೆವಲ್ಲವೆ? ಈ ಆವಶ್ಯಕತೆಗಳಿಗೆ ಯಾವುದಾದರೂ ಸಾಮಾನ್ಯ ವಿಶೇಷತೆಗಳಿವೆಯೆ? ನಾವು ಪರಿಶೀಲಿಸೋಣ.

## ಆವಶ್ಯಕತೆಗಳ ವಿಶೇಷತೆಗಳು

- ಮಾನವನ ಆವಶ್ಯಕತೆಗಳು ವೈವಿಧ್ಯಮಯ ಮತ್ತು ಅಸಂಖ್ಯಾತವಾಗಿವೆ.
- ಕೆಲವು ಆವಶ್ಯಕತೆಗಳನ್ನು ಒಬ್ಬಂಟಿಯಾಗಿ ಮತ್ತೆ ಕೆಲವನ್ನು ಸಾಮೂಹಿಕ ಪ್ರಯತ್ನಗಳ ಮೂಲಕ ಪೂರೈಸಬಹುದಾಗಿದೆ.
- ಒಮ್ಮೆ ಪೂರೈಸಿದ ಆವಶ್ಯಕತೆಗಳು ಪುನರಾವರ್ತನೆಯಾಗಬಹುದು.
- ಸಮಯ, ಸ್ಥಳ, ವ್ಯಕ್ತಿಗನುಸಾರವಾಗಿ ಆವಶ್ಯಕತೆಗಳಲ್ಲೂ ವಿಭಿನ್ನತೆಯಿರಬಹುದು.
- ಮಾನವನ ಪ್ರಗತಿಯೊಂದಿಗೆ ಅವನ ಆವಶ್ಯಕತೆಗಳಲ್ಲೂ ಬದಲಾವಣೆಯುಂಟಾಗುತ್ತದೆ.

ಪ್ರಗತಿಯೊಂದಿಗೆ ಆವಶ್ಯಕತೆಗಳೂ ಹೆಚ್ಚಾಗುತ್ತವೆ. ಆದರೆ ಆವಶ್ಯಕತೆಗಳಿಗೆ ಅನುಪಾತಿಕವಾಗಿ ಸಂಪನ್ಮೂಲಗಳು ಹೆಚ್ಚಾಗಬೇಕೆಂದಿಲ್ಲ. ಹಣವನ್ನು ನೀಡಿ ಅಥವಾ ನೀಡದೆ ಸರಕು ಮತ್ತು ಸೇವೆಗಳನ್ನು ನಾವು ಉಪಯೋಗಿಸುತ್ತೇವೆ. ಮಾನವನ ಆವಶ್ಯಕತೆಗಳು ಅಸಂಖ್ಯಾತವಾಗಿರುವುದರಿಂದ ಅದನ್ನು ಪೂರೈಸಲು ಆದ್ಯತೆಯು ಅಗತ್ಯವಾಗಿದೆ. ವ್ಯಕ್ತಿಗಳು ಮೂಲಭೂತ ಆವಶ್ಯಕತೆಗಳನ್ನು ಪೂರೈಸಲು ಆದ್ಯತೆಯನ್ನು ನೀಡುತ್ತಾರೆ. ಈ ರೀತಿಯಲ್ಲಿ ದೇಶವು ಮಾನವನ ವಿವಿಧ ಆವಶ್ಯಕತೆಗಳನ್ನು ಪೂರೈಸಲು ಅನೇಕ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತದೆ. ಉತ್ಪಾದನಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಲವು ಮೂಲಭೂತ ಸಮಸ್ಯೆಗಳನ್ನು ನಾವು ಎದುರಿಸುತ್ತೇವೆ. ಅವು ಯಾವುವೆಂದು ನೋಡೋಣ.

*ನಿಮ್ಮ ಶಾಲೆಯ ಮಧ್ಯಾಹ್ನದೂಟಕ್ಕೆ ಅಗತ್ಯವಾದ ತರಕಾರಿಗಳನ್ನು ಶಾಲೆಯಲ್ಲೇ ಬೆಳೆಯಲು ನೀವು ನಿರ್ಧರಿಸಿದ್ದೀರಿ ಎಂದು ಭಾವಿಸೋಣ. ತರಕಾರಿ ಕೃಷಿಗೆ ಸಂಬಂಧಿಸಿದಂತೆ ಯಾವ ಯಾವ ನಿರ್ಧಾರಗಳನ್ನು ಕೈಗೊಳ್ಳಬೇಕು? ಪಟ್ಟಿ ಮಾಡಿರಿ.*

ಶಾಲೆಯ ತರಕಾರಿ ಕೃಷಿಗೆ ಸಂಬಂಧಿಸಿ ಕೈಗೊಳ್ಳಬೇಕಾದ ಪ್ರಧಾನ ವಿಷಯಗಳನ್ನು ಚರ್ಚಿಸಿದೆವಲ್ಲವೆ? ಒಂದು ಸಮಾಜ ಅಥವಾ ದೇಶವು ಸರಕುಗಳನ್ನು ಉತ್ಪಾದಿಸುವಾಗ ಇಂತಹ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.



*ಚಿತ್ರ 4.2 • ಶಾಲೆಯ ತರಕಾರಿ ತೋಟ*

## ಮೂಲಭೂತ ಆರ್ಥಿಕ ಸಮಸ್ಯೆಗಳು

**(Basic Economic Problems)**

ಸರಕುಗಳು ಮತ್ತು ಸೇವೆಗಳ ಉತ್ಪಾದನಾ ಪ್ರಕ್ರಿಯೆಗೆ ಸಂಬಂಧಿಸಿ ಒಂದು ದೇಶವು ಈ ಕೆಳಗಿನ ಮೂರು ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತದೆ.

| | | |
|---|---|---|
| ಯಾವುದನ್ನು ಉತ್ಪಾದಿಸಬೇಕು? (What to produce?) | ಹೇಗೆ ಉತ್ಪಾದಿಸಬೇಕು? (How to produce?) | ಯಾರಿಗಾಗಿ ಉತ್ಪಾದಿಸಬೇಕು? (For whom to produce?) |

## ಯಾವುದನ್ನು ಉತ್ಪಾದಿಸಬೇಕು? (What to produce?)

ಶಾಲೆಯ ಮಧ್ಯಾಹ್ನದೂಟಕ್ಕೆ ಯಾವ ಯಾವ ತರಕಾರಿಗಳನ್ನು, ಎಷ್ಟೆಷ್ಟು ಪ್ರಮಾಣದಲ್ಲಿ ಉತ್ಪಾದಿಸಬೇಕೆಂಬುದನ್ನು ನಾವು ಆದ್ಯತೆಗನುಸಾರವಾಗಿ ತೀರ್ಮಾನಿಸಬೇಕು. ಅಂತೆಯೇ, ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಆದ್ಯತೆಗನುಸಾರವಾಗಿ ಯಾವುದನ್ನು ಉತ್ಪಾದಿಸಬೇಕು ಎಂಬುದನ್ನು ಪ್ರತಿಯೊಂದು ದೇಶವೂ ತೀರ್ಮಾನಿಸಬೇಕಾಗಿದೆ. ಯಾವುದನ್ನು ಉತ್ಪಾದಿಸಬೇಕೆಂದು ತೀರ್ಮಾನಿಸಿದರೆ, ಅದು ಎಷ್ಟು ಪ್ರಮಾಣದಲ್ಲಿ ಉತ್ಪಾದಿಸಬೇಕೆಂಬುದೂ ಪ್ರಧಾನವಾದುದಾಗಿದೆ. ಒಂದು ದೇಶಕ್ಕೆ ಸಂಬಂಧಿಸಿ ಅನೇಕ ಸರಕುಗಳು ಮತ್ತು ಸೇವೆಗಳನ್ನು ಉತ್ಪಾದಿಸಬೇಕಾಗುತ್ತದೆ. ಯಾವುದಾದರೂ ಒಂದು ಸರಕು ಮತ್ತು ಸೇವೆಯನ್ನು ಹೆಚ್ಚು ಉತ್ಪಾದಿಸಲು ದೇಶವು ನಿರ್ಧರಿಸಿದರೆ, ಇತರ ಸರಕುಗಳನ್ನು ಉತ್ಪಾದಿಸಲು ಉಪಯೋಗಿಸಬೇಕಾದ ಸಂಪನ್ಮೂಲಗಳನ್ನು ಪರಿಮಿತಗೊಳಿಸಬೇಕಾಗುತ್ತದೆ. ಉದಾಹರಣೆಗೆ, ಆಹಾರದ ಅಭಾವವನ್ನು ಅನುಭವಿಸುವ ಒಂದು ದೇಶದಲ್ಲಿ, ಲಭ್ಯವಿರುವ ಸಂಪನ್ಮೂಲಗಳಲ್ಲಿ ಹೆಚ್ಚಿನ ಪಾಲನ್ನು ಆಹಾರ ಉತ್ಪಾದನೆಗೆ ಉಪಯೋಗಿಸಬೇಕಾಗುತ್ತದೆ. ಅಂತೆಯೇ ಕೈಗಾರಿಕಾ ಉತ್ಪನ್ನಗಳನ್ನು ನಿರ್ಮಿಸಲು ತೀರ್ಮಾನಿಸಿದರೆ, ಯಾವೆಲ್ಲಾ ಕೈಗಾರಿಕೆಗಳನ್ನು ಪ್ರಾರಂಭಿಸಬೇಕು? ಎಷ್ಟು ಘಟಕಗಳನ್ನು ಪ್ರಾರಂಭಿಸಬೇಕು? ಎಂಬಿವುಗಳನ್ನು

ತೀರ್ಮಾನಿಸಬೇಕಾಗುತ್ತದೆ. ಸಮಾಜದ ಆವಶ್ಯಕತೆಗಳು ಮತ್ತು ದೇಶದಲ್ಲಿ ಉತ್ಪಾದಿಸಲ್ಪಡುವ ಉತ್ಪನ್ನಗಳ ಅಳತೆಗಳ ನಡುವೆ ಒಂದು ಸಮತೋಲನವನ್ನು ಸಾಧಿಸಲು ದೇಶವು ಇಂತಹ ತೀರ್ಮಾನಗಳನ್ನು ಕೈಗೊಳ್ಳುತ್ತದೆ.

*ನಿಮ್ಮ ಆವಶ್ಯಕತೆಗಳನ್ನು ಪೂರೈಸುವ ಯಾವೆಲ್ಲಾ ಉತ್ಪನ್ನಗಳನ್ನು ನಿಮ್ಮ ಪ್ರದೇಶದಲ್ಲಿ ಉತ್ಪಾದಿಸಲಾಗುತ್ತದೆ? ಅವು ನಿಮ್ಮ ಉಪಯೋಗಕ್ಕೆ ಬೇಕಾದಷ್ಟು ಲಭ್ಯವೆ?*

ಯಾವೆಲ್ಲಾ ಸರಕುಗಳು ಮತ್ತು ಸೇವೆಗಳನ್ನು ಉತ್ಪಾದಿಸಬೇಕು? ಎಷ್ಟು ಪ್ರಮಾಣದಲ್ಲಿ ಉತ್ಪಾದಿಸಬೇಕು? ಎಂಬುದನ್ನು ತೀರ್ಮಾನಿಸಿದ ಬಳಿಕ ಅದನ್ನು ಹೇಗೆ ಉತ್ಪಾದಿಸಬೇಕೆಂಬುದು ಎರಡನೆಯ ಪ್ರಧಾನವಾದ ಸಮಸ್ಯೆಯಾಗಿದೆ.

## ಹೇಗೆ ಉತ್ಪಾದಿಸಬೇಕು? (How to produce?)

ಕೆಳಗೆ ನೀಡಿರುವ ಚಿತ್ರಗಳನ್ನು ನಿರೀಕ್ಷಿಸಿರಿ.ಚಿತ್ರ 4.3 ಮತ್ತು 4.4 ರಲ್ಲಿ ಚಪಾತಿಯ ತಯಾರಿಯಲ್ಲಿ ಯಾವೆಲ್ಲಾ ವ್ಯತ್ಯಾಸಗಳನ್ನು ಕಾಣಬಹುದು?

ಇಲ್ಲಿ ಯಾವ ಉತ್ಪಾದನಾ ಘಟಕವನ್ನು ಹೆಚ್ಚು ಉಪಯೋಗಿಸಲಾಗಿದೆ?



*ಚಿತ್ರ 4.3*



*ಚಿತ್ರ 4.4*

*ಚಿತ್ರ 4.3* ----------------------- *ಚಿತ್ರ 4.4* -----------------------------

ಇದೇ ರೀತಿಯಲ್ಲಿ ಕೃಷಿಗೆ ಸಂಬಂಧಿಸಿ ನೀಡಿರುವ ಚಿತ್ರಗಳನ್ನು ಗಮನಿಸಿ, ಯಾವ ಉತ್ಪಾದನಾ ಘಟಕವನ್ನು ಇಲ್ಲಿ ಹೆಚ್ಚು ಉಪಯೋಗಿಸಲಾಗಿದೆಯೆಂದು ಬರೆಯಿರಿ.



*ಚಿತ್ರ 4.5*



*ಚಿತ್ರ 4.6*

1. *ಚಿತ್ರ* 4.5 --------------------  1. *ಚಿತ್ರ* 4.6 ------------------------

ಒಂದೇ ಸರಕಿನ ಉತ್ಪಾದನೆಗೆ ಕಾರ್ಮಿಕ (ಪರಿಶ್ರಮ), ಬಂಡವಾಳ ಮೊದಲಾದವುಗಳನ್ನು ವಿವಿಧಾನುಪಾತದಲ್ಲಿ ಬಳಸಿ ಉತ್ಪಾದಿಸಬಹುದೆಂಬುದು ಮೇಲಿನ ಚಿತ್ರಗಳಿಂದ ತಿಳಿಯಿತಲ್ಲವೆ? ಚಿತ್ರ 4.3 ಮತ್ತು 4.5 ನ್ನು ನಿರೀಕ್ಷಿಸಿದರೆ ಮಾನವ ಪರಿಶ್ರಮ ಎಂಬ ಉತ್ಪಾದನಾ ಘಟಕವನ್ನು ಹೆಚ್ಚಾಗಿ ಉಪಯೋಗಿಸಿರುವುದನ್ನು ಕಾಣಬಹುದು. ಆದರೆ ಚಿತ್ರ 4.4 ಮತ್ತು 4.6 ನ್ನು ವಿಶ್ಲೇಷಿಸಿದರೆ ಉತ್ಪಾದನೆಗೆ ಯಂತ್ರಗಳನ್ನು ಹೆಚ್ಚಾಗಿ ಬಳಸಿರುವುದನ್ನು ಕಾಣಬಹುದು.

ಹೆಚ್ಚಿನ ಕಾರ್ಮಿಕ ಶಕ್ತಿಯನ್ನು ಮತ್ತು ಕಡಿಮೆ ಬಂಡವಾಳವನ್ನುಪಯೋಗಿಸಿ ನಡೆಸುವ ಉತ್ಪಾದನಾ ರೀತಿಯನ್ನು 'ಕಾರ್ಮಿಕ ತೀವ್ರ ತಂತ್ರ' (Labour Intensive Technique) ಎಂದು ಕರೆಯುತ್ತಾರೆ.

ಹೆಚ್ಚಿನ ಬಂಡವಾಳ ಮತ್ತು ಕಡಿಮೆ ಕಾರ್ಮಿಕ ಶಕ್ತಿಯನ್ನುಪಯೋಗಿಸಿ ನಡೆಸುವ ಉತ್ಪಾದನಾ ರೀತಿಯನ್ನು 'ಬಂಡವಾಳ ತೀವ್ರ ತಂತ್ರ' (Capital Intensive Technique) ಎನ್ನುತ್ತಾರೆ.

ಹೇಗೆ ಉತ್ಪಾದಿಸಬೇಕೆಂಬುದು ತಂತ್ರಜ್ಞಾನದ ಆಯ್ಕೆಗೆ ಸಂಬಂಧಿಸಿದ ಒಂದು ಸಮಸ್ಯೆಯಾಗಿದೆ. ಒಂದು ಪ್ರದೇಶದಲ್ಲಿ ಲಭಿಸುವ ಸಂಪನ್ಮೂಲದ ಆಧಾರದಲ್ಲಿ ಯಾವ ತಾಂತ್ರಿಕತೆಯನ್ನು ಬಳಸಬೇಕೆಂದು ತೀರ್ಮಾನಿಸಲಾಗುತ್ತದೆ. ಸಂಪನ್ಮೂಲಗಳ ಲಭ್ಯತೆಗೆ ಅನುಗುಣವಾಗಿ ಉತ್ಪಾದನೆಯ ರೀತಿಯಲ್ಲಿ ವ್ಯತ್ಯಾಸ ಉಂಟಾಗುತ್ತದೆ.

## ಕಾರ್ಮಿಕ ತೀವ್ರ ತಂತ್ರದ ವಿಶೇಷತೆಗಳು

- ಕಾರ್ಮಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಉಪಯೋಗಿಸಿರುವ ಉತ್ಪಾದನೆ.
- ಕಡಿಮೆ ಬಂಡವಾಳ ಬಳಕೆ.
- ಕಾಲಾವಧಿ ಹೆಚ್ಚಿರುವ ಉತ್ಪಾದನಾ ವಿಧಾನ.
- ಪರಿಸರ ಸ್ನೇಹಿ ಉತ್ಪಾದನಾ ವಿಧಾನ.
- ತಂತ್ರಜ್ಞಾನದ ಬಳಕೆ ಕಡಿಮೆ

## ಬಂಡವಾಳ ತೀವ್ರ ತಂತ್ರದ ವಿಶೇಷತೆಗಳು

- ಕಾರ್ಮಿಕರ ಆವಶ್ಯಕತೆ ಕಡಿಮೆ.
- ಹೆಚ್ಚಿನ ಬಂಡವಾಳ ಹೂಡಿಕೆಯನ್ನು ಬಳಸಿಕೊಳ್ಳುತ್ತದೆ.
- ಉತ್ಪಾದನಾ ಕಾರ್ಯದಕ್ಷತೆಯನ್ನು ಖಾತರಿಪಡಿಸುತ್ತದೆ.
- ತಂತ್ರಜ್ಞಾನದ ಮೇಲೆ ಹೆಚ್ಚು ಅವಲಂಬಿತವಾಗಿದೆ.
- ಉತ್ಪಾದನೆಗೆ ಕಡಿಮೆ ಕಾಲಾವಧಿ ಸಾಕು.

ದೇಶದ ಆವಶ್ಯಕತೆಗಳು, ಉತ್ಪಾದನಾ ಘಟಕಗಳ ಲಭ್ಯತೆ ಮೊದಲಾದವುಗಳನ್ನು ಪರಿಗಣಿಸಿಕೊಂಡು ಉತ್ಪಾದನಾ ವಿಧಾನವನ್ನು ತೀರ್ಮಾನಿಸಬೇಕು.

ನಿಮ್ಮ ಪ್ರದೇಶದಲ್ಲಿ ಕಾರ್ಮಿಕ ತೀವ್ರ ತಂತ್ರ ಮತ್ತು ಬಂಡವಾಳ ತೀವ್ರ ತಂತ್ರವನ್ನುಪಯೋಗಿಸಿ ನಡೆಸುವ ಉತ್ಪಾದನಾ ಚಟುವಟಿಕೆಗಳ ಪಟ್ಟಿ ತಯಾರಿಸಿರಿ.

| ಕಾರ್ಮಿಕ ತೀವ್ರ ತಂತ್ರ | ಬಂಡವಾಳ ತೀವ್ರ ತಂತ್ರ |
|---|---|
| • | • |
| • | • |
| • | • |

## ಯಾರಿಗಾಗಿ ಉತ್ಪಾದಿಸಬೇಕು?

**(For whom to produce?)**

ಜನರ ಆವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಉತ್ಪಾದಿಸಬೇಕು. ಉತ್ಪಾದಿಸುವ ಸರಕು ಮತ್ತು ಸೇವೆಗಳು ಜನರ ನಡುವೆ ಹೇಗೆ ವಿತರಿಸಲ್ಪಡುತ್ತದೆ ಎಂಬುದು ಯಾರಿಗಾಗಿ ಉತ್ಪಾದಿಸಬೇಕು ಎಂಬುದರಿಂದ ತಿಳಿಯಬಹುದು. ಲಭ್ಯವಿರುವ ಸಂಪನ್ಮೂಲಗಳನ್ನು ಸಮಾಜದ ಎಲ್ಲರಿಗೂ ಪ್ರಯೋಜನವಾಗುವ ರೀತಿಯಲ್ಲಿ ಉತ್ಪಾದನಾ ಚಟುವಟಿಕೆಗಳನ್ನು ರೂಪಿಸಬೇಕು.

ಭೂಮಿ, ಪರಿಶ್ರಮ, ಬಂಡವಾಳ ಮತ್ತು ಸಂಘಟನೆ ಮೊದಲಾದ ಉತ್ಪಾದನಾ ಘಟಕಗಳ ಸಂಯೋಜಿತ ಪ್ರಕ್ರಿಯೆಯ ಮೂಲಕ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲಾಗುತ್ತದೆಯೆಂದು ನಿಮಗೆ ತಿಳಿದಿದೆಯಲ್ಲವೆ? ಹಾಗಾದರೆ ಉತ್ಪಾದಿಸಿದ ಸರಕುಗಳ ಮೌಲ್ಯವನ್ನು ಉತ್ಪಾದನಾ ಘಟಕಗಳಿಗೆ ಅವುಗಳ ಪಾಲಿಗನುಗುಣವಾಗಿ ವಿತರಿಸಬೇಕು. ಭೂಮಿಗೆ ಗೇಣಿ, ಪರಿಶ್ರಮಕ್ಕೆ ವೇತನ, ಬಂಡವಾಳಕ್ಕೆ ಬಡ್ಡಿ ಮತ್ತು ಸಂಘಟನೆಗೆ ಲಾಭವಾಗಿ ಉತ್ಪನ್ನದ ಮೌಲ್ಯವನ್ನು ವಿತರಣೆ ಮಾಡಬೇಕು. ಅಂದರೆ ಉತ್ಪಾದನೆಯಿಂದ ಲಭಿಸುವ ಆದಾಯವನ್ನು ಹೇಗೆ ಹಂಚಲಾಗುತ್ತದೆ ಎಂಬುದೂ ಪ್ರಧಾನವಾದುದಾಗಿದೆ.

ಕೆಳಗೆ ನೀಡಿರುವ ಕೆಲವು ಸಂದರ್ಭಗಳನ್ನು ಗಮನಿಸಿರಿ. ಅವು ಯಾವ ಮೂಲಭೂತ ಆರ್ಥಿಕ ಸಮಸ್ಯೆಗಳಿಗೆ ಸಂಬಂಧಿಸಿದೆಯೆಂದು ಕಂಡುಹಿಡಿದು ಬರೆಯಿರಿ.




*ಚಿತ್ರ 4.7 • ವಿತರಣೆ*

*ಆಲೋಚಿಸಿ ಕಂಡುಹಿಡಿಯಿರಿ.*

| | |
|---|---|
| ಕುಟುಂಬಶ್ರೀಯೊಂದರ ಸದಸ್ಯರು ಉತ್ಪಾದನಾ ಘಟಕವೊಂದನ್ನು ಆರಂಭಿಸಲು ತೀರ್ಮಾನಿಸಿದರು. ಸದಸ್ಯರಲ್ಲಿ ಅನೇಕ ಅಭಿಪ್ರಾಯಗಳು ಮೂಡಿದುವು. ಅವರು ತೀರ್ಮಾನಿಸಬೇಕಾದ ಮೂಲಭೂತ ಸಮಸ್ಯೆ ಯಾವುದು? |  • |
| ಚರ್ಚೆಯ ಕೊನೆಯಲ್ಲಿ ಒಂದಿಷ್ಟು ಜಮೀನನ್ನು ಗೇಣಿಗೆ ಪಡೆದು ಕೃಷಿ ಮಾಡಲು ತೀರ್ಮಾನಿಸಿದರು. ಕೃಷಿಗೆ ನೆಲವನ್ನು ಹದಗೊಳಿಸಲು ಯಾವ ಯಾವ ಪ್ರಮಾಣದಲ್ಲಿ ಯಂತ್ರಗಳು ಮತ್ತು ಕೆಲಸಗಾರರು ಬೇಕೆಂಬುದು ಚರ್ಚೆಯಾಯಿತು? ಇದು ಯಾವ ಮೂಲಭೂತ ಆರ್ಥಿಕ ಸಮಸ್ಯೆಗೆ ಸಂಬಂಧಿಸಿದೆ? |  • |
| ಕುಟುಂಬಶ್ರೀ ಘಟಕವು ಕಾರ್ಯನಿರ್ವಹಿಸುವ ಪ್ರದೇಶದಲ್ಲಿ ತರಕಾರಿ ಕೃಷಿ ಮಾಡದ ಕುಟುಂಬಗಳಿವೆ. ಅವರಿಗೆ ತರಕಾರಿ ಅಗತ್ಯವಾಗಿದೆ. ಉಳಿಕೆಯಾದ ತರಕಾರಿಯನ್ನು ಹತ್ತಿರದ ಪ್ರದೇಶಗಳಲ್ಲಿ ಮಾರಾಟ ಮಾಡುವ ಉದ್ದೇಶವೂ ಇವರಿಗಿದೆ. ಅಲ್ಲದೆ ಕೃಷಿಯಿಂದ ಲಭಿಸುವ ಲಾಭವನ್ನು ಸದಸ್ಯರಿಗೆ ಹಂಚಬೇಕು. ಇದು ಯಾವ ಮೂಲಭೂತ ಆರ್ಥಿಕ ಸಮಸ್ಯೆಗೆ ಸಂಬಂಧಿಸಿದೆ? |  • |

ಪ್ರಪಂಚದಾದ್ಯಂತ ಅಸ್ತಿತ್ವದಲ್ಲಿರುವ ಈ ಮೂಲಭೂತ ಆರ್ಥಿಕ ಸಮಸ್ಯೆಗಳನ್ನು ವಿಭಿನ್ನ ಆರ್ಥಿಕ ವ್ಯವಸ್ಥೆಗಳ ಮೂಲಕ ಪರಿಹರಿಸಲಾಗುತ್ತದೆ. ಆರ್ಥಿಕ ವ್ಯವಸ್ಥೆ ಎಂದರೇನು? ಆರ್ಥಿಕ ವ್ಯವಸ್ಥೆ ಎಂದರೆ ಒಂದು ದೇಶವು ವಿವಿಧ ಸರಕು ಮತ್ತು ಸೇವೆಗಳ ಉತ್ಪಾದನೆ, ವಿತರಣೆ, ಬಳಕೆ ಮೊದಲಾದವುಗಳನ್ನು ಕ್ರಮೀಕರಿಸುವ ರೀತಿಯಾಗಿದೆ. ಲಭ್ಯವಿರುವ ಸಂಪನ್ಮೂಲಗಳ ಬಳಕೆಯ ಮೂಲಕ ಮಾನವರ ಆವಶ್ಯಕತೆಗಳನ್ನು ತೃಪ್ತಿಪಡಿಸುವುದು ಪ್ರತಿಯೊಂದು ಆರ್ಥಿಕ ವ್ಯವಸ್ಥೆಯ ಕರ್ತವ್ಯವಾಗಿದೆ.

## ಆರ್ಥಿಕ ವ್ಯವಸ್ಥೆಯ ವಿಶೇಷತೆಗಳು

- ಆರ್ಥಿಕ ವ್ಯವಸ್ಥೆಯು ಮಾನವ ನಿರ್ಮಿತವಾಗಿದೆ.
- ಆರ್ಥಿಕ ವ್ಯವಸ್ಥೆಗಳು ಬದಲಾವಣೆಗೆ ವಿಧೇಯವಾಗಿವೆ.
- ಆರ್ಥಿಕ ವ್ಯವಸ್ಥೆಯಲ್ಲಿ ನಡೆಯುವ ಆರ್ಥಿಕ ಚಟುವಟಿಕೆಗಳು ಬದಲಾಗುತ್ತಿರುತ್ತವೆ.
- ಉತ್ಪಾದನೆ, ವಿತರಣೆ, ಬಳಕೆ ಮೊದಲಾದುವುಗಳು ಆರ್ಥಿಕ ವ್ಯವಸ್ಥೆಯ ಪ್ರಧಾನ ಚಟುವಟಿಕೆಗಳಾಗಿವೆ.

## ವಿವಿಧ ರೀತಿಯ ಆರ್ಥಿಕ ವ್ಯವಸ್ಥೆಗಳು

ಉತ್ಪಾದನಾ ಘಟಕಗಳ ಮಾಲಕತ್ವದ ಆಧಾರದಲ್ಲಿ ಆರ್ಥಿಕ ವ್ಯವಸ್ಥೆಯನ್ನು ಮೂರಾಗಿ ವರ್ಗೀಕರಿಸಲಾಗಿದೆ.




## ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ (Capitalist Economy)

ಇದು ಉತ್ಪಾದನಾ ಘಟಕಗಳ ಮಾಲಕತ್ವವು ಖಾಸಗಿ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗಿರುವ ಆರ್ಥಿಕ ವ್ಯವಸ್ಥೆಯಾಗಿದೆ.

### ವಿಶೇಷತೆಗಳು

- ಎಲ್ಲಾ ವ್ಯಕ್ತಿಗಳಿಗೂ ಆಸ್ತಿಯನ್ನು ಹೊಂದುವ ಹಕ್ಕು.
- ಗರಿಷ್ಠ ಲಾಭದ ಉದ್ದೇಶ.
- ಪರಿಮಿತವಾದ ಸರಕಾರದ ಹಸ್ತಕ್ಷೇಪ.

- ಖಾಸಗಿ ವ್ಯಕ್ತಿಗಳಿಗೆ ಯಾವುದೇ ಸಂಪನ್ಮೂಲಗಳನ್ನು ಸಂಗ್ರಹಿಸಲು ಮತ್ತು ಅವುಗಳನ್ನುಪಯೋಗಿಸಿ ಅವರಿಗೆ ಇಷ್ಟವಿರುವ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ಸಾಧ್ಯವಿದೆ.
- ಗ್ರಾಹಕರಿಗೆ ಮಾರುಕಟ್ಟೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ. (ಗ್ರಾಹಕರ ಪರಮಾಧಿಕಾರ)
- ಕೈಗಾರಿಕೆಗಳ ನಡುವೆ ಸ್ಪರ್ಧೆಯು ಅಸ್ತಿತ್ವದಲ್ಲಿರುತ್ತದೆ.

ಇಂದು ಅನೇಕ ಬಂಡವಾಳಶಾಹಿ ದೇಶಗಳ ಆರ್ಥಿಕ ಅಭಿವೃದ್ಧಿಯಲ್ಲಿ ಸರಕಾರದ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಕಾಣಲು ಸಾಧ್ಯವಿದೆ.

## ಸಮಾಜವಾದಿ ಆರ್ಥಿಕ ವ್ಯವಸ್ಥೆ (Socialist Economy)

ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಎಲ್ಲಾ ಉತ್ಪಾದನಾ ಘಟಕಗಳ ಮಾಲಕತ್ವ ಮತ್ತು ನಿಯಂತ್ರಣವು ಸರಕಾರದಲ್ಲಿ ನಿಕ್ಷಿಪ್ತವಾಗಿರುತ್ತದೆ. ಒಂದು ಕೇಂದ್ರೀಕೃತ ಯೋಜನಾ ಆಯೋಗವು ಆರ್ಥಿಕ ಚಟುವಟಿಕೆಗಳಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ.

### ವಿಶೇಷತೆಗಳು

- ಉತ್ಪಾದನಾ ಘಟಕಗಳ ಮಾಲಕತ್ವವು ಸರಕಾರದಲ್ಲಿ ನಿಕ್ಷಿಪ್ತವಾಗಿದೆ.
- ಸಾಮಾಜಿಕ ಕ್ಷೇಮ ಪ್ರಧಾನ ಉದ್ದೇಶ.
- ಮಾರುಕಟ್ಟೆಯ ಮೇಲೆ ಸರಕಾರದ ನಿಯಂತ್ರಣ.
- ಕೇಂದ್ರ ಯೋಜನಾ ಆಯೋಗವು ಸಂಪನ್ಮೂಲಗಳ ಲಭ್ಯತೆ ಮತ್ತು ರಾಷ್ಟ್ರೀಯ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಸಂಪನ್ಮೂಲಗಳನ್ನು ಬಳಕೆ ಮಾಡುತ್ತದೆ.
- ಆದಾಯ ಮತ್ತು ಸಂಪತ್ತಿನ ಅಸಮಾನತೆಯನ್ನು ಕಡಿಮೆಗೊಳಿಸುತ್ತದೆ.

ಇಂದು ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಖಾಸಗಿ ಉದ್ಯಮಗಳ ಭಾಗವಹಿಸುವಿಕೆಯನ್ನು ಕಾಣಬಹುದು.

## ಮಿಶ್ರ ಆರ್ಥಿಕ ವ್ಯವಸ್ಥೆ (Mixed Economy)

ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಮತ್ತು ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಕೆಲವು ವಿಶೇಷತೆಗಳು ಸಂಯೋಜಿತವಾಗಿ ಕಂಡುಬರುತ್ತವೆ.

### ವಿಶೇಷತೆಗಳು

- ಖಾಸಗಿ ಮತ್ತು ಸಾರ್ವಜನಿಕ ವಲಯದ ಸಹವರ್ತಿತ್ವ.
- ಲಾಭ ಮತ್ತು ಸಾಮಾಜಿಕ ಕ್ಷೇಮ ಪ್ರಧಾನ ಉದ್ದೇಶಗಳು.

- ಆರ್ಥಿಕ ಚಟುವಟಿಕೆಗಳಲ್ಲಿ ವೈಯಕ್ತಿಕ ಸ್ವಾತಂತ್ರ್ಯ.
- ಸರಕಾರದ ಯೋಜನೆಗಳನ್ನು ಸಿದ್ಧಪಡಿಸುವುದಕ್ಕಾಗಿರುವ ಹಣಕಾಸು ಯೋಜನೆಗಳು.
- ಕೆಲವು ವಲಯಗಳಲ್ಲಿ ಸರಕುಗಳ ದರದಲ್ಲಿ ಸರಕಾರದ ನಿಯಂತ್ರಣ.
- ಸರಕಾರವು ಅಗತ್ಯ ಸರಕು ಮತ್ತು ಸೇವೆಗಳಿಗೆ ಪ್ರಾಧಾನ್ಯವನ್ನು ನೀಡುತ್ತದೆ.

ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಮಾರುಕಟ್ಟೆಗಳು ಮತ್ತು ಕೇಂದ್ರೀಕೃತ ಯೋಜನೆಗಳ ಮೂಲಕ ಮೂಲಭೂತ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲಾಗುತ್ತದೆ. ಸ್ವಾತಂತ್ರ್ಯಾನಂತರ ಭಾರತವು ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಸ್ವೀಕರಿಸಿದೆ.

ಜಾಗತಿಕ ಆರ್ಥಿಕ ವ್ಯವಸ್ಥೆಯು ಇಂದು ಜ್ಞಾನಾಧಾರಿತ ಆರ್ಥಿಕ ವ್ಯವಸ್ಥೆಯೆಡೆಗೆ ಬದಲಾಗುತ್ತಿದೆ.

### *ಜ್ಞಾನಾಧಾರಿತ ಆರ್ಥಿಕ ವ್ಯವಸ್ಥೆ*
*(Knowledge Economy)*

*ಜ್ಞಾನ ಮತ್ತು ಕೌಶಲ್ಯಗಳು ಬೆಳವಣಿಗೆ ಹಾಗೂ ನಾವೀನ್ಯತೆಯ ಚಾಲಕ ಶಕ್ತಿಗಳಾಗಿರುವ ಒಂದು ಆರ್ಥಿಕ ವ್ಯವಸ್ಥೆಯೇ ಜ್ಞಾನಾಧಾರಿತ ಆರ್ಥಿಕ ವ್ಯವಸ್ಥೆಯಾಗಿದೆ. ಈ ಆರ್ಥಿಕ ವ್ಯವಸ್ಥೆಯಲ್ಲಿ ಜ್ಞಾನವನ್ನು ಒಂದು ಪ್ರಮುಖ ಸಂಪನ್ಮೂಲವಾಗಿ ಪರಿಗಣಿಸಲಾಗುತ್ತದೆ. ಇದರ ನಿರ್ಮಾಣ, ಪ್ರಸರಣ ಮತ್ತು ಪ್ರಯೋಗವು ಆರ್ಥಿಕ ಅಭಿವೃದ್ಧಿಗೆ ನಿರ್ಣಾಯಕವಾಗಿದೆ.*

*'ವಿವಿಧ ರೀತಿಯ ಆರ್ಥಿಕ ವ್ಯವಸ್ಥೆಗಳ ವಿಶೇಷತೆಗಳು' ಎಂಬ ವಿಷಯದಲ್ಲಿ ಪ್ಯಾನಲ್ ಚರ್ಚೆಯೊಂದನ್ನು ನಡೆಸಿ, ವರದಿ ತಯಾರಿಸಿರಿ.*

ಮಾನವನ ಆವಶ್ಯಕತೆಗಳು, ಮೂಲಭೂತ ಆರ್ಥಿಕ ಸಮಸ್ಯೆಗಳು, ಆರ್ಥಿಕ ವ್ಯವಸ್ಥೆಗಳು ಮೊದಲಾದವುಗಳನ್ನು ಚರ್ಚಿಸಿದೆವಲ್ಲವೆ? ಅರ್ಥಶಾಸ್ತ್ರವು ಇಂತಹ ಆರ್ಥಿಕ ಚಟುವಟಿಕೆಗಳ ಕುರಿತು ಪ್ರತಿಪಾದಿಸುವ ವಿಜ್ಞಾನದ ಶಾಖೆಯಾಗಿದೆ. ನಮ್ಮ ದೈನಂದಿನ ಜೀವನದಲ್ಲಿ ಉಪಯೋಗಿಸುವ ಸರಕು ಮತ್ತು ಸೇವೆಗಳು, ಮಾರುಕಟ್ಟೆ, ಮುಂಗಡಪತ್ರ (ಬಜೆಟ್), ಬ್ಯಾಂಕಿಂಗ್ ಮೊದಲಾದವುಗಳೂ ಇದರಲ್ಲಿ ಒಳಪಡುತ್ತವೆ.

ಅರ್ಥಶಾಸ್ತ್ರವನ್ನು ಆರಂಭಕಾಲದಲ್ಲಿ ಸಂಪತ್ತಿನ ವಿಜ್ಞಾನ ಎಂದು ಕರೆಯುತ್ತಿದ್ದರು. ಅರ್ಥಶಾಸ್ತ್ರದ ಪಿತಾಮಹನೆಂದು ಕರೆಯಲಾಗುವ ಆಡಂಸ್ಮಿತ್ ಈ ಸಿದ್ಧಾಂತದ ಪ್ರಧಾನ ಪ್ರತಿಪಾದಕನಾಗಿದ್ದಾನೆ. ಆಲ್ಫ್ರೆಡ್ ಮಾರ್ಷಲ್ ಕ್ಷೇಮದ ಕುರಿತು ಪ್ರತಿಪಾದಿಸುವ ವಿಜ್ಞಾನವಾಗಿ ಅರ್ಥಶಾಸ್ತ್ರವನ್ನು ರೂಪಿಸಿದನು. ಲಯನಲ್ ರೋಬಿನ್ಸ್ ಅರ್ಥಶಾಸ್ತ್ರವನ್ನು ಮಾನವನ ಆವಶ್ಯಕತೆಗಳು ಮತ್ತು ಪರಿಮಿತವಾದ ಸಂಪನ್ಮೂಲಗಳ ನಡುವಿನ ಸಂಬಂಧದ ಕುರಿತಾಗಿ ಚರ್ಚಿಸುವ ವಿಜ್ಞಾನದ ಶಾಖೆಯಾಗಿ ನಿರೂಪಿಸಿದನು.



*ಚಿತ್ರ 4.8* •
*ಆಡಂಸ್ಮಿತ್*



*ಚಿತ್ರ 4.9* •
*ಆಲ್ಫ್ರೆಡ್ ಮಾರ್ಷಲ್*



*ಚಿತ್ರ 4.10* •
*ಲಯನಲ್ ರೋಬಿನ್ಸ್*

ಅರ್ಥಶಾಸ್ತ್ರದ ವಿಕಾಸಕ್ಕೆ ಪ್ರಚೋದನೆಯನ್ನಿತ್ತ ಕೆಲವು ಆಶಯಗಳನ್ನು ನಾವು ಪರಿಚಯಿಸಿಕೊಳ್ಳೋಣ.



*ಚಿತ್ರ 4.11* • **ಡೇವಿಡ್ ರಿಕಾರ್ಡೋ**

ಎರಡು ದೇಶಗಳ ನಡುವಿನ ವ್ಯಾಪಾರ ಸಂಬಂಧದ ಮೂಲಕ ಎರಡೂ ದೇಶಗಳ ಕ್ಷೇಮವನ್ನು ಹೆಚ್ಚಿಸಬಹುದೆಂಬ ಸಿದ್ಧಾಂತವನ್ನು ಬ್ರಿಟಿಷ್ ಅರ್ಥಶಾಸ್ತ್ರಜ್ಞನಾದ ಡೇವಿಡ್ ರಿಕಾರ್ಡೋ ಆವಿಷ್ಕರಿಸಿದನು. ಭೂಮಿಯ ಗೇಣಿಗೆ ಸಂಬಂಧಿಸಿದ 'ಗೇಣಿ ಸಿದ್ಧಾಂತ' (Theory of Rent) ವು ಬಹಳ ಪ್ರಸಿದ್ಧವಾದುದಾಗಿದೆ.



*ಚಿತ್ರ 4.12* • **ಕಾರ್ಲ್ ಮಾರ್ಕ್ಸ್**

ಜರ್ಮನ್ ಅರ್ಥಶಾಸ್ತ್ರಜ್ಞ ಮತ್ತು ತತ್ವಚಿಂತಕನಾದ ಕಾರ್ಲ್ ಮಾರ್ಕ್ಸ್, 'ಮಿಗತೆ ಮೌಲ್ಯ ಸಿದ್ಧಾಂತ' (Theory of Surplus Value) ವನ್ನು ರೂಪಿಸಿದವನಾಗಿದ್ದಾನೆ. ಮಾರ್ಕ್ಸ್ ನ ಅಭಿಪ್ರಾಯದಂತೆ ಕಾರ್ಮಿಕ ಪರಿಶ್ರಮವು ಉತ್ಪಾದನೆಯ ಮೂಲಭೂತ ಘಟಕವಾಗಿದೆ. ಆದರೆ ಇದರ ಒಂದು ಸಣ್ಣ ಭಾಗವನ್ನು ಮಾತ್ರವೇ ಕಾರ್ಮಿಕನಿಗೆ ನೀಡಿ ಬಹುಭಾಗವನ್ನು ಮಾಲಕ ವಶಪಡಿಸುತ್ತಾನೆ.



*ಚಿತ್ರ 4.13* •
**ಜೆ.ಎಂ. ಕೆಯಿನ್ಸ್**

ಜೆ.ಎಂ. ಕೆಯಿನ್ಸ್ ಆರ್ಥಿಕ ವಲಯದಲ್ಲಿ ಸರಕಾರದ ಹಸ್ತಕ್ಷೇಪ ಎಂಬ ಸಿದ್ಧಾಂತಕ್ಕಾಗಿ ವಾದಿಸಿದ ಅರ್ಥಶಾಸ್ತ್ರಜ್ಞನಾಗಿದ್ದಾನೆ. ಸರಕಾರದ ಹಸ್ತಕ್ಷೇಪದ ಮೂಲಕ ಆರ್ಥಿಕ ಸಮಸ್ಯೆಗಳನ್ನು ಒಂದು ಹಂತದವರೆಗೆ ಪರಿಹರಿಸಬಹುದೆಂದು ಅವನು ಅಭಿಪ್ರಾಯಪಟ್ಟನು.



*ಚಿತ್ರ 4.14* • **ಜೆ.ಎ. ಶುಂಪೀಟರ್**

"ಸೃಜನಶೀಲ ವಿನಾಶ" (Creative Destruction) ವು ಜೆಕ್ ರಿಪಬ್ಲಿಕ್ ವಂಶಜನಾದ ಜೆ.ಎ. ಶುಂಪೀಟರ್ ಆವಿಷ್ಕರಿಸಿದ ಸಿದ್ಧಾಂತವಾಗಿದೆ. ಕೈಗಾರಿಕೆಗಳು ಮತ್ತು ತಂತ್ರಜ್ಞಾನಗಳು ನೂತನ ಆವಿಷ್ಕಾರಗಳ (Innovation) ಮೂಲಕ ಹೊಸ ಅವಕಾಶಗಳನ್ನು ಮತ್ತು ಬೆಳವಣಿಗೆಯನ್ನು ಸೃಷ್ಟಿಸುತ್ತವೆ. ಆದರೆ ನೂತನ ಆವಿಷ್ಕಾರಗಳಿಂದ ಅಸ್ತಿತ್ವದಲ್ಲಿರುವ ಕೈಗಾರಿಕೆಗಳು ಮತ್ತು ತಂತ್ರಜ್ಞಾನಗಳು ಕುಂಠಿತಗೊಳ್ಳುತ್ತವೆ ಅಥವಾ ನಾಶವಾಗುತ್ತವೆಯೆಂದು ಅವನು ಅಭಿಪ್ರಾಯಪಟ್ಟನು.

*ಕೆಳಗಿನ ಆಶಯಗಳು ಯಾವ ಅರ್ಥಶಾಸ್ತ್ರಜ್ಞರ ಆರ್ಥಿಕ ಸಿದ್ಧಾಂತಕ್ಕೆ ಸಂಬಂಧಿಸಿದೆಯೆಂದು ಕಂಡುಹಿಡಿಯಿರಿ.*

| | |
|---|---|
| *ಸ್ಮಾರ್ಟ್ ಫೋನ್ ಉದ್ಯಮಗಳ ಬೆಳವಣಿಗೆಯು ಟೇಪ್ ರೆಕಾರ್ಡರ್, ವೀಡಿಯೋ ಪ್ಲೇಯರ್, ಫಿಲಿಂ ಕ್ಯಾಮರಾ ಮೊದಲಾದ ಉದ್ಯಮಗಳ ಅವನತಿಗೆ ಕಾರಣವಾದುವು.* | |
| *ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ಸರಕಾರದ ಹಸ್ತಕ್ಷೇಪವು ಅಗತ್ಯವಾಗಿದೆ.* | |
| *ಎರಡು ದೇಶಗಳ ನಡುವಿನ ವ್ಯಾಪಾರದಿಂದ ಎರಡೂ ದೇಶಗಳಿಗೆ ಲಾಭವನ್ನುಂಟುಮಾಡಬಹುದು. ಅಲ್ಲದೆ ಜನರ ಕ್ಷೇಮವನ್ನು ಹೆಚ್ಚಿಸಲು ಸಾಧ್ಯವಿದೆ.* | |
| *ಕಾರ್ಮಿಕ ಪರಿಶ್ರಮವು ಉತ್ಪಾದನೆಯ ಮೂಲಭೂತ ಘಟಕವಾಗಿದೆ.* | |

ಜಗತ್ತಿನಲ್ಲಿ ಅರ್ಥಶಾಸ್ತ್ರದ ವಿಕಾಸಕ್ಕಾಗಿ ಕೊಡುಗೆ ನೀಡಿದ ಪ್ರಸಿದ್ಧ ಭಾರತೀಯ ಅರ್ಥಶಾಸ್ತ್ರಜ್ಞರೂ ಇದ್ದಾರೆ. ರಾಷ್ಟ್ರದ ಅಭಿವೃದ್ಧಿಗೆ ಕಾರ್ಯದಕ್ಷತೆಯ ತೆರಿಗೆ ವ್ಯವಸ್ಥೆಯನ್ನು ನೀಡಿದ ಪ್ರಾಚೀನ ಭಾರತದ ಚಾಣಕ್ಯ, ಸೋರಿಕೆ ಸಿದ್ಧಾಂತ (The Drain Theory) ದ ಪ್ರತಿಪಾದಕರಾದ ದಾದಾಭಾಯಿ ನವರೋಜಿ ಮೊದಲಾದವರು ಇವರಲ್ಲಿ ಪ್ರಮುಖರಾಗಿದ್ದಾರೆ.

ಭಾರತದ ರಾಷ್ಟ್ರಪಿತರಾದ ಮಹಾತ್ಮ ಗಾಂಧಿಯವರ ಆರ್ಥಿಕ ಸಿದ್ಧಾಂತಗಳನ್ನು ಅವರ ಕೃತಿಗಳಾದ 'ಹಿಂದ್ ಸ್ವರಾಜ್' ಮತ್ತು 'ಇಂಡಿಯಾ ಆಫ್ ಮೈ ಡ್ರೀಮ್ಸ್' ಗಳಲ್ಲಿ ಪ್ರತಿಪಾದಿಸಲಾಗಿದೆ.



*ಚಿತ್ರ 4.15 • ಮಹಾತ್ಮ ಗಾಂಧಿ*

## ಗಾಂಧಿಜಿಯವರ ಅರ್ಥಶಾಸ್ತ್ರದ ಚಿಂತನೆಗಳು

- ಸ್ವಾವಲಂಬನೆ, ವಿಕೇಂದ್ರೀಕರಣ ಮೊದಲಾದವುಗಳಲ್ಲಿ ಹುದುಗಿರುವ ಆರ್ಥಿಕ ವ್ಯವಸ್ಥೆಯನ್ನು ಗಾಂಧಿಜಿಯವರು ಪ್ರತಿಪಾದಿಸಿದರು.
- ಪ್ರಾದೇಶಿಕವಾಗಿ ಉದ್ಯೋಗವಕಾಶಗಳನ್ನು ಹೆಚ್ಚಿಸಲು ಗ್ರಾಮೀಣ ಗುಡಿಕೈಗಾರಿಕೆಗಳನ್ನು ಪೋಷಿಸಬೇಕು.
- ಪ್ರಾದೇಶಿಕವಾಗಿ ಉತ್ಪಾದಿಸುವ ಸರಕುಗಳ ಮಾರಾಟಕ್ಕಾಗಿ ಪ್ರಾದೇಶಿಕ ಮಾರುಕಟ್ಟೆಗಳನ್ನು ಅಭಿವೃದ್ಧಿಗೊಳಿಸಬೇಕು.
- ಸಾಮಾಜಿಕ ನ್ಯಾಯವನ್ನು ಖಚಿತಪಡಿಸಲು ಆರ್ಥಿಕ ಅಸಮಾನತೆಯನ್ನು ಲಘೂಕರಿಸಬೇಕು.

ಅಮರ್ತ್ಯ ಕುಮಾರ್ ಸೇನ್, ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ಗಳಿಸಿದ ಮೊದಲ ಭಾರತೀಯ ಅರ್ಥಶಾಸ್ತ್ರಜ್ಞರಾಗಿದ್ದಾರೆ. ಕ್ಷೇಮ ಅರ್ಥಶಾಸ್ತ್ರಕ್ಕೆ (Welfare Economics) ನೀಡಿದ ಗಣನೀಯ ಕೊಡುಗೆಗಾಗಿ 1998 ರಲ್ಲಿ ಅವರಿಗೆ ನೊಬೆಲ್ ಪ್ರಶಸ್ತಿಯು ದೊರಕಿತು.

ಅಮರ್ತ್ಯ ಕುಮಾರ್ ಸೇನ್ ರ ಕ್ಷೇಮ ಅರ್ಥಶಾಸ್ತ್ರ ಚಿಂತನೆಗಳು

- ಆರ್ಥಿಕಾಭಿವೃದ್ಧಿಯನ್ನು ಗಳಿಸಲು ವಿದ್ಯಾಭ್ಯಾಸ, ಆರೋಗ್ಯ ರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳಿಗೆ ಪ್ರಾಧಾನ್ಯ ನೀಡಬೇಕು.
- ಲಿಂಗ ಸಮಾನತೆ, ಸ್ತ್ರೀ ಸಬಲೀಕರಣ ಮೊದಲಾದವು ದೇಶದ ಅಭಿವೃದ್ಧಿಗೆ ಅನಿವಾರ್ಯವಾಗಿವೆ.
- ಮಾನವ ಹಕ್ಕುಗಳು ಮತ್ತು ಸ್ವಾತಂತ್ರ್ಯದ ಮೇಲೆ ಬೀರುವ ಪ್ರಭಾವದ ಆಧಾರದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಅವಲೋಕಿಸಬೇಕು.

ಜಾಗತಿಕ ಬಡತನ ನಿರ್ಮೂಲನೆಗಿರುವ ಪ್ರಾಯೋಗಿಕ ಸಮೀಪನವನ್ನು ರೂಪಿಸಿದುದಕ್ಕಾಗಿ 2019ರ ಅರ್ಥಶಾಸ್ತ್ರಕ್ಕಿರುವ ನೊಬೆಲ್ ಪ್ರಶಸ್ತಿಯು ಭಾರತೀಯ ವಂಶಜನಾದ ಅಮೇರಿಕಾದ ಅರ್ಥಶಾಸ್ತ್ರಜ್ಞ ಅಭಿಜಿತ್ ವಿನಾಯಕ್ ಬ್ಯಾನರ್ಜಿಯವರಿಗೆ ಲಭಿಸಿತು. ಎಸ್ತರ್ ಡುಫ್ಲೊ ಮತ್ತು ಮೈಕಲ್ ಕ್ರೆಮರ್ ಅವರೊಂದಿಗೆ ಅವರು ನೊಬೆಲ್ ಪ್ರಶಸ್ತಿಯನ್ನು ಹಂಚಿಕೊಂಡರು.



***ಚಿತ್ರ 4.16 • ಅಮರ್ತ್ಯ ಕುಮಾರ್ ಸೇನ್***



***ಚಿತ್ರ 4.17 • ಅಭಿಜಿತ್ ವಿನಾಯಕ್ ಬ್ಯಾನರ್ಜಿ***

*ಕೆಲವು ಭಾರತೀಯ ಅರ್ಥಶಾಸ್ತ್ರಜ್ಞರ ಹೆಸರು ಮತ್ತು ಅವರ ಚಿಂತನೆಗಳನ್ನು ಕೆಳಗೆ ನೀಡಲಾಗಿದೆ. ಬಿಟ್ಟು ಹೋದವುಗಳನ್ನು ಕಂಡುಹಿಡಿದು ಬರೆಯಿರಿ.*



ಜಾಗತಿಕ ರಾಷ್ಟ್ರಗಳು ಎದುರಿಸುತ್ತಿರುವ ಮೂಲಭೂತ ಆರ್ಥಿಕ ಸಮಸ್ಯೆಗಳನ್ನು ಅರ್ಥೈಸಿಕೊಳ್ಳುವ ಮೂಲಕ, ಸಂಪನ್ಮೂಲಗಳನ್ನು ಯಾಕೆ ಕಾರ್ಯದಕ್ಷತೆಯಿಂದ ಬಳಸಬೇಕೆಂಬುದನ್ನು ತಿಳಿದೆವು. ಜಗತ್ತಿನ ಪ್ರಮುಖ ಆರ್ಥಿಕ ವ್ಯವಸ್ಥೆಗಳನ್ನು ಗುರುತಿಸಿ, ಮೂಲಭೂತ ಆರ್ಥಿಕ ಸಮಸ್ಯೆಗಳನ್ನು ಹೇಗೆ ಪರಿಹರಿಸಲಾಗುತ್ತದೆ ಎಂಬುದನ್ನು ಚರ್ಚಿಸಿದ್ದೇವೆ. ಲಭ್ಯವಿರುವ ಸಂಪನ್ಮೂಲಗಳನ್ನು ಬುದ್ಧಿವಂತಿಕೆಯಿಂದ ಮತ್ತು ಕಾರ್ಯದಕ್ಷತೆಯಿಂದ ಬಳಸಿ ಮುಂದಿನ ಪೀಳಿಗೆಯ ಕ್ಷೇಮವನ್ನು ಖಾತರಿಗೊಳಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

## ಮುಂದುವರಿದ ಚಟುವಟಿಕೆಗಳು

- ನಿಮ್ಮ ಸಮೀಪ ಪ್ರದೇಶದಲ್ಲಿರುವ ಯಾವುದಾದರೂ ಉತ್ಪಾದನಾ ಘಟಕ ಅಥವಾ ಕೃಷಿ ಸ್ಥಳವನ್ನು ಸಂದರ್ಶಿಸಿ ವಿವಿಧ ಸರಕು ಮತ್ತು ಸೇವೆಗಳನ್ನು ಹೇಗೆ ಉತ್ಪಾದಿಸುತ್ತಾರೆಂದು ಕಂಡುಹಿಡಿಯಲು ಬೇಕಾದ ಮಾಹಿತಿ ಸಂಗ್ರಹ ನಡೆಸಲು ಪ್ರಶ್ನಾವಳಿಯೊಂದನ್ನು ತಯಾರಿಸಿರಿ.
- ಕಾರ್ಮಿಕ ತೀವ್ರ ತಂತ್ರ ಮತ್ತು ಬಂಡವಾಳ ತೀವ್ರ ತಂತ್ರಗಳ ವಿಶೇಷತೆಗಳಿಗೆ ಸಂಬಂಧಿಸಿ ಸೆಮಿನಾರ್ ಆಯೋಜಿಸಿರಿ.
- ಕೆಳಗೆ ಕೊಟ್ಟಿರುವ ದೇಶಗಳಲ್ಲಿ ಬಹುಪಾಲು ಉತ್ಪಾದನಾ ಘಟಕಗಳ ಮಾಲಕತ್ವ ಮತ್ತು ನಿಯಂತ್ರಣವು ಸರಕಾರದಲ್ಲಿ ನಿಕ್ಷಿಪ್ತವಾಗಿರುವ ಆರ್ಥಿಕ ವ್ಯವಸ್ಥೆಗಳಿರುವ ದೇಶಗಳನ್ನು ಅಧ್ಯಾಪಕರ ಸಹಾಯದಿಂದ ಕಂಡುಹಿಡಿಯಿರಿ.

  ಭಾರತ, ಅಮೇರಿಕಾ, ಚೀನಾ, ಕೆನಡ, ಸ್ವೀಡನ್, ಡೆನ್ಮಾರ್ಕ್, ಇಂಗ್ಲೆಂಡ್, ಕ್ಯೂಬಾ, ಆಸ್ಟ್ರೇಲಿಯಾ, ಪಾಕಿಸ್ತಾನ, ಶ್ರೀಲಂಕಾ.

ಅಧ್ಯಾಯ 5

# ಭಾರತದ ಸಂವಿಧಾನ: ಹಕ್ಕುಗಳು ಮತ್ತು ಕರ್ತವ್ಯಗಳು



ಸ್ವಾತಂತ್ರ್ಯವಿದ್ದರೂ ಸಮಾನತೆಯ ಅಭಾವವು ಕೆಲವರು ಬಹುಮಂದಿಯ ಮೇಲೆ ಅಧಿಕಾರ ಚಲಾಯಿಸಲು ಕಾರಣವಾಗುತ್ತದೆ. ಸ್ವಾತಂತ್ರ್ಯವಿಲ್ಲದ ಸಮಾನತೆಯು ವ್ಯಕ್ತಿ ಮುನ್ನಡೆಗೆ ಹಾನಿಯನ್ನು ಉಂಟುಮಾಡುತ್ತದೆ. ಸಹೋದರತೆ ಇಲ್ಲದಿದ್ದಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಸ್ವಾಭಾವಿಕತೆಯನ್ನು ಗಳಿಸಲು ಸಾಧ್ಯವಿಲ್ಲ.

***ಡಾ ಬಿ. ಆರ್. ಅಂಬೇಡ್ಕರ್***
*(ಸಂವಿಧಾನ ರಚನಾ ಸಭೆ, ನವಂಬರ್ 25, 1949)*



• ಚಿತ್ರ 5.1

ಮೇಲೆ ನೀಡಿರುವುದು ನಮ್ಮ ಸಂವಿಧಾನ ಶಿಲ್ಪಿಯಾದ ಡಾ. ಬಿ. ಆರ್. ಅಂಬೇಡ್ಕರ್ ಅವರು 1949 ನವೆಂಬರ್ 25ರಂದು ಸಂವಿಧಾನ ರಚನಾ ಸಭೆಯಲ್ಲಿ ನಡೆಸಿದ ಭಾಷಣದ ಆಯ್ದಭಾಗಗಳಾಗಿವೆ. ಸಮಾನತೆ, ಸ್ವಾತಂತ್ರ್ಯ ಹಾಗೂ ಸಹೋದರತೆಯ ಪ್ರಾಮುಖ್ಯತೆಯನ್ನು ಈ ಮಾತುಗಳು ಸ್ಪಷ್ಟ ಪಡಿಸುತ್ತವೆ.

### *ಸಂವಿಧಾನ ರಚನಾ ಸಭೆ*



•*ಚಿತ್ರ 5.2*



•*ಚಿತ್ರ 5.3*

*1946 ಡಿಸೆಂಬರ್ 6ರಂದು ಸಂವಿಧಾನ ರಚನಾ ಸಭೆಯು ಅಸ್ತಿತ್ವಕ್ಕೆ ಬಂತು. ಡಾ ರಾಜೇಂದ್ರ ಪ್ರಸಾದ್ ಈ ಸಭೆಯ ಅಧ್ಯಕ್ಷರಾಗಿದ್ದರು. ಭಾರತದ ಪ್ರಥಮ ಪ್ರಧಾನ ಮಂತ್ರಿ ಆಗಿದ್ದ ಜವಾಹರ್ ಲಾಲ್ ನೆಹರೂ ರವರು ಮೂರು ಪ್ರಮುಖ ಉಪಸಮಿತಿಗಳ ಅಧ್ಯಕ್ಷರಾಗಿದ್ದರು. ರೂಪೀಕರಣ ಸಮಯದಲ್ಲಿ 389 ಸದಸ್ಯರಿದ್ದ ಸಭೆಯನ್ನು 1947ರಲ್ಲಿ ಸ್ವಾತಂತ್ರ್ಯ ಲಭಿಸಿದ ನಂತರ 299 ಸದಸ್ಯರಾಗಿ ಪುನಃ ಸಂಘಟಿಸಲಾಯಿತು.*

ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆ ಎಂಬಿವುಗಳನ್ನು ಎಲ್ಲ ಪೌರರಿಗಾಗಿ ಸಂರಕ್ಷಿಸುತ್ತೇವೆ ಎಂದು ಭಾರತೀಯ ಸಂವಿಧಾನದ ಪ್ರಸ್ತಾವನೆಯಲ್ಲಿ ಘೋಷಿಸಲಾಗಿದೆ. ಇವುಗಳನ್ನು ಮೂಲಭೂತ ಹಕ್ಕುಗಳು ಹಾಗೂ ರಾಷ್ಟ್ರೀಯ ಧೋರಣೆಯ ನಿರ್ದೇಶಕ ತತ್ವಗಳಾಗಿಯೂ ಸಂವಿಧಾನದಲ್ಲಿ ಒಳಪಡಿಸಲಾಗಿದೆ. ಇದರೊಂದಿಗೆ ದೇಶ ಹಾಗೂ ಸಮಾಜಕ್ಕಾಗಿ ಪೌರರು ನಿರ್ವಹಿಸಬೇಕಾದ ಮೂಲಭೂತ ಕರ್ತವ್ಯಗಳನ್ನೂ ಸಂವಿಧಾನದಲ್ಲಿ ಪ್ರತಿಪಾದಿಸಲಾಗಿದೆ. ಭಾರತದ ಸಂವಿಧಾನದಲ್ಲಿ ಪ್ರತಿಪಾದಿಸಿರುವ ಹಕ್ಕುಗಳು, ನಿರ್ದೇಶಕ ತತ್ವಗಳು ಹಾಗೂ ಕರ್ತವ್ಯಗಳನ್ನು ಈ ಪಾಠದಲ್ಲಿ ಚರ್ಚಿಸಲಿದ್ದೇವೆ.

## ಹಕ್ಕುಗಳು (Rights)

ಹಕ್ಕುಗಳ ಪ್ರಾಮುಖ್ಯತೆಯ ಕುರಿತಾದ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ ನಂತರ ವಿದ್ಯಾರ್ಥಿಗಳು ಅಧ್ಯಾಪಕಿಯಲ್ಲಿ ಮಾತನಾಡುವುದನ್ನು ಗಮನಿಸಿರಿ.
ಸಂಭಾಷಣೆಯಲ್ಲಿ ಪ್ರತಿಪಾದಿಸಿದ ಹಕ್ಕುಗಳು ಯಾವುವು?

- 
- 

ಇವುಗಳಲ್ಲದೆ ಇತರ ಯಾವೆಲ್ಲ ಹಕ್ಕುಗಳನ್ನು ನೀವು ಬಯಸುತ್ತೀರಿ?

- 
- 




•*ಚಿತ್ರ 5.4*

ಮುಂದಿರಿಸಿದ ಹಕ್ಕುಗಳಲ್ಲಿ ಸಮಾಜವು ಸ್ವೀಕರಿಸಿದ ಹಾಗೂ ದೇಶವು ಕಾನೂನುಬದ್ಧವಾಗಿ ಅಂಗೀಕರಿಸಿ ಜಾರಿಗೊಳಿಸಿದವುಗಳನ್ನು ನಾವು ಹಕ್ಕುಗಳು ಎನ್ನುತ್ತೇವೆ. ವ್ಯಕ್ತಿಗಳಿಗೆ ಹಕ್ಕುಗಳಿವೆ ಎಂಬುದನ್ನು ಖಾತರಿಪಡಿಸಬೇಕಾದುದು ಪ್ರಜಾಪ್ರಭುತ್ವ ವ್ಯವಸ್ಥೆಯ ಜವಾಬ್ದಾರಿಯಾಗಿದೆ. ಸರಕಾರವು ಇವುಗಳನ್ನು ಕಾನೂನುಬದ್ಧವಾಗಿ ಜಾರಿಗೊಳಿಸುತ್ತದೆ. ಅದಕ್ಕಾಗಿ ಹೆಚ್ಚಿನ ಪ್ರಜಾಪ್ರಭುತ್ವ ದೇಶಗಳ ಸಂವಿಧಾನದಲ್ಲಿ ಒಂದು ತಖ್ತೆಯನ್ನು ಸೇರಿಸಲಾಗಿದೆ. ಈ ಹಕ್ಕುಗಳ ತಖ್ತೆಯು ವ್ಯಕ್ತಿಗಳ ಹಕ್ಕುಗಳ ಮೇಲೆ ಸರಕಾರದ ಹಸ್ತಕ್ಷೇಪವನ್ನು ಸ್ವಲ್ಪಮಟ್ಟಿಗೆ ಪರಿಮಿತಗೊಳಿಸಿದೆ. ಮಾತ್ರವಲ್ಲ ಹಕ್ಕುಗಳ ಉಲ್ಲಂಘನೆಯಾದಾಗ ಅದಕ್ಕಿರುವ ಪರಿಹಾರವನ್ನೂ ಖಾತರಿಪಡಿಸುತ್ತದೆ

### ಮಾನವ ಹಕ್ಕುಗಳು *(Human Rights)*

*ಮನುಷ್ಯರು ಎಂಬ ದೃಷ್ಟಿಯಲ್ಲಿ ಜಾತಿ, ಮತ, ವಂಶ, ಬಣ್ಣ, ದೇಶ, ಭಾಷೆ, ಲಿಂಗಪದವಿ ಮೊದಲಾದ ತಾರತಮ್ಯವಿಲ್ಲದೆ ಗೌರವ ಹಾಗೂ ಸಮಾನತೆಯನ್ನು ಹೊಂದಿರುವ ಜೀವನವನ್ನು ನಡೆಸಲು ಜಗತ್ತಿನಲ್ಲಿರುವ ಎಲ್ಲರಿಗೂ ಹಕ್ಕಿದೆ. ಈ ರೀತಿಯಲ್ಲಿ ಸಾರ್ವತ್ರಿಕವಾಗಿ ಮನುಷ್ಯನ ಸ್ವಾಭಿಮಾನವನ್ನು ಮತ್ತು ವ್ಯಕ್ತಿತ್ವವನ್ನು ರಕ್ಷಿಸುವ ಹಕ್ಕುಗಳನ್ನು ಮಾನವ ಹಕ್ಕುಗಳು ಎನ್ನುತ್ತಾರೆ.*

## ಮೂಲಭೂತ ಹಕ್ಕುಗಳು (Fundamental Rights)

ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳು ಎಂದು ಪರಿಗಣಿಸಲಾದ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪೌರರ ಗೌರವ, ಸ್ವಾತಂತ್ರ್ಯ ಹಾಗೂ ಜೀವನಕ್ಕೆ ಅನಿವಾರ್ಯವಾದ ಕೆಲವು ಮೂಲಭೂತ ಹಕ್ಕುಗಳು ಇವೆ. ರಾಷ್ಟ್ರಗಳು ಅಂಗೀಕರಿಸಿ ಸಂರಕ್ಷಿಸಿದ ಹಾಗೂ ಜಾರಿಗೊಳಿಸಿದ ಇಂತಹ ಹಕ್ಕುಗಳನ್ನು ಮೂಲಭೂತ ಹಕ್ಕುಗಳು ಎನ್ನುತ್ತಾರೆ. ಜಗತ್ತಿನ ವಿವಿಧ ದೇಶಗಳ ಸಂವಿಧಾನದಲ್ಲಿ ಆಯಾ ದೇಶಗಳ ಸನ್ನಿವೇಶಗಳಿಗನುಸಾರವಾಗಿ ಕೆಲವು ಪ್ರಮುಖ ಹಕ್ಕುಗಳನ್ನು ಮೂಲಭೂತ ಹಕ್ಕುಗಳಾಗಿ ಒಳಪಡಿಸಲಾಗಿದೆ. ಮಾನವ ಚರಿತ್ರೆಯ ಕೆಲವು ಪ್ರಮುಖ ಘಟನೆಗಳು ಮೂಲಭೂತ ಹಕ್ಕುಗಳು ಎಂಬ ಆಶಯಕ್ಕೆ ದಾರಿಮಾಡಿ ಕೊಟ್ಟಿತು. ಕೆಳಗೆ ನೀಡಿರುವ ಫ್ಲೋಚಾರ್ಟ್‌ನ್ನು ಗಮನಿಸಿರಿ.

**ಮೂಲಭೂತ ಹಕ್ಕುಗಳ ಮೈಲುಗಲ್ಲುಗಳು**

↓

**ಮ್ಯಾಗ್ನ ಕಾರ್ಟ**
**(Magna Carta–1215)**

ಪೌರರ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ಪರಾಮರ್ಶಿಸುವ ಜಗತ್ತಿನ ಮೊತ್ತಮೊದಲ ಅಧಿಕೃತ ದಾಖಲೆ.

↓

### ಮ್ಯಾಗ್ನ ಕಾರ್ಟ *(Magna Carta)*

*ಬ್ರಿಟನ್‌ನಲ್ಲಿ ಹಕ್ಕುಗಳಿಗೆ ಸಂಬಂಧಿಸಿ ರೂಪುಗೊಂಡ ಆರಂಭಕಾಲದ ದಾಖಲೆಯು ಮ್ಯಾಗ್ನ ಕಾರ್ಟವಾಗಿದೆ. ಮಹಾಸನ್ನದು ಎಂಬುದು ಇದರ ಅರ್ಥವಾಗಿದೆ. ಇದು ರಾಜ ಹಾಗೂ ರಾಜನ ಆಡಳಿತ ಕೂಟವು ಕಾನೂನಿಗೆ ಅತೀತರಲ್ಲ ಎಂದು ಘೋಷಿಸುವ ಒಂದು ಅಧಿಕೃತ ದಾಖಲೆಯಾಗಿದೆ. 1215ರಲ್ಲಿ ಇಂಗ್ಲೆಂಡಿನ ಆಡಳಿತಾಧಿಕಾರಿಯಾಗಿದ್ದ ಜಾನ್ ರಾಜನು ಜನರ ನಿರ್ಬಂಧಕ್ಕೆ ಮಣಿದು ಈ ದಾಖಲೆಗೆ ಸಹಿ ಹಾಕಬೇಕಾಯಿತು. ಅನಂತರ ಇದು ಬ್ರಿಟಿಷ್ ಪಾರ್ಲಿಮೆಂಟಿನ ಅಧಿಕಾರಗಳು ಹಾಗೂ ಕಾನೂನುಗಳಿಗೆ ಅಡಿಪಾಯವಾಯಿತು. ಇಂಗ್ಲೆಂಡಿನ ಪಿಟಿಷನ್ ಆಫ್ ರೈಟ್ಸ್, ಬಿಲ್ ಆಫ್ ರೈಟ್ಸ್ ಎಂಬೀ ಹಕ್ಕುಗಳ ದಾಖಲೆಗಳು ಮ್ಯಾಗ್ನ ಕಾರ್ಟದ ಪ್ರಭಾವದಿಂದ ರೂಪುಗೊಂಡವುಗಳಾಗಿವೆ.*

## ಅಮೇರಿಕಾದ ಹಕ್ಕುಗಳ ಮಸೂದೆ *(United States Bill of Rights)*

*ಅಮೇರಿಕಾದ ಸಂವಿಧಾನದಲ್ಲಿ ಒಳಗೊಂಡ ಹಕ್ಕುಗಳ ಮಸೂದೆಯಲ್ಲಿ (Bill of Rights) ಹಕ್ಕುಗಳ ಕುರಿತು ಪ್ರತಿಪಾದಿಸಲಾಗಿದೆ. ಧಾರ್ಮಿಕ ನಂಬಿಕೆಯ ಹಕ್ಕು, ವಾಕ್ ಸ್ವಾತಂತ್ರ್ಯದ ಹಕ್ಕು, ಪತ್ರಿಕಾ ಹಕ್ಕು, ಶಾಂತಿಯುತವಾಗಿ ಸಭೆ ಸೇರುವ ಹಕ್ಕು, ಜೀವ ಹಾಗೂ ಸೊತ್ತಿನ ರಕ್ಷಣೆಗಾಗಿರುವ ಹಕ್ಕು ಮೊದಲಾದ ಹಕ್ಕುಗಳನ್ನು ಅಮೇರಿಕಾದ ಸಂವಿಧಾನವು ಪೌರರಿಗೆ ಖಾತರಿಪಡಿಸುತ್ತದೆ.*

## ಫ್ರಾನ್ಸಿನ ಮಾನವ ಹಕ್ಕುಗಳ ಘೋಷಣೆ *(The Declaration of the Rights of Man and of the Citizen)*

*1789 ರಲ್ಲಿ ಫ್ರಾನ್ಸಿನ ರಾಷ್ಟ್ರೀಯ ಅಸೆಂಬ್ಲಿಯು ಘೋಷಿಸಿದ ಹಕ್ಕುಗಳ ದಾಖಲೆಯೇ ಫ್ರಾನ್ಸಿನ ಹಕ್ಕುಗಳ ಘೋಷಣೆಯಾಗಿದೆ. ಎಲ್ಲ ಪೌರರಿಗೂ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾದ ಹಕ್ಕುಗಳು ಇವೆ ಎಂದು ಈ ದಾಖಲೆಯು ಘೋಷಿಸುತ್ತದೆ. ಪೌರರು ಜನ್ಮತ: ಸ್ವತಂತ್ರರು ಹಾಗೂ ಹಕ್ಕುಗಳಲ್ಲಿ ಸಮಾನತೆ ಉಳ್ಳವರು ಆಗಿದ್ದಾರೆ, ಸಾಮಾಜಿಕ ವ್ಯತ್ಯಾಸಗಳನ್ನು ಸಾರ್ವತ್ರಿಕ ಒಳಿತಿನ ಆಧಾರದಲ್ಲಿ ಮಾತ್ರವೇ ಸ್ಥಾಪಿಸಬಹುದೆಂದು ಈ ಘೋಷಣೆಯು ಹೇಳುತ್ತದೆ.*

**ಅಮೇರಿಕಾದ ಹಕ್ಕುಗಳ ಮಸೂದೆ**
**(United States Bill of Rights – 1789)**

ಜಗತ್ತಿನ ಮೊತ್ತಮೊದಲ ಲಿಖಿತ ಸಂವಿಧಾನದಲ್ಲಿ ಪರಾಮರ್ಶಿಸುವ ಹಕ್ಕುಗಳ ದಾಖಲೆ.

↓

**ಫ್ರಾನ್ಸಿನ ಕ್ರಾಂತಿಯ ನಂತರ ಉಂಟಾದ ಮಾನವ ಹಕ್ಕುಗಳ ಘೋಷಣೆ**
**(Declaration of the Rights of Man and of the Citizen – 1789)**

ಜಾಗತಿಕವಾಗಿ ದೇಶಗಳ ಮೇಲೆ ಪ್ರಭಾವ ಬೀರಿದ ಮಾನವ ಹಕ್ಕುಗಳನ್ನು ನಿರ್ವಚಿಸುವ ಹಕ್ಕುಗಳ ದಾಖಲೆ

↓

**ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ**
**(Universal Declaration of Human Rights–1948)**

ಎಲ್ಲ ಸದಸ್ಯ ದೇಶಗಳಲ್ಲಿಯೂ ಜಾರಿಗೊಳಿಸುವುದಕ್ಕಾಗಿ ವಿಶ್ವಸಂಸ್ಥೆಯು ಹೊರಡಿಸಿದ ಹಕ್ಕುಗಳ ದಾಖಲೆ.

ಮೇಲೆ ನೀಡಿರುವ ಹಕ್ಕುಗಳ ದಾಖಲೆಗಳು ಮೂಲಭೂತ ಹಕ್ಕುಗಳು ಎಂಬ ಆಶಯವನ್ನು ರೂಪಿಸುವಲ್ಲಿ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿವೆ. ಹಲವು ಪ್ರಜಾಪ್ರಭುತ್ವ ದೇಶಗಳ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ಒಳಪಡಿಸುವಲ್ಲಿ ಇವುಗಳು ಪ್ರಭಾವವನ್ನು ಬೀರಿವೆ. ನಮ್ಮ ಸಂವಿಧಾನದಲ್ಲಿಯೂ ಕೆಲವು ಹಕ್ಕುಗಳನ್ನು ಮೂಲಭೂತ ಹಕ್ಕುಗಳಾಗಿ ಒಳಪಡಿಸಲಾಗಿದೆ.

## ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳು




*ಚಿತ್ರ 5.5*

ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ಒಳಪಡಿಸುವಂತೆ ಸಂವಿಧಾನ ರಚನಾಕಾರರ ಮೇಲೆ ಅನೇಕ ಅಂಶಗಳು ಪ್ರಭಾವ ಬೀರಿದವು. ಬ್ರಿಟಿಷರ ಆಡಳಿತ ಕಾಲದಲ್ಲಿ ಭಾರತದ ಜನತೆಯು ಅನುಭವಿಸಿದ್ದ ಹಕ್ಕುಗಳ ನಿರಾಕರಣೆಯು ಅದರಲ್ಲಿ ಪ್ರಧಾನವಾದದ್ದಾಗಿದೆ. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಮುಂದೊಡ್ಡಿದ ಮೌಲ್ಯಗಳು, ಭಾರತದ ನವೋತ್ಥಾನ ಚಳುವಳಿಯ ಆಶಯಗಳು ಎಂಬಿವು ಸಂವಿಧಾನದ ಮೂಲಭೂತ ಹಕ್ಕುಗಳ ಮೇಲೆ ಪ್ರಭಾವ ಬೀರಿದ ಇತರ ಅಂಶಗಳಾಗಿವೆ. ಇತರ ದೇಶಗಳ ಸಂವಿಧಾನದಲ್ಲಿ ಪರಾಮರ್ಶಿಸಿರುವ ಹಕ್ಕುಗಳು ಮತ್ತು ಮೂಲಭೂತ ಹಕ್ಕುಗಳ ಮಾರ್ಗರೇಖೆಗಳಾದ ಹಕ್ಕುಗಳ ದಾಖಲೆಗಳು ನಮ್ಮ ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳ ಮೇಲೆ ಪ್ರಭಾವ ಬೀರಿವೆ.

### ಸಂವಿಧಾನ ದಿನ

*ಭಾರತದಲ್ಲಿ ನವೆಂಬರ್ 26 ನ್ನು ಸಂವಿಧಾನ ದಿನವಾಗಿ ಆಚರಿಸಲಾಗುತ್ತದೆ. ಸಂವಿಧಾನ ರಚನಾ ಸಭೆಯು 1949 ನವೆಂಬರ್ 26 ರಂದು ಭಾರತದ ಸಂವಿಧಾನವನ್ನು ಅಂಗೀಕರಿಸಿದ ಸವಿನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ.*

ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ಒಳಪಡಿಸಲು ಪ್ರಭಾವ ಬೀರಿದ ಅಂಶಗಳು ಯಾವುವು? ಪಟ್ಟಿಯನ್ನು ಪೂರ್ತಿಗೊಳಿಸಿರಿ.

- ವಸಾಹತುಶಾಹಿಗಳ ಆಡಳಿತ ಕಾಲದಲ್ಲಿ ಅನುಭವಿಸಿದ ಹಕ್ಕುಗಳ ನಿರಾಕರಣೆಗಳು
- ಜಾಗತಿಕ ಸನ್ನಿವೇಶಗಳು
- 

ಭಾರತೀಯ ಸಂವಿಧಾನದ ಮೂರನೇ ಭಾಗದಲ್ಲಿ (Part III) ಮೂಲಭೂತ ಹಕ್ಕುಗಳನ್ನು ಒಳಪಡಿಸಲಾಗಿದೆ. ಸಾಮಾನ್ಯವಾಗಿ ಕಾನೂನುಬದ್ಧವಾದ ಹಕ್ಕುಗಳನ್ನು ಸಂರಕ್ಷಿಸುವುದು ಹಾಗೂ ಜಾರಿಗೊಳಿಸುವುದು ಸಾಮಾನ್ಯ ನಿಯಮಗಳಾಗಿವೆ. ಆದರೆ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವುದು ಹಾಗೂ ಖಾತರಿಪಡಿಸುವುದು ಸಂವಿಧಾನವಾಗಿದೆ. ಸಂವಿಧಾನವು ಖಾತರಿಪಡಿಸುವ ಮೂಲಭೂತ ಹಕ್ಕುಗಳು ಯಾವುವು ಎಂಬುದನ್ನು ಪರಿಶೀಲಿಸುವ.


Part III
Fundamental Rights
General

Definition. 12. In this Part, unless the context otherwise requires, "the State" includes the Government and Parliament of India and the Government and the Legislature of each of the States and all local or other authorities within the territory of India or under the control of the Government of India.

Laws inconsistent with or in derogation of the fundamental rights. 13. (1) All laws in force in the territory of India immediately before the commencement of this Constitution, in so far as they are inconsistent with the provisions of this Part, shall, to the extent of such inconsistency be void.

(2) The State shall not make any law which takes away or abridges the rights conferred by this Part and any law made in contravention of this clause, shall, to the extent of the contravention, be void.

(3) In this article, unless the context otherwise requires,—

(a) "law" includes any Ordinance, order, bye-law, rule, regulation, notification, custom or usage having in the territory of India the force of law;

(b) "laws in force" includes laws passed or made by a Legislature or other competent authority in the territory of India before the commencement of this Constitution and not previously repealed, notwithstanding that any such law or any part thereof may not be then in operation either at all or in particular areas.

6

• *ಚಿತ್ರ 5.6 ಸಂವಿಧಾನದ ಭಾಗ* III - *ಹಸ್ತಪ್ರತಿ*

## ಸಮಾನತೆಯ ಹಕ್ಕು (Right to Equality)

ಸಮಾನತೆಯ ಹಕ್ಕು ಎಂದರೆ ನಮ್ಮ ದೇಶದಲ್ಲಿ ಎಲ್ಲರೂ ಕಾನೂನಿನ ಮುಂದೆ ಸಮಾನರು ಹಾಗೂ ಕಾನೂನಿನ ಸಮಾನವಾದ ರಕ್ಷಣೆ ಖಾತರಿಪಡಿಸುವ ಹಕ್ಕಾಗಿದೆ. ಈ ಹಕ್ಕಿನ ಪ್ರಕಾರ ಜಾತಿ, ಮತ, ವರ್ಗ, ಲಿಂಗ, ಜನನ ಸ್ಥಳ ಎಂಬುದರ ಆಧಾರದಲ್ಲಿ ಯಾವುದೇ ವಿಧದ ಭೇದಭಾವವನ್ನು ಮಾಡಲು ಸಾಧ್ಯವಿಲ್ಲ. ಇದರೊಂದಿಗೆ ಹೋಟೆಲುಗಳು, ಅಂಗಡಿಗಳು, ಬಾವಿಗಳು, ಜಲಾಶಯಗಳು, ಸಾರ್ವಜನಿಕ ಸ್ನಾನಘಟ್ಟಗಳು, ಸಾರ್ವಜನಿಕ ದಾರಿಗಳು ಎಂಬೆಡೆಗಳಲ್ಲಿ ಸಮಾನವಾದ ಪ್ರವೇಶವನ್ನು ಖಾತರಿಪಡಿಸುತ್ತದೆ. ಸಾರ್ವಜನಿಕ ಉದ್ಯೋಗಗಳಲ್ಲಿ ಅವಕಾಶದ ಸಮಾನತೆ, ಅಸ್ಪೃಶ್ಯತೆಯ ನಿಷೇಧ, ಅಧಿಕಾರನಾಮಗಳನ್ನು ಸೂಚಿಸುವ ನಾಮಗಳ ನಿರ್ಮೂಲನೆ ಮೊದಲಾದವುಗಳನ್ನು ಈ ಹಕ್ಕು ಖಾತರಿಪಡಿಸುತ್ತದೆ.

*ಭಾರತೀಯ ಸಂವಿಧಾನದಲ್ಲಿ ಹೇಳಿರುವ ಸಮಾನತೆ ಎಂಬ ಹಕ್ಕಿನ ಉಲ್ಲಂಘನೆಯು ನಿಮ್ಮ ಗಮನಕ್ಕೆ ಬಂದಿದೆಯೆ? ಅವು ಯಾವುವು ಎಂಬುದನ್ನು ದಾಖಲಿಸಿರಿ.*

- 
- 

## ಸ್ವಾತಂತ್ರ್ಯದ ಹಕ್ಕು (Right to Freedom)

ದೀರ್ಘಕಾಲ ವಿದೇಶಿ ಆಧಿಪತ್ಯದ ಅಧೀನದಲ್ಲಿ ಜೀವಿಸಬೇಕಾಗಿ ಬಂದ ಭಾರತೀಯರ ಅಭಿಲಾಷೆಯು ಸ್ವಾತಂತ್ರದ ಹಕ್ಕು ಎಂಬ ಮೂಲಭೂತ ಹಕ್ಕಿನಲ್ಲಿ ಪ್ರತಿಫಲಿಸುತ್ತದೆ. ಇದರಂತೆ ಸಂವಿಧಾನದ 19 ರಿಂದ 22ರ ವರೆಗಿನ ಪರಿಚ್ಛೇದಗಳು ಸ್ವಾತಂತ್ರ್ಯಕ್ಕಿರುವ ಹಕ್ಕುಗಳು ಮತ್ತು ಸಮಂಜಸವಾದ ನಿಯಂತ್ರಣಗಳನ್ನು ಸ್ಪಷ್ಟಪಡಿಸುತ್ತವೆ. ವಿಧಿ 19ರಲ್ಲಿ ಹೇಳಲಾದ ಸ್ವಾತಂತ್ರ್ಯಗಳನ್ನು ಕೆಳಗೆ ನೀಡಲಾಗಿದೆ.

| | |
|---|---|
| ವಾಕ್ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ | ಭಾರತದಲ್ಲಿ ಎಲ್ಲೆಡೆ ಸ್ವತಂತ್ರವಾಗಿ ಸಂಚರಿಸಲಿರುವ ಸ್ವಾತಂತ್ರ್ಯ |
| ಶಾಂತಿಯುತವಾಗಿ ಸಭೆ ಸೇರುವ ಸ್ವಾತಂತ್ರ್ಯ | ಭಾರತದಲ್ಲೆಡೆಯೂ ಸ್ಥಿರವಾಗಿ ವಾಸಿಸಲಿರುವ ಸ್ವಾತಂತ್ರ್ಯ |
| ಸಂಘ - ಸಂಸ್ಥೆಗಳನ್ನು ರೂಪಿಸುವ ಸ್ವಾತಂತ್ರ್ಯ | ಇಷ್ಟವಿರುವ ಉದ್ಯೋಗ, ವಾಣಿಜ್ಯ, ವ್ಯಾಪಾರಗಳನ್ನು ನಡೆಸಲಿರುವ ಸ್ವಾತಂತ್ರ್ಯ |


•ಚಿತ್ರ 5.7

ಇವುಗಳಲ್ಲದೆ ಶಿಕ್ಷಣಕ್ಕಿರುವ ಹಕ್ಕು, ಜೀವ ಹಾಗೂ ವ್ಯಕ್ತಿ ಸ್ವಾತಂತ್ರ್ಯಕ್ಕೆ ಇರುವ ಹಕ್ಕು ಮೊದಲಾದ ಹಕ್ಕುಗಳನ್ನು 20 ರಿಂದ 22 ರ ವರೆಗಿನ ವಿಧಿಗಳಲ್ಲಿ ಹೇಳಲಾಗಿದೆ. ದೇಶದ ಅಖಂಡತೆ, ಪರಮಾಧಿಕಾರ, ಸುರಕ್ಷೆ ಮೊದಲಾದ ಸಂದರ್ಭಗಳಲ್ಲಿ ಈ ಸ್ವಾತಂತ್ರ್ಯಗಳು ಸಮಂಜಸವಾದ ನಿಯಂತ್ರಣಗಳಿಗೆ ವಿಧೇಯವಾಗಿರುತ್ತವೆ.

*ಮೇಲೆ ನೀಡಿರುವ ಚಿತ್ರವು ಯಾವ ಹಕ್ಕನ್ನು ಸೂಚಿಸುತ್ತದೆ?*

## ಶೈಕ್ಷಣಿಕ ಹಕ್ಕು ಕಾಯ್ದೆ
**(Right to Education Act 2009)**

2002 ರಲ್ಲಿ ಸಂವಿಧಾನಕ್ಕೆ 86ನೇ ತಿದ್ದುಪಡಿಯನ್ನು ತರುವುದರ ಮೂಲಕ ವಿಧಿ 21ಎ ಪ್ರಕಾರ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಘೋಷಿಸಲಾಯಿತು. 2009ರಲ್ಲಿ ಶಿಕ್ಷಣ ಹಕ್ಕು ಕಾನೂನನ್ನು ಸಂಸತ್ತು ಅಂಗೀಕರಿಸಿತು. 2010 ಏಪ್ರಿಲ್‌ನಲ್ಲಿ ಈ ಕಾನೂನು ಜಾರಿಗೆ ಬಂತು. ಈ ಕಾನೂನಿನ ಪ್ರಕಾರ 6 ವರ್ಷದಿಂದ 14 ವರ್ಷದ ವರೆಗಿನ ಎಲ್ಲಾ ಮಕ್ಕಳಿಗೂ ಉಚಿತ, ಕಡ್ಡಾಯ ಹಾಗೂ ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸಲಾಯಿತು.




•ಚಿತ್ರ 5.8

*'ವೈಯಕ್ತಿಕ ಜೀವನದಲ್ಲಿ ಸಂವಿಧಾನವು ಖಾತರಿಪಡಿಸುವ ಸ್ವಾತಂತ್ರ್ಯಗಳು' ಎಂಬ ವಿಷಯದಲ್ಲಿ ಒಂದು ಪ್ಯಾನಲ್ ಚರ್ಚೆಯನ್ನು ಏರ್ಪಡಿಸಿರಿ.*

## ಶೋಷಣೆಯಿಂದ ರಕ್ಷಣೆ ಪಡೆಯಲಿರುವ ಹಕ್ಕು (Right Against Exploitation)

ನಮ್ಮ ದೇಶದಲ್ಲಿ ಹಲವು ವಿಭಾಗದ ಜನರನ್ನು ಮುಖ್ಯವಾಹಿನಿಯಿಂದ ದೂರವಿರಿಸುವ ಹಾಗೂ ಶೋಷಣೆಗೊಳಪಡಿಸುವಂತಹ ಸಾಮಾಜಿಕ ಸನ್ನಿವೇಶಗಳು ಅಸ್ತಿತ್ವದಲ್ಲಿದ್ದವು. ಶೋಷಣೆಗೆದುರಾದ ಹಕ್ಕಿನ ಮೂಲಕ ಭಾರತದ ಸಂವಿಧಾನವು ಗುಲಾಮಗಿರಿ, ಮಾನವ ಸಾಗಣೆ, ನಿರ್ಬಂಧಿತ ಕೆಲಸ, ಬಾಲಕಾರ್ಮಿಕತೆ ಮೊದಲಾದ ಶೋಷಣೆಗಳನ್ನು ನಿವಾರಣೆ ಮಾಡಿ ಸುರಕ್ಷಿತವಾದ ಜೀವನವನ್ನು ಖಚಿತಪಡಿಸುತ್ತದೆ. ಸಂವಿಧಾನದ 23ನೇ ವಿಧಿಯು ಎಲ್ಲ ವಿಧದ ಗುಲಾಮಗಿರಿ ಮತ್ತು ಮಾನವ ವ್ಯಾಪಾರವನ್ನು ನಿಷೇಧಿಸುವುದಲ್ಲದೆ ಅದನ್ನು ಅಪರಾಧವೆಂದು ಘೋಷಿಸುತ್ತದೆ. ವಿಧಿ 24ರ ಪ್ರಕಾರ 14 ವರ್ಷಕ್ಕಿಂತ ಕೆಳಗಿನ ಮಕ್ಕಳಿಂದ ಗಣಿಗಳಲ್ಲಿಯೋ ಕೈಗಾರಿಕೆಗಳಲ್ಲಿಯೋ ಸುರಕ್ಷಿತವಲ್ಲದ ಇತರ ಪ್ರದೇಶಗಳಲ್ಲಿಯೋ ಕೆಲಸ ಮಾಡಿಸುವುದನ್ನು ನಿಷೇಧಿಸುತ್ತದೆ.



•ಚಿತ್ರ 5.9

*ಚಿತ್ರದಲ್ಲಿ ನೀಡಿರುವುದು ಮಕ್ಕಳಿಗೆದುರಾದ ಶೋಷಣೆಗಳಲ್ಲಿ ಒಂದಾಗಿದೆ. ಇತರ ಯಾವೆಲ್ಲ ಶೋಷಣೆಗಳು ನಿಮ್ಮ ಗಮನಕ್ಕೆ ಬಂದಿವೆ? ದಾಖಲಿಸಿರಿ.*

- 
- 

## ಧಾರ್ಮಿಕ ಸ್ವಾತಂತ್ರ್ಯದ ಹಕ್ಕು
**(Right to Freedom of Religion)**

ಭಾರತದಲ್ಲಿ ಪ್ರತಿಯೊಬ್ಬರಿಗೂ ತಮಗಿಷ್ಟವಾದ ಮತದಲ್ಲಿ ವಿಶ್ವಾಸವಿರಿಸಲು, ಆಚರಿಸಲು ಹಾಗೂ ಪ್ರಚಾರ ಮಾಡಲು ಇರುವ ಸ್ವಾತಂತ್ರ್ಯವನ್ನು ಸಂವಿಧಾನವು ನೀಡಿದೆ. ಈ ಹಕ್ಕು ಅವರವರ ಮನ:ಸಾಕ್ಷಿಗೆ ಅನುಸಾರವಾಗಿ ಕಾರ್ಯನಿರ್ವಹಿಸಲಿರುವ ಸ್ವಾತಂತ್ರ್ಯವನ್ನು ಒಳಗೊಂಡಿದೆ. ಎಲ್ಲಾ ಧರ್ಮಗಳಿಗೂ ಸಮಾನವಾದ ಪರಿಗಣನೆ, ಸಮಾನವಾದ ರಕ್ಷಣೆ, ಧಾರ್ಮಿಕ ಸ್ವಾತಂತ್ರ್ಯಕ್ಕೆ ಇರುವ ಹಕ್ಕನ್ನು ಇದು ಖಾತರಿಪಡಿಸುತ್ತದೆ. ಆದರೆ ಮೇಲೆ ಹೇಳಿದ ಹಕ್ಕು ಸಾರ್ವಜನಿಕ ಸುವ್ಯವಸ್ಥೆ, ಆರೋಗ್ಯ, ಧಾರ್ಮಿಕತೆ ಎಂಬಿವುಗಳ ನಿಯಂತ್ರಣಕ್ಕೆ ವಿಧೇಯವಾಗಿರುತ್ತದೆ.

'ಧಾರ್ಮಿಕ ಸ್ವಾತಂತ್ರ್ಯವು ಭಾರತದ ಜಾತ್ಯತೀತತೆಯನ್ನು ಬಲಪಡಿಸುತ್ತದೆ' ಎಂಬ ವಿಷಯದಲ್ಲಿ ಚರ್ಚೆಯನ್ನು ಏರ್ಪಡಿಸಿ ಟಿಪ್ಪಣಿ ತಯಾರಿಸಿರಿ.



•ಚಿತ್ರ 5.10

## ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳು
**(Cultural and Educational Rights)**

ಭಾರತವು ವೈವಿಧ್ಯಗಳಿಂದ ಕೂಡಿದ ಒಂದು ದೇಶವಾಗಿದೆ. ತಮ್ಮದೇ ಆದ ಧರ್ಮ, ಭಾಷೆ ಹಾಗೂ ಸಂಸ್ಕೃತಿಯಿರುವ ಅಲ್ಪಸಂಖ್ಯಾತ ವಿಭಾಗಗಳು ಈ ವೈವಿಧ್ಯದ ವಿಶೇಷತೆಯಾಗಿವೆ. ಅಲ್ಪಸಂಖ್ಯಾತರೆಂದರೆ ದೇಶದ ಯಾವುದಾದರೂ ಒಂದು ಪ್ರತ್ಯೇಕ ಪ್ರದೇಶದಲ್ಲಿಯೋ ದೇಶದಲ್ಲೆಡೆಯೋ ಇತರ ವಿಭಾಗಗಳಿಗಿಂತ ಸಂಖ್ಯೆಯಲ್ಲಿ ಕಡಿಮೆಯಿರುವ ಅಥವಾ ಒಂದು ಸಾಮಾನ್ಯ ಭಾಷೆಯನ್ನೋ ಧರ್ಮವನ್ನೋ ಸಂಸ್ಕೃತಿಯನ್ನೋ ಅನುಸರಿಸುವ ಜನ ವಿಭಾಗವಾಗಿದೆ. ಅಲ್ಪಸಂಖ್ಯಾತರಿಗೆ ಅವರ ಸಂಸ್ಕೃತಿ, ಭಾಷೆ, ಲಿಪಿ ಇತ್ಯಾದಿಗಳನ್ನು ಸಂರಕ್ಷಿಸಲು ಹಾಗೂ ಅಭಿವೃದ್ಧಿ ಪಡಿಸಲಿರುವ ಮಾರ್ಗವೇ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳಾಗಿವೆ. ಹೀಗೆ ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಅಲ್ಪಸಂಖ್ಯಾತರಿಗೆ ಅವರದ್ದೇ ಆದ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ, ನಡೆಸುವುದಕ್ಕೆ ಹಕ್ಕಿದೆ. ಇದರ ಮೂಲಕ ಅವರಿಗೆ ತಮ್ಮ ಸಂಸ್ಕೃತಿಯನ್ನು ಸಂರಕ್ಷಿಸಲು ಹಾಗೂ ಬೆಳೆಸಲು ಸಾಧ್ಯವಾಗಬಹುದು.

ನಮ್ಮ ರಾಜ್ಯದಲ್ಲಿ ಯಾವೆಲ್ಲಾ ವಿಭಾಗದ ಅಲ್ಪಸಂಖ್ಯಾತರಿದ್ದಾರೆ? ಕಂಡುಹಿಡಿದು ಬರೆಯಿರಿ

- ಭಾಷಾ ಅಲ್ಪಸಂಖ್ಯಾತರು
- 
- 
- 

## ಸಂವಿಧಾನಾತ್ಮಕ ಪರಿಹಾರ ಪಡೆಯಲಿರುವ ಹಕ್ಕು
**(Right to Constitutional Remedies)**

ಸಂವಿಧಾನಾತ್ಮಕ ಪರಿಹಾರ ಪಡೆಯಲಿರುವ ಹಕ್ಕು ಎಂಬುದು ವ್ಯಕ್ತಿಯ ಸುರಕ್ಷೆ ಹಾಗೂ ಭದ್ರತೆಗೆ ನೀಡುವ ಅತಿ ಉತ್ತಮವಾದ ರಕ್ಷಣೆಯಲ್ಲೊಂದಾಗಿದೆ. ಮೇಲೆ ಹೇಳಿದ ಮೂಲಭೂತ ಹಕ್ಕುಗಳಲ್ಲಿ ಯಾವುದಾದರೂ ಉಲ್ಲಂಘಿಸಲ್ಪಟ್ಟರೆ ಅದನ್ನು ಪುನಃ ಪಡೆಯುವುದಕ್ಕೆ ವಿಧಿ 32 ಪ್ರಕಾರ ಸರ್ವೋಚ್ಚ ನ್ಯಾಯಾಲಯವನ್ನೂ ವಿಧಿ 226ರ ಪ್ರಕಾರ ಉಚ್ಚ ನ್ಯಾಯಾಲಯವನ್ನೂ ಸಮೀಪಿಸಬಹುದು. ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ರಿಟ್ಟುಗಳ ಮೂಲಕ ಮೂಲಭೂತ ಹಕ್ಕುಗಳನ್ನು ಪುನಃ ಸ್ಥಾಪಿಸುತ್ತವೆ. ರಿಟ್ಟುಗಳು ಎಂದರೆ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವುದಕ್ಕಾಗಿ ಸರ್ವೋಚ್ಚ ನ್ಯಾಯಾಲಯವೋ ಉಚ್ಚ ನ್ಯಾಯಾಲಯವೋ ಹೊರಡಿಸುವ ಆಜ್ಞೆಗಳು ಹಾಗೂ ನಿರ್ದೇಶಗಳಾಗಿವೆ. ನಮ್ಮ ಸಂವಿಧಾನದ ಹೃದಯ ಹಾಗೂ ಆತ್ಮ ಈ ಹಕ್ಕುಗಳಾಗಿವೆ ಎಂದು ಡಾ. ಬಿ. ಆರ್. ಅಂಬೇಡ್ಕರ್ ರವರು ಬಣ್ಣಿಸಿದ್ದಾರೆ.

*ಸಂವಿಧಾನಾತ್ಮಕ ಪರಿಹಾರ ಪಡೆಯಲಿರುವ ಹಕ್ಕನ್ನು ಮೂಲಭೂತ ಹಕ್ಕುಗಳಲ್ಲಿ ಅತ್ಯಂತ ಪ್ರಮುಖವಾದುದೆಂದು ಹೇಳಲು ಕಾರಣವೇನು?*

- 
- 



ಚಿತ್ರ 5.11

**ಮೂಲಭೂತ ಹಕ್ಕುಗಳು (Fundamental Rights)**

- ಸಮಾನತೆಯ ಹಕ್ಕು (ವಿಧಿ 14ರಿಂದ 18ರವರೆಗೆ)
- ಸ್ವಾತಂತ್ರ್ಯದ ಹಕ್ಕು (ವಿಧಿ 19 ರಿಂದ 22 ರವರೆಗೆ)
- ಶೋಷಣೆಯಿಂದ ರಕ್ಷಣೆ ಪಡೆಯಲಿರುವ ಹಕ್ಕು (ವಿಧಿ 23 24)
- ಧಾರ್ಮಿಕ ಸ್ವಾತಂತ್ರ್ಯದ ಹಕ್ಕು (ವಿಧಿ 25 ರಿಂದ 28 ರ ವರೆಗೆ)
- ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕು (ವಿಧಿ 29 ರಿಂದ 30 ರವರೆಗೆ)
- ಸಂವಿಧಾನಾತ್ಮಕ ಪರಿಹಾರ ಪಡೆಯುವ ಹಕ್ಕು (ವಿಧಿ 32)

## ವಿವಿಧ ರೀತಿಯ ರಿಟ್ಟುಗಳು

***ಹೇಬಿಯಸ್ ಕಾರ್ಪಸ್ (Habeas Corpus)*** *: ಅನ್ಯಾಯವಾಗಿ ಬಂಧನದಲ್ಲಿರಿಸಿದ ಓರ್ವ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ನ್ಯಾಯಾಲಯವು ಹೊರಡಿಸುವ ಆಜ್ಞೆ.*

***ಮ್ಯಾನ್‌ಡಮಸ್ (Mandamus)*** *: ಒಬ್ಬ ಉದ್ಯೋಗಿಯು ತನ್ನ ಕಾನೂನು ಬದ್ಧವಾದ ಕರ್ತವ್ಯವನ್ನು ನೆರವೇರಿಸದಿರುವುದರಿಂದಾಗಿ ಮತ್ತೊಬ್ಬ ವ್ಯಕ್ತಿಯ ಹಕ್ಕುಗಳು ಉಲ್ಲಂಘಿಸಲ್ಪಟ್ಟಿವೆ ಎಂದು ನ್ಯಾಯಾಲಯವು ಕಂಡುಕೊಂಡಾಗ ಹೊರಡಿಸುವ ಆಜ್ಞೆ.*

***ಪ್ರೊಹಿಬಿಷನ್ (Prohibition)*** *: ತಮ್ಮ ಅಧಿಕಾರ ವ್ಯಾಪ್ತಿಗೆ ಬರದ ಒಂದು ಪ್ರಕರಣದ ಬಗ್ಗೆ ಕೆಳಗಿನ ನ್ಯಾಯಾಲಯವು ಪರಿಗಣಿಸುವುದನ್ನು ನಿಷೇಧಿಸಿ ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಛ ನ್ಯಾಯಾಲಯವು ಹೊರಡಿಸುವ ಆಜ್ಞೆ.*

***ಕ್ವೋವಾರಂಟೋ (Quo Warranto)*** *: ಓರ್ವ ಅಧಿಕಾರಿಯು ತನಗೆ ಅರ್ಹತೆ ಇಲ್ಲದ ಸ್ಥಾನ ಹೊಂದುವುದನ್ನು ತಡೆಯುವುದಕ್ಕಾಗಿ ನ್ಯಾಯಾಲಯವು ಹೊರಡಿಸುವ ಆಜ್ಞೆ.*

***ಸರ್‌ಶ್ಯೊರಾರಿ (Certiorari)*** *: ಕೆಳ ನ್ಯಾಯಾಲಯದಲ್ಲಿ ಪರಿಗಣನೆಯಲ್ಲಿರುವ ಒಂದು ಪ್ರಕರಣವನ್ನು ಮೇಲಿನ ನ್ಯಾಯಾಲಯಕ್ಕೆ ವರ್ಗಾಯಿಸಲು ಹೊರಡಿಸುವ ಆಜ್ಞೆ.*

'ಮಾನವನು ಘನತೆಯಿಂದ ಜೀವಿಸುವಲ್ಲಿ ಮೂಲಭೂತ ಹಕ್ಕುಗಳ ಪಾತ್ರ' ಎಂಬ ವಿಷಯದಲ್ಲಿ ಚರ್ಚೆಯೊಂದನ್ನು ಏರ್ಪಡಿಸಿ, ವರದಿಯನ್ನು ತಯಾರಿಸಿರಿ.

## ರಾಜ್ಯನೀತಿಯ ನಿರ್ದೇಶಕ ತತ್ವಗಳು
**(Directive Principles of State Policy)**




● *ಚಿತ್ರ 5.12*
*ಸಂವಿಧಾನದ ಭಾಗ IV - ಹಸ್ತಪ್ರತಿ*

ಹಕ್ಕುಗಳು ಹಾಗೂ ಸ್ವಾತಂತ್ರ್ಯಗಳೊಂದಿಗೆ ಸಾಮಾಜಿಕ - ಆರ್ಥಿಕ ನೀತಿಗೂ ಸಮಾನವಾದ ಪ್ರಾಮುಖ್ಯವಿದೆ. ಇವುಗಳನ್ನು ಸಾಧಿಸುವುದಕ್ಕಿರುವ ಆಶಯಗಳನ್ನು ರಾಜ್ಯನೀತಿಯ ನಿರ್ದೇಶಕ ತತ್ವಗಳಲ್ಲಿ ಒಳಪಡಿಸಲಾಗಿದೆ. ಎಲ್ಲಾ ವಿಭಾಗದ ಜನರ ಕ್ಷೇಮ ಮತ್ತು ಪ್ರಗತಿಯನ್ನು ಖಾತರಿಪಡಿಸಿಕೊಂಡು ಕ್ಷೇಮ ರಾಷ್ಟ್ರವನ್ನು ಸ್ಥಾಪಿಸುವುದು ಇದರ ಉದ್ದೇಶವಾಗಿದೆ. ಮೂಲಭೂತ ಹಕ್ಕುಗಳಂತೆ ಇವುಗಳನ್ನು ನ್ಯಾಯಾಲಯದ ಬೆಂಬಲದೊಂದಿಗೆ ಜಾರಿಗೊಳಿಸಲು ಸಾಧ್ಯವಿಲ್ಲ. ಆದರೆ ಸರಕಾರಗಳು ತಮ್ಮ ಧೋರಣೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವಾಗ ಈ ನಿರ್ದೇಶಕ ತತ್ವಗಳಿಗೆ ಸಾಕಷ್ಟು ಪರಿಗಣನೆಯನ್ನು ನೀಡಬೇಕು. ಸಂವಿಧಾನದ ಭಾಗ IVರಲ್ಲಿ ವಿಧಿ 36 ರಿಂದ 51 ರವರೆಗೆ ನಿರ್ದೇಶಕತತ್ವಗಳು ಒಳಗೊಂಡಿವೆ. ಇವು ಆಡಳಿತ ನಿರ್ವಹಣೆ ಮತ್ತು ಕಾನೂನು ನಿರ್ಮಾಣದ ಸಂದರ್ಭದಲ್ಲಿ ಸರಕಾರಗಳು ಪಾಲಿಸಬೇಕಾದ ನಿರ್ದೇಶಗಳಾಗಿವೆ. ದೇಶದ ಆರ್ಥಿಕ -ಸಾಮಾಜಿಕ- ಶೈಕ್ಷಣಿಕ -ಅಂತಾರಾಷ್ಟ್ರೀಯ ವಿಷಯಗಳನ್ನೆಲ್ಲ ಸ್ಪರ್ಶಿಸುವ

ವಿಪುಲವಾದ ಆಶಯಗಳನ್ನು ನಿರ್ದೇಶಕ ತತ್ವಗಳು ಹೊಂದಿವೆ. ರಾಜ್ಯನೀತಿಯ ನಿರ್ದೇಶಕ ತತ್ವಗಳನ್ನು ಉದಾರ ಆಶಯಗಳು, ಸಮಾಜವಾದಿ ಆಶಯಗಳು, ಗಾಂಧಿಯನ್ ಆಶಯಗಳು ಎಂದು ಮೂರಾಗಿ ವರ್ಗೀಕರಿಸಬಹುದು.

**ಉದಾರ ಆಶಯಗಳು**

- ಅಂತಾರಾಷ್ಟ್ರೀಯ ಶಾಂತಿ ಹಾಗೂ ಸುರಕ್ಷೆಯನ್ನು ಅಭಿವೃದ್ಧಿಪಡಿಸುವುದು
- ಪೌರರಿಗೆ ಏಕರೂಪದ ನಾಗರಿಕ ನಿಯಮ ಸಂಹಿತೆ
- ಸಮಾನ ನ್ಯಾಯ, ಉಚಿತ ಕಾನೂನು ಸಹಾಯ
- ಆರು ವರ್ಷಕ್ಕಿಂತ ಕೆಳಗಿನ ಪ್ರಾಯದ ಮಕ್ಕಳಿಗೆ ಆರೈಕೆ ಮತ್ತು ಶಿಕ್ಷಣಕ್ಕಿರುವ ವ್ಯವಸ್ಥೆ ಮಾಡುವುದು.
- ಪರಿಸರ, ಜಾನುವಾರು, ವನ್ಯಜೀವಿ ಸಂರಕ್ಷಣೆ
- 

**ಸಮಾಜವಾದಿ ಆಶಯಗಳು**

- ಕಾರ್ಮಿಕರಿಗೆ ಜೀವಿಸಲು ಅಗತ್ಯವಾದ ವೇತನ
- ಸ್ತ್ರೀ ಮತ್ತು ಪುರುಷನಿಗೆ ಸಮಾನ ಕೆಲಸಕ್ಕೆ ಸಮಾನ ವೇತನ
- ಕೈಗಾರಿಕೆಗಳ ನಿರ್ವಹಣೆಯಲ್ಲಿ ಕೆಲಸಗಾರರ ಪಾಲ್ಗೊಳ್ಳುವಿಕೆ
- ಕೆಲಸ ಮಾಡಲಿರುವ ಹಕ್ಕು
- ನ್ಯಾಯಯುತ ಮತ್ತು ಮಾನವೀಯತೆಯಿಂದ ಕೂಡಿದ ಉದ್ಯೋಗ ಸನ್ನಿವೇಶಗಳು ಹಾಗೂ ಹೆರಿಗೆ ಅನುಕೂಲತೆಗಳನ್ನು ಖಾತರಿಪಡಿಸುವುದು.

**ಗಾಂಧಿಯನ್ ಆಶಯಗಳು**

- ಗ್ರಾಮ ಪಂಚಾಯತುಗಳನ್ನು ಸಂಘಟಿಸುವುದು
- ಗುಡಿ ಕೈಗಾರಿಕೆಗಳನ್ನು ಬೆಳೆಸುವುದು
- ಕೃಷಿ ಹಾಗು ಪಶುಸಂಗೋಪನೆ
- ಮಾದಕ ಪಾನೀಯಗಳು ಹಾಗೂ ಆರೋಗ್ಯಕ್ಕೆ ಹಾನಿಕಾರಕವಾದ ಔಷಧಿಗಳ ಉಪಯೋಗವನ್ನು ನಿಷೇಧಿಸುವುದು
- ಪರಿಶಿಷ್ಟ ಜಾತಿ - ಪರಿಶಿಷ್ಟ ವರ್ಗ ವಿಭಾಗಗಳ ಹಾಗೂ ಇತರ ದುರ್ಬಲ ವಿಭಾಗದವರ ಏಳಿಗೆ.

*ರಾಜ್ಯನೀತಿಯ ನಿರ್ದೇಶಕ ತತ್ವಗಳು ಸಾಮಾಜಿಕ ಜೀವನದ ಯಾವೆಲ್ಲ ಹಂತಗಳನ್ನು ಸ್ಪರ್ಶಿಸುತ್ತವೆ. - ಪಟ್ಟಿ ತಯಾರಿಸಿರಿ.*

- *ಸಾಮಾಜಿಕ- ಆರ್ಥಿಕ ನ್ಯಾಯ*
- *ಜನರ ಕ್ಷೇಮ*
- 
- 

## ಮೂಲಭೂತ ಹಕ್ಕುಗಳು ಹಾಗೂ ನಿರ್ದೇಶಕ ತತ್ವಗಳು: ವ್ಯತ್ಯಾಸಗಳು

ಭಾರತದ ಸಂವಿಧಾನದಲ್ಲಿ ಹೇಳಿರುವ ಮೂಲಭೂತ ಹಕ್ಕುಗಳು ಹಾಗೂ ರಾಜ್ಯನೀತಿಯ ನಿರ್ದೇಶಕ ತತ್ವಗಳು ಪರಸ್ಪರ ಪೂರಕವಾದವುಗಳಾಗಿವೆ. ಮೂಲಭೂತ ಹಕ್ಕುಗಳು ಸರಕಾರದ ಅಧಿಕಾರಗಳಿಗೆ ಮೇರೆಯನ್ನು ನಿರ್ಣಯಿಸುವಾಗ ನಿರ್ದೇಶಕ ತತ್ವಗಳು ಕೆಲವು ಕಾರ್ಯಗಳನ್ನು ಮಾಡಲು ಸರಕಾರವನ್ನು ಪ್ರೇರೇಪಿಸುತ್ತವೆ. ಮೂಲಭೂತ ಹಕ್ಕುಗಳು ಪ್ರಮುಖವಾಗಿ ವ್ಯಕ್ತಿಗಳ ಹಕ್ಕುಗಳನ್ನು ಸಂರಕ್ಷಿಸುತ್ತವೆ. ಅಂದರೆ

## *ನಿರ್ದೇಶಕ ತತ್ವಗಳು - ಅನುಷ್ಠಾನದಲ್ಲಿ*

*ಸಾಮಾಜಿಕ ಆರ್ಥಿಕ ನ್ಯಾಯವನ್ನು ಉದ್ದೇಶವಾಗಿಟ್ಟುಕೊಂಡು ಕೆಲವು ನಿರ್ದೇಶಗಳನ್ನು ರಾಜ್ಯನೀತಿಯ ನಿರ್ದೇಶಕ ತತ್ವಗಳಾಗಿ ಸಂವಿಧಾನದಲ್ಲಿ ಸೇರಿಸಲಾಗಿದೆ. ಕಾಲಾನುಕಾಲಗಳಲ್ಲಿ ಅವಶ್ಯಕತೆಗೆ ಅನುಸಾರವಾಗಿ ಈ ನಿರ್ದೇಶಗಳಲ್ಲಿ ಹಲವನ್ನು ಕಾನೂನು ನಿರ್ಮಾಣದ ಮೂಲಕ ಜಾರಿಗೊಳಿಸುವುದಿದೆ. ಗ್ರಾಮ ಪಂಚಾಯತುಗಳನ್ನು ರೂಪಿಸುವುದು ಎಂಬ ಗಾಂಧಿಯನ್ ಆಶಯವು 1993ರ ಪಂಚಾಯತ್ ರಾಜ್ - ನಗರಪಾಲಿಕೆ ನಿಯಮಗಳ ಮೂಲಕ ಕಾರ್ಯಗತಗೊಳಿಸಲಾಯಿತು. 2009ರ ಶಿಕ್ಷಣ ಹಕ್ಕು ನಿಯಮದ ಮೂಲಕ ಉದಾರ ಆಶಯವಾದ ಉಚಿತ ಶಿಕ್ಷಣ ಎಂಬುದನ್ನು ಕಾನೂನಿನ ಮೂಲಕ ಕಾರ್ಯಗತಗೊಳಿಸಲಾಯಿತು. 1986ರ ಪರಿಸರ ಸಂರಕ್ಷಣೆ ಕಾನೂನು ಕೂಡ ಉದಾರ ಆಶಯದ ಪರಿಣಾಮವಾಗಿದೆ. 1976ರ ಸಮಾನ ವೇತನ ಕಾನೂನು ಕೂಡಾ ಸಮಾಜವಾದಿ ಆಶಯವಾದ ಸ್ತ್ರೀ ಹಾಗೂ ಪುರುಷರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ತತ್ವವನ್ನು ಅನುಷ್ಠಾನ ಮಾಡುವುದಕ್ಕಾಗಿ ಕಾರ್ಯಗತಗೊಳಿಸಲಾಯಿತು.*

ನಿರ್ದೇಶಕ ತತ್ವಗಳು ಸಮಾಜದ ಎಲ್ಲಾ ಜನವಿಭಾಗಗಳ ಕ್ಷೇಮವನ್ನು ಖಾತರಿಪಡಿಸುತ್ತದೆ. ಮೂಲಭೂತ ಹಕ್ಕುಗಳು ಉಲ್ಲಂಘಿಸಲ್ಪಟ್ಟಾಗ ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ಮೊರೆ ಹೋಗಬಹುದು. ನಿರ್ದೇಶಕ ತತ್ವಗಳು ಉಲ್ಲಂಘಿಸಲ್ಪಟ್ಟಾಗ ನ್ಯಾಯಾಲಯದ ಮೊರೆ ಹೋಗುವಂತಿಲ್ಲ. ಮೂಲಭೂತ ಹಕ್ಕುಗಳಿಗೆ ತಿದ್ದುಪಡಿ ತರಬೇಕಿದ್ದರೆ ಸಂಕೀರ್ಣವಾದ ಕಾರ್ಯವಿಧಾನಗಳು ಅಗತ್ಯವಾಗಿವೆ. ನಿರ್ದೇಶಕ ತತ್ವಗಳ ತಿದ್ದುಪಡಿಯ ಕಾರ್ಯವಿಧಾನಗಳು ತುಲನಾತ್ಮಕವಾಗಿ ಸರಳವೂ ಕಾನೂನು ನಿರ್ಮಾಣದ ಮೂಲಕ ಜಾರಿಗೊಳಿಸಲು ಸಾಧ್ಯವಿರುವುದೂ ಆಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೂಲಭೂತ ಹಕ್ಕುಗಳು ರಾಜಕೀಯ ಪ್ರಜಾಪ್ರಭುತ್ವವನ್ನು ಅನುಷ್ಠಾನಗೊಳಿಸುವಾಗ ನಿರ್ದೇಶಕ ತತ್ವಗಳು ಸಾಮಾಜಿಕ - ಆರ್ಥಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಯಥಾರ್ಥಗೊಳಿಸುತ್ತದೆ.




• ಚಿತ್ರ 5.13

ಮೂಲಭೂತ ಹಕ್ಕುಗಳು ಮತ್ತು ನಿರ್ದೇಶಕತತ್ವಗಳೊಳಗಿನ ವ್ಯತ್ಯಾಸಗಳನ್ನು ಕಂಡುಹಿಡಿದು ಬರೆಯಿರಿ.

| ಮೂಲಭೂತ ಹಕ್ಕುಗಳು | ನಿರ್ದೇಶಕ ತತ್ವಗಳು |
|---|---|
| • ನ್ಯಾಯಾಲಯದ ಮೂಲಕ ಪುನ:ಸ್ಥಾಪಿಸಲು ಸಾಧ್ಯವಿದೆ. | • ಜಾರಿಗೊಳಿಸಲು ನ್ಯಾಯಾಲಯದ ಮೊರೆಹೋಗುವಂತಿಲ್ಲ. |
| • | • |
| • | • |
| • | • |

## ಮೂಲಭೂತ ಕರ್ತವ್ಯಗಳು

*''ನಾನೊಬ್ಬ ಭಾರತೀಯನಾಗಿರುವಾಗ ನನಗೆ ಎಲ್ಲಾ ಹಕ್ಕುಗಳೊಂದಿಗೆ ನೆರವೇರಿಸಬೇಕಾದ ಕರ್ತವ್ಯಗಳೂ ಇವೆ ಎಂಬುದನ್ನು ಪ್ರತಿಯೊಬ್ಬರೂ ನೆನಪಿನಲ್ಲಿಡಬೇಕು.'*

***- ಸರ್ದಾರ್ ವಲ್ಲಭ ಭಾಯಿ ಪಟೇಲ್.***



•ಚಿತ್ರ 5.14

ಭಾರತದ ಮೊದಲ ಉಪಪ್ರಧಾನಿ ಹಾಗೂ ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭ ಭಾಯಿ ಪಟೇಲರ ಮಾತುಗಳನ್ನು ಗಮನಿಸಿದರಲ್ಲವೆ? ಭಾರತೀಯ ಪೌರರಿಗೆ ಹಕ್ಕುಗಳೊಂದಿಗೆ ನೆರವೇರಿಸಬೇಕಾದ ಕರ್ತವ್ಯಗಳೂ ಇವೆ ಎಂದು ಅವರು ಸೂಚಿಸುತ್ತಾರೆ.

ಹಕ್ಕುಗಳು ಹಾಗೂ ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಪೌರರು ಪಾಲಿಸಬೇಕಾದ ಕೆಲವು ಕರ್ತವ್ಯಗಳನ್ನು ನಮ್ಮ ಸಂವಿಧಾನದಲ್ಲಿ ಒಳಪಡಿಸಲಾಗಿದೆ. ಸರ್ದಾರ್ ಸ್ವರಣ್ ಸಿಂಗ್ ಸಮಿತಿಯು ಪೌರರ ಮೂಲಭೂತ ಕರ್ತವ್ಯಗಳ ಕುರಿತು ನಿರ್ದೇಶಗಳನ್ನು ಸಮರ್ಪಿಸುವುದಕ್ಕಾಗಿ 1976ರಲ್ಲಿ ಕೇಂದ್ರ ಸರಕಾರವು ನಿಯೋಗಿಸಿದ ಸಮಿತಿಯಾಗಿದೆ. ಸಮಿತಿಯು ಸಮರ್ಪಿಸಿದ ನಿರ್ದೇಶಗಳನ್ನು ಪರಿಗಣಿಸಿ 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿಯ ಪ್ರಕಾರ ಮೂಲಭೂತ ಕರ್ತವ್ಯಗಳನ್ನು ಒಳಪಡಿಸಿಕೊಂಡು ಒಂದು ಹೊಸ ಭಾಗವನ್ನು (IV A) ಸಂವಿಧಾನದಲ್ಲಿ ಸೇರಿಸಲಾಯಿತು. ಇದರ ಪ್ರಕಾರ 51ಎ ಎಂಬ ವಿಧಿಯಾಗಿ ಮೂಲಭೂತ ಕರ್ತವ್ಯಗಳು ಸಂವಿಧಾನದ ಭಾಗವಾದವು.

ಒಬ್ಬ ಪೌರ ಎಂಬ ನೆಲೆಯಲ್ಲಿ ಸಂವಿಧಾನವನ್ನು ಅನುಸರಿಸುವುದು, ದೇಶವನ್ನು ರಕ್ಷಿಸುವುದು, ದೇಶಕ್ಕೆ ಅಗತ್ಯವಿದ್ದಾಗ ದೇಶಸೇವೆಯನ್ನು ಮಾಡುವುದು, ಪರಿಸರವನ್ನು ಸಂರಕ್ಷಿಸುವುದು ಮೊದಲಾದವುಗಳು ಮೂಲಭೂತ ಕರ್ತವ್ಯಗಳಲ್ಲಿ ಒಳಗೊಂಡಿರುವ ಆಶಯಗಳಾಗಿವೆ. ಇವು ಎಲ್ಲ ಪೌರರು ರಾಷ್ಟ್ರ ಮತ್ತು ಸಮಾಜಕ್ಕೆ ಬೇಕಾಗಿ ಪಾಲಿಸಬೇಕಾದ ಕರ್ತವ್ಯಗಳು ಯಾವುವು ಎಂಬುದನ್ನು ತಿಳಿಸುತ್ತವೆ. ಹನ್ನೊಂದು ಜವಾಬ್ದಾರಿಗಳನ್ನು ಮೂಲಭೂತ ಕರ್ತವ್ಯಗಳಾಗಿ ಸಂವಿಧಾನದಲ್ಲಿ ಸೇರಿಸಲಾಗಿದೆ. ಇವುಗಳಲ್ಲಿ ಕೆಲವು ನೈತಿಕ ಹಾಗೂ ಇನ್ನು ಕೆಲವು ಪೌರ ಧರ್ಮಕ್ಕೆ ಸಂಬಂಧಿಸಿದ್ದಾಗಿದೆ. ಪೌರರು ಮೂಲಭೂತ ಹಕ್ಕುಗಳನ್ನು ಅನುಭವಿಸುವಾಗ ಅವರು ತಮ್ಮ ಮೂಲಭೂತ ಕರ್ತವ್ಯಗಳನ್ನು ಕೂಡ ತಿಳಿದಿರಬೇಕು ಎಂಬುದು ಇದರ ಮೂಲತತ್ವ.




•ಚಿತ್ರ 5.15

ಭಾರತದ ಸಂವಿಧಾನದಲ್ಲಿ ಹೇಳಲಾದ ಕೆಲವು ಮೂಲಭೂತ ಕರ್ತವ್ಯಗಳನ್ನು ಕೆಳಗೆ ನೀಡಲಾಗಿದೆ. ಇತರ ಯಾವೆಲ್ಲ ಕರ್ತವ್ಯಗಳನ್ನು ಭಾರತೀಯ ಪೌರನು ಸಂವಿಧಾನದ ಪ್ರಕಾರ ನಿರ್ವಹಿಸಬೇಕೆಂಬುದನ್ನು ಪಠ್ಯಪುಸ್ತಕದ ಕೊನೆಯಲ್ಲಿ ನೀಡಿರುವ ಭಾಗದಿಂದ ಕಂಡುಹಿಡಿದು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

- ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
- ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.
- 
- 

ನಮ್ಮ ಸಂವಿಧಾನವು ವ್ಯಕ್ತಿಗಳ ಘನತೆಯಿಂದೊಡಗೂಡಿದ ಜೀವನಕ್ಕೆ ಅತ್ಯಂತ ಅಗತ್ಯವಾದ ಹಕ್ಕುಗಳನ್ನು ಮೂಲಭೂತ ಹಕ್ಕುಗಳಾಗಿ ಖಾತರಿಪಡಿಸುತ್ತದೆ. ಅದರೊಂದಿಗೆ ಸಮೂಹದ ಕ್ಷೇಮಕ್ಕಾಗಿ ರಾಜ್ಯನೀತಿಯ ನಿರ್ದೇಶಕ ತತ್ವಗಳನ್ನು ಮುಂದಿಡುತ್ತದೆ. ದೇಶದ ಅಖಂಡತೆ ಹಾಗೂ ಅಸ್ತಿತ್ವಕ್ಕೆ ಸೂಕ್ತವಾದ ಮೂಲಭೂತ ಕರ್ತವ್ಯಗಳನ್ನು ಸಂವಿಧಾನದಲ್ಲಿ ಹೇಳಲಾಗಿದೆ. ಈ ರೀತಿಯಲ್ಲಿ ಸಂವಿಧಾನವು ಹಕ್ಕುಗಳ ಹಾಗೂ ಕರ್ತವ್ಯಗಳ ಒಂದು ಸಂಹಿತೆಯಾಗಿ ಕಾರ್ಯವೆಸಗುತ್ತಿದೆ.

## ಮುಂದುವರಿದ ಚಟುವಟಿಕೆಗಳು

- 'ಮೂಲಭೂತ ಹಕ್ಕುಗಳ ರಕ್ಷಣೆಯಲ್ಲಿ ನ್ಯಾಯಾಲಯದ ಪಾತ್ರ' ಎಂಬ ವಿಷಯದಲ್ಲಿ ಕಾನೂನು ತಜ್ಞರೊಂದಿಗೆ ಸಂದರ್ಶನವನ್ನು ನಡೆಸಿರಿ.
- ಮೂಲಭೂತ ಹಕ್ಕುಗಳನ್ನು ಪೂರ್ಣ ರೂಪದಲ್ಲಿ ಅನುಭವಿಸುವಾಗ ಮೂಲಭೂತ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಬೇಕು' ಈ ವಿಷಯದಲ್ಲಿ ಪ್ಯಾನೆಲ್ ಚರ್ಚೆಯೊಂದನ್ನು ನಡೆಸಿರಿ.
- ಮೂಲಭೂತ ಹಕ್ಕುಗಳು, ನಿರ್ದೇಶಕ ತತ್ವಗಳು, ಮೂಲಭೂತ ಕರ್ತವ್ಯಗಳು ಎಂಬಿವುಗಳಿಗೆ ಸಂಬಂಧಿಸಿದ ಪತ್ರಿಕಾವಾರ್ತೆಗಳನ್ನು ಸಂಗ್ರಹಿಸಿ ಡಿಜಿಟಲ್ ಆಲ್ಬಮ್ ತಯಾರಿಸಿರಿ.

ಅಧ್ಯಾಯ 6



# ಸಂಪನ್ಮೂಲಗಳ ಬಳಕೆ ಹಾಗೂ ಸುಸ್ಥಿರತೆ



*ಚಿತ್ರ 6.1 • ಕೋಲಾರ ಚಿನ್ನದ ಗಣಿ*

ಮೇಲೆ ನೀಡಿರುವ ಚಿತ್ರವನ್ನು ನಿರೀಕ್ಷಿಸಿರಿ.

ಇದು ಭಾರತದ ಅತ್ಯಂತ ಹಳೆಯ ಮತ್ತು ಅತಿ ದೊಡ್ಡ ಚಿನ್ನದ ಗಣಿಯಾಗಿದೆ. 1804 ರಲ್ಲಿ ಬ್ರಿಟಿಷ್ ಸರಕಾರಕ್ಕಾಗಿ ಜೋನ್ ವಾರನ್ ಸಂಪನ್ಮೂಲ ಭೂಪಟವನ್ನು (ನಕ್ಷೆಯನ್ನು) ತಯಾರಿಸಿದಾಗ, ಕರ್ನಾಟಕದ ಉರಿಗಂ ಗ್ರಾಮ ಮತ್ತು ಅದರ ಸುತ್ತು ಮುತ್ತಲಿನ ಪ್ರದೇಶಗಳು ಚಿನ್ನವಿರುವ ನಾಡು ಎಂಬುದಾಗಿ ಗುರುತಿಸಿದನು. ಇದಕ್ಕೆ ಕೆ.ಜಿ.ಎಫ್ (ಕೋಲಾರ

ಗೋಲ್ಡ್ ಫೀಲ್ಡ್) ಎಂದು ಮರುನಾಮಕರಣ ಮಾಡಿದರು. 1880 ರಿಂದ 1956 ರ ವರೆಗೆ 800 ಟನ್ ಗಿಂತಲೂ ಅಧಿಕ ಚಿನ್ನವನ್ನು ಉತ್ಪಾದಿಸಿ, ಕೋಲಾರ ಗೋಲ್ಡ್ ಫೀಲ್ಡ್ (ಕೆ.ಜಿ.ಎಫ್) ಜಾಗತಿಕ ಚಿನ್ನದ ಭೂಪಟದಲ್ಲಿ ಭಾರತದ ಸ್ಥಾನವನ್ನು ದಾಖಲಿಸಿತು. ಚಿನ್ನದ ನಿಕ್ಷೇಪದಿಂದಾಗಿ ಕರ್ನಾಟಕದ ಕೋಲಾರವು ಭಾರತದ ಅತ್ಯಂತ ಹಳೆಯ ಕೈಗಾರಿಕಾ ನಗರಗಳಲ್ಲಿ ಒಂದಾಗಿ ಬದಲಾಯಿತು. ಭಾರತದ ಆರ್ಥಿಕತೆ ಮತ್ತು ಜನಜೀವನದಲ್ಲಿ ಚಿನ್ನದ ಮಹತ್ವವನ್ನು ಅರಿತುಕೊಂಡಿರಲ್ಲವೇ.

ಚಿನ್ನವನ್ನು ಯಾವ ಯಾವ ಉದ್ದೇಶಗಳಿಗಾಗಿ ನಾವು ಬಳಸುತ್ತೇವೆ?

- ಎಲೆಕ್ಟ್ರಾನಿಕ್ಸ್ ನಿರ್ಮಾಣ
- ಔಷಧ ನಿರ್ಮಾಣ
- 

ಚಿನ್ನದ ಹೊರತಾಗಿ ದೈನಂದಿನ ಜೀವನದಲ್ಲಿ ನಮ್ಮ ಅಗತ್ಯಗಳನ್ನು ಪೂರೈಸಲು ಬಳಕೆ ಮಾಡುವ ವಸ್ತುಗಳು ಯಾವುವೆಂದು ಹೇಳಬಹುದೆ?

- 
- 

ಚಿನ್ನ, ಕಬ್ಬಿಣ, ಬೆಳ್ಳಿ ಮೊದಲಾದವುಗಳು ಪ್ರಕೃತಿಯಿಂದ ದೊರೆಯುತ್ತವೆ. ಇದಲ್ಲದೆ ಪ್ರಕೃತಿಯಿಂದ ಲಭಿಸುವ ಗಾಳಿ, ನೀರು, ಮಣ್ಣು ಮೊದಲಾದ ಭೌತಿಕ ವಸ್ತುಗಳನ್ನು ನಮ್ಮ ಅಗತ್ಯಗಳ ಪೂರೈಕೆಗಾಗಿ ಉಪಯೋಗಿಸುತ್ತೇವೆ.

ಈ ರೀತಿಯಲ್ಲಿ ಅಗತ್ಯಗಳನ್ನು ನೆರವೇರಿಸುವ ಸಾಮರ್ಥ್ಯವಿರುವ, ಪ್ರಕೃತಿಯಿಂದ ಲಭಿಸುವ, ತಾಂತ್ರಿಕವಾಗಿ ಪಡೆಯಬಲ್ಲ ಹಾಗೂ ಸಾಂಸ್ಕೃತಿಕವಾಗಿ ಸ್ವೀಕಾರಾರ್ಹವಾದ ಪ್ರತಿಯೊಂದನ್ನೂ ಸಂಪನ್ಮೂಲವೆಂದು ಕರೆಯುತ್ತಾರೆ. ನೀರು, ಗಾಳಿ, ಮಣ್ಣು ಮೊದಲಾದ ಭೌತಿಕ ವಸ್ತುಗಳು ಮಾತ್ರವಲ್ಲದೆ ಜ್ಞಾನ, ಆರೋಗ್ಯ ಮೊದಲಾದ ಅಭೌತಿಕ ವಸ್ತುಗಳೂ ಕೂಡಾ ಸಂಪನ್ಮೂಲಗಳಲ್ಲಿ ಒಳಪಡುತ್ತವೆ. ಮಾನವನ ಅಗತ್ಯಗಳಿಗನುಸಾರವಾಗಿ ಸಮಯ ಮತ್ತು ತಂತ್ರಜ್ಞಾನವನ್ನು ಬಳಸಿ ಯಾವುದೇ ವಸ್ತುವನ್ನು ಕೂಡಾ ಸಂಪನ್ಮೂಲವಾಗಿ ಬದಲಾಯಿಸಬಹುದು. ಇದಲ್ಲದೆ ಮಾನವನ ಸಾಮರ್ಥ್ಯಗಳನ್ನೂ ಸಂಪನ್ಮೂಲವಾಗಿ ಬಳಸಲಾಗುತ್ತದೆ. ಇದನ್ನು ಮಾನವ ಸಂಪನ್ಮೂಲವೆಂದು ಕರೆಯುತ್ತಾರೆ.

ಲಭ್ಯತೆಯ ಮೂಲದ ಆಧಾರದಲ್ಲಿ ಸಂಪನ್ಮೂಲಗಳನ್ನು ಪ್ರಧಾನವಾಗಿ ಪ್ರಾಕೃತಿಕ ಸಂಪನ್ಮೂಲ ಮತ್ತು ಮಾನವ ನಿರ್ಮಿತ ಸಂಪನ್ಮೂಲಗಳೆಂದು ವಿಭಜಿಸಲಾಗಿದೆ.




*ಚಿತ್ರ 6.2*

## *ಮಾನವ ಸಂಪನ್ಮೂಲ*

*ಮಾನವನು ತನ್ನ ಸಾಮರ್ಥ್ಯ, ಕೌಶಲ ಮತ್ತು ತಾಂತ್ರಿಕತೆ ಎಂಬಿವುಗಳನ್ನು ಉಪಯೋಗಿಸಿ ಧಾರಾಳ ಸಂಪನ್ಮೂಲಗಳನ್ನು ರೂಪಿಸುವುದರಿಂದ ಮಾನವನನ್ನು ಸಂಪನ್ಮೂಲವಾಗಿ ಪರಿಗಣಿಸಲಾಗುತ್ತದೆ.*

**ಸಂಪನ್ಮೂಲಗಳು**

| **ಪ್ರಾಕೃತಿಕ ಸಂಪನ್ಮೂಲಗಳು** | **ಮಾನವ ನಿರ್ಮಿತ ಸಂಪನ್ಮೂಲಗಳು** |
|---|---|
| ಪ್ರಕೃತಿಯಿಂದ ಲಭಿಸುವ ಸಂಪನ್ಮೂಲಗಳು<br>ಉದಾ : ಗಾಳಿ, ಖನಿಜಗಳು | ಮಾನವರು ನಿರ್ಮಿಸುವ ಸಂಪನ್ಮೂಲಗಳು<br>ಉದಾ : ರಸ್ತೆ, ಯಂತ್ರಗಳು |

ಎಲ್ಲಾ ಪ್ರಾಕೃತಿಕ ಸಂಪನ್ಮೂಲಗಳನ್ನು ನಮಗೆ ಧಾರಾಳವಾಗಿ ಬಳಸಬಹುದೆ? ಎಲ್ಲಾ ಸಂಪನ್ಮೂಲಗಳನ್ನು ಸಮಾನ ಪರಿಗಣನೆಯೊಂದಿಗೆ ಉಪಯೋಗಿಸಲು ಯಾಕೆ ಸಾಧ್ಯವಾಗುವುದಿಲ್ಲ?

- ಎಲ್ಲೆಡೆ ಲಭ್ಯವಲ್ಲ
- ಬಳಸಿದಂತೆ ಮುಗಿದುಹೋಗುತ್ತದೆ
- 

ಪ್ರಾಕೃತಿಕ ಸಂಪನ್ಮೂಲಗಳ ಲಭ್ಯತೆ ಮತ್ತು ನವೀಕರಣವು ವಿಭಿನ್ನವಾಗಿದೆ. ನವೀಕರಿಸಬಹುದಾದ ಸಾಮರ್ಥ್ಯದ ಆಧಾರದಲ್ಲಿ ಸಂಪನ್ಮೂಲಗಳನ್ನು ಎರಡಾಗಿ ವಿಭಜಿಸಲಾಗಿದೆ.

### 1. ನವೀಕರಿಸಲು ಸಾಧ್ಯವಾಗುವ ಸಂಪನ್ಮೂಲಗಳು

**(Renewable Resource)**

ನಿರಂತರ ಬಳಕೆಯ ನಂತರವೂ ಮುಗಿದುಹೋಗದ ಹಾಗೂ ಮರುಬಳಕೆಗೆ ಯೋಗ್ಯವಾದ ಸಂಪನ್ಮೂಲಗಳು ನವೀಕರಿಸಲು ಸಾಧ್ಯವಾಗುವ ಸಂಪನ್ಮೂಲಗಳಾಗಿವೆ. ಇವುಗಳು ಪ್ರಕೃತಿಯಲ್ಲಿ ನಿರಂತರವಾಗಿ ಉತ್ಪಾದಿಸಲ್ಪಡುವ ಮತ್ತು ಯಾವಾಗಲೂ ಮಾನವನಿಗೆ ಸುಲಭದಲ್ಲಿ ಲಭ್ಯವಾಗುವವುಗಳಾಗಿವೆ. ಸೂರ್ಯಪ್ರಕಾಶ, ಗಾಳಿ, ಸಮುದ್ರದ ಅಲೆ ಮೊದಲಾದವುಗಳು ಈ ವಿಧದ ಸಂಪನ್ಮೂಲಗಳಿಗೆ ಉದಾಹರಣೆಗಳಾಗಿವೆ.

### 2. ನವೀಕರಿಸಲು ಸಾಧ್ಯವಾಗದ ಸಂಪನ್ಮೂಲಗಳು

**(Non-Renewable Resources)**

ಲಕ್ಷಗಟ್ಟಲೆ ವರ್ಷಗಳಿಂದ ರೂಪುಗೊಂಡ ಹಾಗೂ ಬಳಕೆಗನುಸಾರವಾಗಿ ಕಡಿಮೆಯಾಗುವ ಸಂಪನ್ಮೂಲಗಳು ನವೀಕರಿಸಲು ಸಾಧ್ಯವಾಗದ ಸಂಪನ್ಮೂಲಗಳಾಗಿವೆ. ಕಬ್ಬಿಣ, ಚಿನ್ನ, ಕಲ್ಲಿದ್ದಲು, ಪೆಟ್ರೋಲಿಯಂ ಮೊದಲಾದುವುಗಳು ಇವುಗಳಿಗೆ ಉದಾಹರಣೆಗಳಾಗಿವೆ.

**_ಸಂಪೂರ್ಣ ಸೌರಚೈತನ್ಯ ವಿಮಾನನಿಲ್ದಾಣ_**



*ಚಿತ್ರ 6.3 • ಕೊಚ್ಚಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ*

*ಕೊಚ್ಚಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಸಂಪೂರ್ಣವಾಗಿ ಸೌರಚೈತನ್ಯವನ್ನು ಉಪಯೋಗಿಸಿಕೊಂಡು ಕಾರ್ಯನಿರ್ವಹಿಸುವ ಜಗತ್ತಿನ ಪ್ರಥಮ ವಿಮಾನನಿಲ್ದಾಣವಾಗಿದೆ. ಇದು ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹಭಾಗಿತ್ವದೊಂದಿಗೆ ಆರಂಭಿಸಿದ ಭಾರತದ ಮೊತ್ತಮೊದಲ ವಿಮಾನ ನಿಲ್ದಾಣವಾಗಿದೆ.*

### *ಮುಂಬೈ ಹೈ (ಬೋಂಬೆ ಹೈ)*


ಚಿತ್ರ 6.4 • ಮುಂಬೈ ಹೈ

*ಮುಂಬೈ ಹೈಯು ಮಹಾರಾಷ್ಟ್ರದ ಮುಂಬೈ ಕರಾವಳಿಯಿಂದ 160 ಕಿಲೋಮೀಟರ್ ದೂರದಲ್ಲಿ ಅರಬಿ ಸಮುದ್ರದಲ್ಲಿರುವ ದೊಡ್ಡ ತೈಲ ನಿಕ್ಷೇಪ ಕೇಂದ್ರವಾಗಿದೆ. ಇದು ಭಾರತದ ಅತಿ ದೊಡ್ಡ ಸಮುದ್ರ ತೀರ ತೈಲಖನನ ಕೇಂದ್ರಗಳಲ್ಲೊಂದಾಗಿದೆ. 1974ರಲ್ಲಿ ಕಂಡುಹಿಡಿದ ಈ ತೈಲಬಾವಿಯ ಮೇಲ್ನೋಟವನ್ನು ಓಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್ (ONGC) ವಹಿಸಿದೆ.*

***ನೀರು, ಲೋಹಗಳು, ಸೌರ ಚೈತನ್ಯ, ಕಲ್ಲಿದ್ದಲು, ಗಾಳಿ, ಪೆಟ್ರೋಲಿಯಂ***
*ನೀಡಿರುವ ಸಂಪನ್ಮೂಲಗಳಲ್ಲಿ ನವೀಕರಿಸಬಹುದಾದ ಮತ್ತು ನವೀಕರಿಸಲು ಸಾಧ್ಯವಾಗದವುಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ.*

| ನವೀಕರಿಸಬಹುದಾದ | ನವೀಕರಿಸಲು ಸಾಧ್ಯವಾಗದ |
|---|---|
| • | • |
| • | • |
| • | • |

ಮಾನವನ ಅಭಿವೃದ್ಧಿಯ ವಿವಿಧ ಕಾಲಘಟ್ಟಗಳಲ್ಲಿ ಕಬ್ಬಿಣ, ತಾಮ್ರದಂತಹ ಖನಿಜ ಸಂಪನ್ಮೂಲಗಳು ಪ್ರಧಾನ ಪಾತ್ರ ವಹಿಸಿವೆ ಎಂದು ಹಿಂದಿನ ತರಗತಿಗಳಲ್ಲಿ ತಿಳಿದಿರುವಿರಲ್ಲವೇ.

ಇಂತಹ ಸಂಪನ್ಮೂಲಗಳನ್ನು ನವೀಕರಿಸಲು ಸಾಧ್ಯವಾಗುವುದಿಲ್ಲ. ಒಂದು ಪ್ರದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವ ಬೀರುವ ಇಂತಹ ಸಂಪನ್ಮೂಲಗಳ ಕುರಿತು ಚರ್ಚಿಸೋಣ.

### *ಗಣಿಗಾರಿಕೆ*

*ಇದು ಭೂ ಮೇಲ್ಮೈಯಿಂದ ಅಥವಾ ಭೂಮಿಯ ಅಂತರ್ಭಾಗದಿಂದ ಅಮೂಲ್ಯವಾದ ವಸ್ತುಗಳನ್ನು ಕಂಡು ಹಿಡಿದು ಹೊರತೆಗೆಯುವ ಪ್ರಕ್ರಿಯೆಯಾಗಿದೆ. ಇದನ್ನು ಮೇಲ್ಮೈ ಗಣಿಗಾರಿಕೆ ಮತ್ತು ಭೂಗರ್ಭ ಗಣಿಗಾರಿಕೆ ಎಂದು ವರ್ಗೀಕರಿಸಬಹುದು.*

## ಖನಿಜಗಳು (Minerals)

ನೈಸರ್ಗಿಕವಾಗಿ ರೂಪುಗೊಂಡದ್ದೂ ರಾಸಾಯನಿಕ - ಭೌತಿಕ ಗುಣಗಳನ್ನೊಳಗೊಂಡ ಜೈವಿಕ-ಅಜೈವಿಕ ಪದಾರ್ಥಗಳೇ ಖನಿಜಗಳಾಗಿವೆ. ಪೆಟ್ರೋಲಿಯಂ, ಕಬ್ಬಿಣದ ಅದಿರು, ಬಾಕ್ಸೈಟ್ ಮೊದಲಾದವುಗಳು ಇದಕ್ಕೆ ಉದಾಹರಣೆಗಳಾಗಿವೆ. ಇಂತಹ ಖನಿಜಗಳನ್ನು ನೇರವಾಗಿ ಉಪಯೋಗಿಸಲು ಸಾಧ್ಯವಿಲ್ಲ.

ಭೂವಲ್ಕದಲ್ಲಿ ಅದಿರಿನ ರೂಪದಲ್ಲಿ ಕಂಡು ಬರುವ ಖನಿಜಗಳು ಗಣಿಗಾರಿಕೆ ಮತ್ತು ಸಂಸ್ಕರಣೆಯ ನಂತರವೇ ಉಪಯೋಗ ಯೋಗ್ಯವಾಗುತ್ತವೆ. ಗಣಿಗಾರಿಕೆಯ ಮೂಲಕ ಮಾಲಿನ್ಯ ಮಿಶ್ರಿತ ಕಚ್ಚಾರೂಪದಲ್ಲಿ ಖನಿಜಗಳು ಭೂವಲ್ಕದಿಂದ ಲಭಿಸುತ್ತವೆ. ಇದನ್ನು

ಅದಿರು ಎಂದು ಕರೆಯುತ್ತಾರೆ. ಈ ಅದಿರನ್ನು ವಿವಿಧ ಸಂಸ್ಕರಣಾ ಪ್ರಕ್ರಿಯೆಗಳ ಮೂಲಕ ಮಾತ್ರವೇ ಅಮೂಲ್ಯವಾದ ಖನಿಜಗಳಾಗಿ ಪರಿವರ್ತಿಸಬಹುದು.

***ಪೆಟ್ರೋಲಿಯಂ, ಕಬ್ಬಿಣದ ಅದಿರು, ಬಾಕ್ಸೈಟ್***

*ಮೇಲೆ ಹೇಳಿರುವ ಖನಿಜಗಳಿಂದ ಲೋಹದ ಅಂಶವಿರುವ ಖನಿಜಗಳನ್ನು ಕಂಡುಹಿಡಿಯಿರಿ.*

- 
- 

ಇದರಿಂದ ಕೆಲವು ಖನಿಜಗಳಲ್ಲಿ ಲೋಹಗಳ ಅಂಶವಿರುವುದೆಂದು ತಿಳಿದಿರಲ್ಲವೇ. ಖನಿಜಗಳಲ್ಲಿ ಅಡಕವಾಗಿರುವ ಪದಾರ್ಥಗಳ ಮತ್ತು ಭೌತಿಕ ವಿಶೇಷತೆಗಳ ಆಧಾರದಲ್ಲಿ ಅವುಗಳನ್ನು ಎರಡಾಗಿ ವಿಭಜಿಸಲಾಗಿದೆ.




## ಲೋಹ ಖನಿಜಗಳು (Metallic Minerals)

ಪ್ರಕೃತಿಯಲ್ಲಿ ನೈಸರ್ಗಿಕವಾಗಿ ಕಾಣುವ ಲೋಹದ ಅಂಶವಿರುವವುಗಳು ಲೋಹ ಖನಿಜಗಳಾಗಿವೆ. ಸಂಸ್ಕರಣೆ ಪ್ರಕ್ರಿಯೆಯ ಮೂಲಕ ಲೋಹ ಖನಿಜಗಳಿಂದ ಬೇರ್ಪಡಿಸುವ ಖನಿಜವು ಸಾಮಾನ್ಯವಾಗಿ ಕಠಿಣ ಹಾಗೂ ಹೊಳಪಿನಿಂದ ಕೂಡಿರುತ್ತದೆ. ಬಾಕ್ಸೈಟ್‌ನಿಂದ ಅಲ್ಯುಮಿನಿಯಂನ್ನುಬೇರ್ಪಡಿಸುವುದು ಇದಕ್ಕೆ ಉದಾಹರಣೆ ಯಾಗಿದೆ. ಕಬ್ಬಿಣದ ಅಂಶದ ಆಧಾರದಲ್ಲಿ ಲೋಹ ಖನಿಜಗಳನ್ನು ಎರಡಾಗಿ ವಿಭಜಿಸಲಾಗಿದೆ. ಇವುಗಳ ವಿಶೇಷತೆಗಳೇನೆಂದು ಪರಿಶೀಲಿಸುವ.

| **ಕಬ್ಬಿಣದ ಅಂಶವಿರುವ ಲೋಹಗಳು** (Ferrous minerals) | **ಕಬ್ಬಿಣದ ಅಂಶವಿಲ್ಲದಿರುವ ಲೋಹಗಳು** (Non-ferrous minerals) |
|---|---|
| • ಬೂದು ಬಣ್ಣದಲ್ಲಿ ಕಂಡುಬರುತ್ತವೆ. | • ವಿವಿಧ ಬಣ್ಣಗಳಲ್ಲಿ ಕಂಡುಬರುತ್ತವೆ. |
| • ಕಾಂತೀಯ ಗುಣವಿದೆ. | • ಕಾಂತೀಯ ಗುಣವಿರುವುದಿಲ್ಲ. |
| • ಭಾರ ಹೆಚ್ಚು | • ತುಲನಾತ್ಮಕವಾಗಿ ಕಡಿಮೆ ಭಾರ |

### *ಕಬ್ಬಿಣದ ಅದಿರುಗಳು*




●ಚಿತ್ರಗಳು 6.5

*ಕಬ್ಬಿಣದ ಅಂಶವು ಅಡಕವಾಗಿರುವುದರ ಆಧಾರದಲ್ಲಿ ಕಬ್ಬಿಣದ ಅದಿರುಗಳನ್ನು ನಾಲ್ಕಾಗಿ ವಿಭಜಿಸಲಾಗಿದೆ. ಮೇಗ್ನಟೈಟ್, ಹೆಮಟೈಟ್, ಲಿಮೋನೈಟ್, ಸಿಡರೈಟ್. ಮೇಗ್ನಟೈಟನ್ನು ಕಪ್ಪು ಅದಿರು ಎಂದು ಕರೆಯುತ್ತಾರೆ. ಉತ್ತಮ ಗುಣಮಟ್ಟದ ಮೇಗ್ನಟೈಟ್ ತಮಿಳುನಾಡು, ಕರ್ನಾಟಕ, ಜಾರ್ಖಂಡ್, ಗೋವಾ, ಆಂಧ್ರಪ್ರದೇಶ ಮೊದಲಾದ ರಾಜ್ಯಗಳಲ್ಲಿ ಕಂಡುಬರುತ್ತದೆ.*

## ಅಲೋಹ ಖನಿಜಗಳು (Non-Metallic Minerals)

ಲೋಹದ ಅಂಶವಿಲ್ಲದಿರುವ ಖನಿಜಗಳನ್ನು ಅಲೋಹ ಖನಿಜಗಳೆಂದು ಕರೆಯುತ್ತಾರೆ. ಅಲೋಹ ಖನಿಜಗಳಿಗೆ ಗಡಸುತನ, ಹೊಳಪು, ಮೃದುತ್ವ ಮೊದಲಾದ ಗುಣಗಳು ಕಡಿಮೆಯಾಗಿರುತ್ತವೆ. ಅಲೋಹ ಖನಿಜಗಳನ್ನು ಜೈವಿಕ ಖನಿಜಗಳು ಮತ್ತು ಅಜೈವಿಕ ಖನಿಜಗಳೆಂದು ವಿಭಜಿಸಲಾಗಿದೆ. ಕಲ್ಲಿದ್ದಲು, ಪೆಟ್ರೋಲಿಯಂನಂತಹ ಜೈವಿಕ ಖನಿಜಗಳಲ್ಲಿ ಜೈವಿಕ ಘಟಕಗಳು ಅಡಕವಾಗಿರುತ್ತವೆ. ಆದರೆ ಗ್ರಾಫೈಟ್, ಆವೆಮಣ್ಣುಗಳಂತಹ ಅಜೈವಿಕ ಖನಿಜಗಳಲ್ಲಿ ಅಜೈವಿಕ ಘಟಕಗಳು ಅಡಕವಾಗಿರುತ್ತವೆ.

*ನೀಡಿರುವ ಲೋಹ ಖನಿಜಗಳು ಮತ್ತು ಅಲೋಹ ಖನಿಜಗಳ ಉಪಯೋಗವನ್ನು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ಲೋಹ ಖನಿಜಗಳ ಉಪಯೋಗ | ಅಲೋಹ ಖನಿಜಗಳ ಉಪಯೋಗ |
|---|---|
| • ಕಬ್ಬಿಣ - ಕಟ್ಟಡ ನಿರ್ಮಾಣ | • ಗ್ರಾಫೈಟ್ - ಪೆನ್ಸಿಲ್ ನಿರ್ಮಾಣ |
| • ಚಿನ್ನ - | • ಪೆಟ್ರೋಲ್ - |
| • ತಾಮ್ರ - | • ಆವೆಮಣ್ಣು - |

ಭಾರತವು ವೈವಿಧ್ಯಮಯವಾದ ಖನಿಜಗಳಿಂದ ಸಮೃದ್ಧವಾಗಿದೆ. ದೇಶದ ಭೌಗೋಳಿಕ ವಿಶೇಷತೆಗಳು ಖನಿಜ ವೈವಿಧ್ಯತೆಗೆ ಕಾರಣವಾಗಿದೆ. ಭಾರತದ ವಿವಿಧ ರಾಜ್ಯಗಳ ಬೇರೆ ಬೇರೆ ಪ್ರದೇಶಗಳಲ್ಲಿ ಖನಿಜಗಳ ನಿಕ್ಷೇಪವು ಅಸಮಾನವಾಗಿ ಹಂಚಿಕೆಯಾಗಿದೆ. ಭಾರತದ ಖನಿಜ ನಿಕ್ಷೇಪಗಳ ವಿತರಣೆಯನ್ನು ಪರಿಚಯಿಸೋಣ. ಭೂಪಟವನ್ನು ಗಮನಿಸಿರಿ.


ಭಾರತದ
ಖನಿಜ ಸಂಪನ್ಮೂಲಗಳು
N
E
S
W
ಲಡಾಕ್
ಜಮ್ಮು & ಕಾಶ್ಮೀರ
ಹಿಮಾಚಲ ಪ್ರದೇಶ
ಚಂಡೀಗಢ
ಪಂಜಾಬ್
ಉತ್ತರಾಖಂಡ
ಹರಿಯಾಣ
ನವ ದೆಹಲಿ
ಉತ್ತರ ಪ್ರದೇಶ
ರಾಜಸ್ಥಾನ
ಸಿಕ್ಕಿಂ
ಅರುಣಾಚಲ ಪ್ರದೇಶ
ಅಸ್ಸಾಂ
ಮೇಘಾಲಯ
ನಾಗಾಲ್ಯಾಂಡ್
ಮಣಿಪುರ
ತ್ರಿಪುರ
ಮಿಜೋರಾಂ
ಬಿಹಾರ
ಜಾರ್ಖಂಡ್
ಗುಜರಾತ್
ಮಧ್ಯಪ್ರದೇಶ
ದಾಮನ್&ದಿಯು
ದಾದ್ರಾ & ನಗರ ಹವೇಲಿ
ಮಹಾರಾಷ್ಟ್ರ
ತೆಲಂಗಾಣ
ಗೋವಾ
ಆಂಧ್ರ ಪ್ರದೇಶ
ಬಂಗಾಳ ಕೊಲ್ಲಿ
ಅರಬಿ ಸಮುದ್ರ
ಅಂಡಮಾನ್ & ನಿಕೋಬಾರ್
ಪುದುಚೇರಿ
ಲಕ್ಷದ್ವೀಪ
ಕೇರಳ
MAP NOT TO SCALE
ಸೂಚಕ
ಅಸ್ಬೆಸ್ಟೋಸ್
ಬಾಕ್ಸೈಟ್
ಕಲ್ಲಿದ್ದಲು
ತಾಮ್ರ
ಡೋಲಮೈಟ್
ಚಿನ್ನ
ಜಿಪ್ಸಂ
ಕಬ್ಬಿಣ
ಸೀಸ, ಸತು
ಸುಣ್ಣದ ಕಲ್ಲು
ಮ್ಯಾಂಗನೀಸ್
ಮೈಕ
ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳು

*ಚಿತ್ರ 6.6 • ಭೂಪಟ*

*ಭೂಪಟದಿಂದ ಪ್ರಧಾನ ಖನಿಜಗಳು ಹಾಗೂ ಅವುಗಳ ಹಂಚಿಕೆಯಾಗಿರುವ ರಾಜ್ಯಗಳನ್ನು ಕಂಡುಹಿಡಿಯಿರಿ.*

| ಖನಿಜಗಳು | ರಾಜ್ಯಗಳು |
|---|---|
| • *ಚಿನ್ನ* | • *ಮಧ್ಯ ಪ್ರದೇಶ, ಆಂಧ್ರ ಪ್ರದೇಶ, ಕೇರಳ, ಕರ್ನಾಟಕ, ಜಾರ್ಖಂಡ್* |
| • *ಕಬ್ಬಿಣ* | • |
| • *ಕಲ್ಲಿದ್ದಲು* | • |
| • *ಮ್ಯಾಂಗನೀಸ್* | • |

### *ಉತ್ಪಾದನಾ ಕೈಗಾರಿಕೆ*

*ಯಂತ್ರಗಳ ಸಹಾಯದಿಂದ ಕಚ್ಚಾ ವಸ್ತುಗಳನ್ನು ಸ್ಥಳೀಯ ಹಾಗೂ ದೂರದ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ಸಾಧ್ಯವಾಗುವಂತಹ ಬೆಲೆಬಾಳುವ ಉತ್ಪನ್ನಗಳನ್ನಾಗಿ ಮಾರ್ಪಡಿಸುವ ಪ್ರಕ್ರಿಯೆಯನ್ನು ಉತ್ಪಾದನಾ ಕೈಗಾರಿಕೆ ಎನ್ನುತ್ತಾರೆ.*

## ಭಾರತದ ಉತ್ಪಾದನಾ ಕೈಗಾರಿಕೆಗಳು

ಖನಿಜಗಳು ಯಾವ ಯಾವ ರೀತಿಯಲ್ಲಿ ಮಾನವನಿಗೆ ಪ್ರಯೋಜನಕಾರಿಯಾಗಿವೆ ಎಂದು ಚರ್ಚಿಸಿದೆವಲ್ಲವೇ? ಭಾರತದ ವಿವಿಧ ರಾಜ್ಯಗಳಲ್ಲಾಗಿ ಹಂಚಿಕೆಯಾಗಿರುವ ಈ ಖನಿಜಗಳು ಭಾರತದ ಉತ್ಪಾದನಾ ಕೈಗಾರಿಕಾ ವಲಯದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ವಿವಿಧ ಸಂಸ್ಕರಣ ಪ್ರಕ್ರಿಯೆಗಳ ಮೂಲಕ ಬೇರ್ಪಡಿಸಿ ತೆಗೆಯುವ ಖನಿಜಗಳು ಕೈಗಾರಿಕೆಗಳ ಪ್ರಧಾನ ಕಚ್ಚಾವಸ್ತುಗಳಾಗಿವೆ. ಕಚ್ಚಾವಸ್ತುಗಳ ಆಧಾರದಲ್ಲಿ ಉತ್ಪಾದನಾ ಕೈಗಾರಿಕೆಗಳನ್ನು ಪ್ರಧಾನವಾಗಿ ಕೆಳಗೆ ಹೇಳಿರುವ ರೀತಿಯಲ್ಲಿ ವಿಭಜಿಸಬಹುದು.

**ಉತ್ಪಾದನಾ ಕೈಗಾರಿಕೆಗಳು**

- ಕೃಷಿ ಆಧಾರಿತ ಕೈಗಾರಿಕೆಗಳು → ಉದಾ : ಸಕ್ಕರೆ ಕೈಗಾರಿಕೆ
- ಖನಿಜಾಧಾರಿತ ಕೈಗಾರಿಕೆಗಳು → ಉದಾ : ಕಬ್ಬಿಣ - ಉಕ್ಕು ಕೈಗಾರಿಕೆ
- ರಾಸಾಯನಿಕ ಆಧಾರಿತ ಕೈಗಾರಿಕೆಗಳು → ಉದಾ : ಪೆಟ್ರೋಕೆಮಿಕಲ್ ಕೈಗಾರಿಕೆ
- ಅರಣ್ಯಾಧಾರಿತ ಕೈಗಾರಿಕೆಗಳು → ಉದಾ : ಕಾಗದ ಕೈಗಾರಿಕೆ
- ಮೃಗಾಧಾರಿತ ಕೈಗಾರಿಕೆಗಳು → ಉದಾ : ಚರ್ಮ ಕೈಗಾರಿಕೆ

ವಿವಿಧ ರಾಜ್ಯಗಳಲ್ಲಾಗಿ ಹರಡಿರುವ ಪ್ರಧಾನ ಉತ್ಪಾದನಾ ಕೈಗಾರಿಕೆಗಳ ಭೂಪಟವನ್ನು ಕೆಳಗೆ ನೀಡಲಾಗಿದೆ.




*ಚಿತ್ರ 6.7 • ಭೂಪಟ*

*ಭೂಪಟವನ್ನು ನಿರೀಕ್ಷಿಸಿ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| *ಪ್ರಧಾನ ಉತ್ಪಾದನಾ ಕೈಗಾರಿಕೆಗಳು* | *ರಾಜ್ಯಗಳು* |
|---|---|
| • *ಕಬ್ಬಿಣ - ಉಕ್ಕು ಕೈಗಾರಿಕೆ* | • *ಒಡಿಶಾ, ಪಶ್ಚಿಮ ಬಂಗಾಳ, ಛತ್ತಿಸ್ ಗಢ* |
| • *ಹತ್ತಿ ಬಟ್ಟೆಯ ಕೈಗಾರಿಕೆ* | • |
| • *ಪೆಟ್ರೋ ಕೆಮಿಕಲ್ ಕೈಗಾರಿಕೆ* | • |
| • *ರೇಷ್ಮೆ ಬಟ್ಟೆ ಕೈಗಾರಿಕೆ* | • |

### ಬೃಹತ್ ಕೈಗಾರಿಕೆ

*ಕೈಗಾರಿಕೆಗಳಲ್ಲಿ ಬಳಸುವ ಬೃಹತ್ ಪ್ರಮಾಣದ ಕಚ್ಚಾವಸ್ತುಗಳು ಹಾಗೂ ಅದರಿಂದ ಉತ್ಪಾದಿಸಲ್ಪಡುವ ಉತ್ಪನ್ನಗಳ ಗಾತ್ರ ಮತ್ತು ಭಾರವು ಅಧಿಕವಾಗಿರುವುದರಿಂದ ಕಬ್ಬಿಣ - ಉಕ್ಕು ಕೈಗಾರಿಕೆಗಳನ್ನು ಬೃಹತ್ ಕೈಗಾರಿಕೆ (Heavy Industry) ಎಂದು ಕರೆಯುತ್ತಾರೆ.*

ನಾವು ಪರಿಚಯಿಸಿಕೊಂಡ ಖನಿಜ ಆಧಾರಿತ ಕೈಗಾರಿಕೆಗಳಲ್ಲಿ ಪ್ರಧಾನವಾದ ಕಬ್ಬಿಣ - ಉಕ್ಕು ಕೈಗಾರಿಕೆಯು ಕೈಗಾರಿಕಾ ಅಭಿವೃದ್ಧಿಯ ಅಡಿಪಾಯವಾಗಿದೆ. ಕಬ್ಬಿಣ - ಉಕ್ಕು ಕೈಗಾರಿಕೆಯು ಇತರ ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ವಸ್ತುಗಳು ಮತ್ತು ಉತ್ಪನ್ನಗಳನ್ನು ಒದಗಿಸುತ್ತದೆ. ಆದ್ದರಿಂದ ಕಬ್ಬಿಣ - ಉಕ್ಕು ಕೈಗಾರಿಕೆಯನ್ನು ಮೂಲಭೂತ ಕೈಗಾರಿಕೆ ಎಂದು ಕರೆಯುತ್ತಾರೆ. ಕಬ್ಬಿಣ - ಉಕ್ಕು ಕೈಗಾರಿಕೆಯನ್ನು ಬೃಹತ್ ಕೈಗಾರಿಕೆ ಎಂದೂ ಕರೆಯಲಾಗುತ್ತದೆ. ಭಾರತವು ಜಗತ್ತಿನಲ್ಲಿ ಅತಿ ಹೆಚ್ಚು ಕಬ್ಬಿಣ - ಉಕ್ಕು ಉತ್ಪಾದಿಸುವ ದೇಶಗಳಲ್ಲಿ ಒಂದಾಗಿದೆ.

## ಭಾರತದ ಕಬ್ಬಿಣ ಉಕ್ಕು ಕೈಗಾರಿಕೆ

ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಮಾನವ ಸಂಪನ್ಮೂಲಗಳ ಲಭ್ಯತೆಯು ಭಾರತದ ಕೈಗಾರಿಕಾ ಕ್ಷೇತ್ರದ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಪ್ರತಿಯೊಂದು ದೇಶದ ಕೈಗಾರಿಕಾ ಬೆಳವಣಿಗೆಯ ವ್ಯಾಪ್ತಿಯನ್ನು ಕಬ್ಬಿಣ - ಉಕ್ಕಿನ ಬಳಕೆಯ ಆಧಾರದಲ್ಲಿ ನಿರ್ಧರಿಸಲಾಗುತ್ತದೆ. ಕಬ್ಬಿಣ - ಉಕ್ಕು ಕೈಗಾರಿಕೆಯು ಇತರ ಕೈಗಾರಿಕಾ ವಲಯಗಳಿಗೆ ಹಾಗೂ ಸೇವಾ ವಲಯಗಳಿಗೆ ಬೆಂಬಲವನ್ನು ನೀಡುವುದರ ಮೂಲಕ ದೇಶದ ಆದಾಯವನ್ನು ಹೆಚ್ಚಿಸುತ್ತದೆ. ಅಲ್ಲದೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಜನರ ಜೀವನ ಮಟ್ಟವನ್ನು ಹೆಚ್ಚಿಸುತ್ತದೆ. ಈ ರೀತಿಯಲ್ಲಿ ಭಾರತದ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯಲ್ಲಿ ಕಬ್ಬಿಣ - ಉಕ್ಕು ಕೈಗಾರಿಕೆಯು ಪ್ರಧಾನ ಪಾತ್ರವಹಿಸುತ್ತದೆ.

*"ಕಬ್ಬಿಣ - ಉಕ್ಕು ಕೈಗಾರಿಕೆಯು ಭಾರತದ ಆರ್ಥಿಕ ವ್ಯವಸ್ಥೆಯ ಅಡಿಪಾಯವಾಗಿದೆ" ಚರ್ಚಿಸಿ ಟಿಪ್ಪಣಿ ಬರೆಯಿರಿ.*

### ಪಂಚವಾರ್ಷಿಕ ಯೋಜನೆ

*ಐದು ವರ್ಷಗಳ ಕಾಲಾವಧಿಯೊಳಗೆ ದೇಶದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗಾಗಿ ನಿಗದಿತ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಸರಕಾರವು ರೂಪಿಸಿದ ವ್ಯವಸ್ಥೆಯು ಪಂಚವಾರ್ಷಿಕ ಯೋಜನೆಯಾಗಿದೆ.*

ಪ್ರಾಚೀನ ಕಾಲದಿಂದಲೇ ಭಾರತೀಯರು ಲೋಹ ಸಂಸ್ಕರಣೆಯ ತಂತ್ರಜ್ಞಾನದ ತಿಳುವಳಿಕೆಯುಳ್ಳವರಾಗಿದ್ದರು. 1907ರಲ್ಲಿ ಟಾಟಾ ಅಯರ್ನ್ ಅಂಡ್ ಸ್ಟೀಲ್ ಕಂಪನಿಯನ್ನು ಸಾಕ್ಚಿಯಲ್ಲಿ (ಜಂಶದ್‌ಪುರ) ಸ್ಥಾಪಿಸುವುದರೊಂದಿಗೆ ಭಾರತದಲ್ಲಿ ಆಧುನಿಕ ಕಬ್ಬಿಣ - ಉಕ್ಕು ಕೈಗಾರಿಕೆಯು (TISCO) ಪ್ರಾರಂಭವಾಯಿತು. 1919ರಲ್ಲಿ ಪಶ್ಚಿಮ ಬಂಗಾಳದಲ್ಲಿ ಇಂಡಿಯನ್ ಅಯರ್ನ್ ಅಂಡ್ ಸ್ಟೀಲ್ ಕಂಪನಿ (IISCO) ಮತ್ತು 1923ರಲ್ಲಿ ಕರ್ನಾಟಕದಲ್ಲಿ ಮೈಸೂರ್ ಅಯರ್ನ್ ಅಂಡ್ ಸ್ಟೀಲ್ (ವಿಶ್ವೇಶ್ವರಯ್ಯ ಅಯರ್ನ್ ಅಂಡ್ ಸ್ಟೀಲ್) ಕಂಪನಿಯು ಅಸ್ತಿತ್ವಕ್ಕೆ ಬಂದುವು.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಕಬ್ಬಿಣ - ಉಕ್ಕು ಕೈಗಾರಿಕೆಯು ಕ್ಷಿಪ್ರವಾಗಿ ಬೆಳವಣಿಗೆ ಹೊಂದಿತು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೋವಿಯತ್ ಯೂನಿಯನ್, ಜರ್ಮನಿ ಮತ್ತು ಬ್ರಿಟನಿನ ನೆರವಿನಿಂದ ಭಿಲ್ಯಾ, ರೂರ್ಕೆಲ ಮತ್ತು ದುರ್ಗಾಪುರದಲ್ಲಿ ಮೂರು ಸಂಯೋಜಿತ ಕಬ್ಬಿಣ - ಉಕ್ಕು ಯೋಜನೆಗಳನ್ನು ಪ್ರಾರಂಭಿಸಲಾಯಿತು. ನಂತರ ಇವುಗಳ ನಿರ್ವಹಣಾ ಜವಾಬ್ದಾರಿಯನ್ನು ಸರಕಾರಿ ಸಂಸ್ಥೆಯಾದ ಸ್ಟೀಲ್ ಅಥೋರಿಟಿ ಆಫ್ ಇಂಡಿಯಾ (SAIL) ವು ವಹಿಸಿಕೊಂಡಿತು. ಭಾರತದ ಪ್ರಮುಖ ಕಬ್ಬಿಣ - ಉಕ್ಕು ಕೈಗಾರಿಕೆಗಳ ಭೂಪಟವನ್ನು ಕೊಡಲಾಗಿದೆ. ಭೂಪಟವನ್ನು ಗಮನಿಸಿರಿ.




*ಚಿತ್ರ 6.8 • ಭೂಪಟ*

*ನೀಡಿರುವ ಭೂಪಟದಿಂದ ಕಬ್ಬಿಣ - ಉಕ್ಕು ಕೈಗಾರಿಕೆ ಕೇಂದ್ರಗಳು ಹಾಗೂ ಅವುಗಳಿರುವ ರಾಜ್ಯಗಳನ್ನು ಕಂಡುಹಿಡಿಯಿರಿ.*

| ರಾಜ್ಯ | ಕಬ್ಬಿಣ - ಉಕ್ಕು ಕೈಗಾರಿಕಾ ಕೇಂದ್ರಗಳು |
|---|---|
| • *ಒಡಿಶಾ* | • *ರೂರ್ಕೆಲ, ಪಾರದ್ವೀಪ, ಕೆಂದುಝೂರ್‌ಗಡ್* |
| • | • |
| • | • |
| • | • |
| • | • |




*ಚಿತ್ರ 6.9 • ಭೂಪಟ*

ಒಡಿಶಾವು ಭಾರತದ ಪ್ರಧಾನ ಕಬ್ಬಿಣ ಉಕ್ಕು ಕೈಗಾರಿಕಾ ರಾಜ್ಯವಾಗಿದೆ ಎಂದು ನೀಡಿರುವ ಭೂಪಟದಿಂದ ತಿಳಿದಿರಲ್ಲವೇ. ಭಾರತದ ಇತರ ರಾಜ್ಯಗಳಿಗಿಂತ ಅಧಿಕವಾಗಿ ಒಡಿಶಾದಲ್ಲಿ ಕಬ್ಬಿಣ - ಉಕ್ಕು ಕೈಗಾರಿಕೆಗಳು ಅಭಿವೃದ್ಧಿ ಹೊಂದಲಿರುವ ಕಾರಣಗಳನ್ನು ಕೆಳಗೆ ಕೊಡಲಾಗಿದೆ.

ಒಡಿಶಾದ ಭೌಗೋಳಿಕ ಸ್ಥಾನ, ಖನಿಜ ಲಭ್ಯತೆ, ಜಲ ಲಭ್ಯತೆ ಎಂಬಿವುಗಳು ಕಬ್ಬಿಣ - ಉಕ್ಕು ಕೈಗಾರಿಕೆಗಳ ಬೆಳವಣಿಗೆಗೆ ಕಾರಣವಾದುವು. ಉನ್ನತ ಗುಣಮಟ್ಟವಿರುವ ಕಬ್ಬಿಣದ ಅದಿರಿನ ನಿಕ್ಷೇಪವು ಕಿಯೋಂಜರ್, ಸುಂದರ್‌ಗಡ್, ಮಯೂರ್‌ಭಂಜ್ ಜಿಲ್ಲೆಗಳಲ್ಲಿ ಮತ್ತು ಕಲ್ಲಿದ್ದಲು ತಾಲ್ಚರ್ ಪ್ರದೇಶಗಳಲ್ಲಿ ಕಂಡುಬರುತ್ತದೆ. ರೂರ್ಕೆಲ ಮತ್ತು ಕಳಿಂಗ ನಗರದ ಕೈಗಾರಿಕಾ ಕೇಂದ್ರಗಳನ್ನು ಭಾರತದ ಪ್ರಧಾನ ಮಾರುಕಟ್ಟೆಗಳೊಂದಿಗೆ ಜೋಡಿಸುವ ಅತ್ಯುತ್ತಮ ರೈಲ್ವೇಜಾಲ ಮತ್ತು ರಸ್ತೆ ಹೆದ್ದಾರಿಗಳು ಕೈಗಾರಿಕಾಭಿವೃದ್ಧಿಗೆ ಸಹಾಯಕವಾದವು. ಅದಲ್ಲದೆ ಉದ್ದವಾದ ಕರಾವಳಿ ಮತ್ತು ಬಂದರುಗಳು ಆಂತರಿಕ - ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಅನುಕೂಲವಾದ ಸನ್ನಿವೇಶಗಳನ್ನು ಒದಗಿಸಿದುವು. ಆದುದರಿಂದ ಒಡಿಶಾವು ಕಬ್ಬಿಣ - ಉಕ್ಕು ಕೈಗಾರಿಕೆಯ ಕೇಂದ್ರವಾಯಿತು.

## ಉತ್ಪಾದನಾ ಕೈಗಾರಿಕೆಗಳ ಹಂಚುವಿಕೆಯ ಮೇಲೆ ಪ್ರಭಾವ ಬೀರುವ ಘಟಕಗಳು

ಭೌಗೋಳಿಕ ಘಟಕಗಳು ಹಾಗೂ ಭೌಗೋಳಿಕವಲ್ಲದ ಘಟಕಗಳು ಉತ್ಪಾದನಾ ಕೈಗಾರಿಕೆಗಳ ಹಂಚುವಿಕೆಯ ಮೇಲೆ ಪ್ರಭಾವ ಬೀರುತ್ತವೆ.

**ಕೈಗಾರಿಕೆಗಳ ಹಂಚುವಿಕೆಯ ಮೇಲೆ ಪ್ರಭಾವ ಬೀರುವ ಘಟಕಗಳು**

| ಭೌಗೋಳಿಕ ಘಟಕಗಳು | ಭೌಗೋಳಿಕವಲ್ಲದ ಘಟಕಗಳು |
|---|---|
| ಭೂ ಸ್ವರೂಪ<br>ಹವಾಗುಣ<br>ನೀರು<br>ಚೈತನ್ಯ<br>ಕಚ್ಚಾ ವಸ್ತುಗಳು | ಬಂಡವಾಳ<br>ಸಂಘಟನೆ<br>ಮಾರುಕಟ್ಟೆ<br>ಸರಕಾರದ ನೀತಿಗಳು<br>ಸಾರಿಗೆ ವ್ಯವಸ್ಥೆ<br>ಕಾರ್ಮಿಕರ ಲಭ್ಯತೆ |



*ಚಿತ್ರ 6.10*

*ಟಾಟಾ ಕಬ್ಬಿಣ - ಉಕ್ಕು ಕಾರ್ಖಾನೆಯ ಮೇಲೆ ಪ್ರಭಾವ ಬೀರಿದ ಘಟಕಗಳನ್ನು ಚಿತ್ರದಿಂದ ಗುರುತಿಸಿರಿ.*

- *ಜಲ ಲಭ್ಯತೆ (ನದಿ)*
- *ಬಂದರಿನ ಸಾಮೀಪ್ಯ (ಕೋಲ್ಕತ್ತ)*
- *ಮಾರುಕಟ್ಟೆ (ಕೋಲ್ಕತ್ತ, ಮುಂಬೈ)*
- 
- 
- 

ಕಬ್ಬಿಣ - ಉಕ್ಕು ಕೈಗಾರಿಕೆಗಳಂತಹ ಉತ್ಪಾದನಾ ಕೈಗಾರಿಕೆಗಳು ಭಾರತದ ಆರ್ಥಿಕ ಬೆಳವಣಿಗೆಗೆ ಕಾರಣವಾಗುವುದರೊಂದಿಗೆ ಅನೇಕ ಸಾಮಾಜಿಕ ಮತ್ತು ಪರಿಸರ ಸಮಸ್ಯೆಗಳನ್ನೂ ಉಂಟುಮಾಡುತ್ತದೆ.




ಮೇಲೆ ನೀಡಿರುವ ಪತ್ರಿಕಾ ಶೀರ್ಷಿಕೆಗಳನ್ನು ಗಮನಿಸಿದಿರಲ್ಲವೇ? ಇವುಗಳು ಯಾವ ಯಾವ ಸಮಸ್ಯೆಗಳನ್ನು ಸೂಚಿಸುತ್ತವೆ?

- 
- 
- 

ಇವುಗಳೆಲ್ಲವೂ ಉತ್ಪಾದನಾ ಕೈಗಾರಿಕೆಗಳ ದುಷ್ಪರಿಣಾಮಗಳಾಗಿವೆ. ಇವುಗಳಲ್ಲಿ ಮಾಲಿನ್ಯವು ಅತ್ಯಂತ ಪ್ರಮುಖವಾದುದು.

## ಮಾಲಿನ್ಯ

ವಾಯು, ಜಲ, ನೆಲಗಳ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣವಿಶೇಷತೆಗಳಲ್ಲಿ ಉಂಟಾಗುವ ಹಾನಿಕಾರಕವಾದ ಬದಲಾವಣೆಯೇ ಮಾಲಿನ್ಯವಾಗಿದೆ. ಮಾನವನ



ಚಿತ್ರ 6.11 • ವಾಯು ಮಾಲಿನ್ಯ



ಚಿತ್ರ 6.12 • ಜಲ ಮಾಲಿನ್ಯ



ಚಿತ್ರ 6.13 • ಮಣ್ಣು ಮಾಲಿನ್ಯ



ಚಿತ್ರ 6.14 • ಶಬ್ದ ಮಾಲಿನ್ಯ

ಅವೈಜ್ಞಾನಿಕ ಹಸ್ತಕ್ಷೇಪಗಳು ಮಾಲಿನ್ಯಕ್ಕೆ ಕಾರಣವಾಗುತ್ತವೆ. ಇದು ಪ್ರಕೃತಿಯ ಸುಸ್ಥಿರತೆಗೆ ಧಕ್ಕೆಯೊಡ್ಡುತ್ತದೆ ಮತ್ತು ಪರಿಸರದ ಪುನರುತ್ಪಾದನಾ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ.

## ವಿವಿಧ ರೀತಿಯ ಮಾಲಿನ್ಯಗಳು

### ವಾಯುಮಾಲಿನ್ಯ

ಕೈಗಾರಿಕೆಗಳಿಂದ ಹೊರಸೂಸುವ ಹೊಗೆಯಲ್ಲಿ ಅಡಕವಾಗಿರುವ ಸಲ್ಫರ್ ಡೈ ಆಕ್ಸೈಡ್, ಕಾರ್ಬನ್ ಡೈ ಆಕ್ಸೈಡ್, ಕಾರ್ಬನ್ ಮೊನೋಕ್ಸೈಡ್, ಮೀಥೇನ್‌ನಂತಹ ವಿಷಕಾರಿ ಅನಿಲಗಳು ವಾತಾವರಣವನ್ನು ಕಲುಷಿತಗೊಳಿಸುತ್ತವೆ. ಇದು ಮಾನವರ ಆರೋಗ್ಯದ ಮತ್ತು ಪ್ರಕೃತಿಯ ಮೇಲೆ ಗಂಭೀರ ಅಪಾಯವನ್ನುಂಟುಮಾಡುತ್ತದೆ.

### ಜಲ ಮಾಲಿನ್ಯ

ಕೈಗಾರಿಕೆಗಳಿಂದ ಹೊರಸೂಸುವ ಕೊಳಚೆ ನೀರು ಮತ್ತು ರಾಸಾಯನಿಕ ಕೈಗಾರಿಕೆಗಳಿಂದ ಹೊರಸೂಸುವ ವಿಷಕಾರಿ ವಸ್ತುಗಳಿಂದ ನದಿಗಳು, ಸರೋವರಗಳು ಮತ್ತು ಇತರ ಜಲಮೂಲಗಳು ಕಲುಷಿತಗೊಳ್ಳುತ್ತವೆ. ಇದು ಜಲಚರಗಳ ಮತ್ತು ಮನುಷ್ಯರ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ.

### ಮಣ್ಣು ಮಾಲಿನ್ಯ

ಕೈಗಾರಿಕೆಗಳಿಂದ ಹೊರಸೂಸುವ ತ್ಯಾಜ್ಯಗಳು, ಇ-ವೇಸ್ಟ್ ಮೊದಲಾದವುಗಳು ಮಣ್ಣಿನ ನೈಸರ್ಗಿಕ ರಚನೆಯನ್ನು ಬದಲಾಯಿಸುತ್ತವೆ. ಇದು ಕೃಷಿ ಮತ್ತು ಪರಿಸರದ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ.

### ಶಬ್ದ ಮಾಲಿನ್ಯ

ಕೈಗಾರಿಕೆಗಳಿಂದ ಹೊರಸೂಸುವ ಅತಿಯಾದ ಶಬ್ದವು ಸುತ್ತುಮುತ್ತಲಿನ ಪ್ರದೇಶದ ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ.

*ಮಾಲಿನ್ಯ ಸಮಸ್ಯೆಗಳ ಕುರಿತು ಚರ್ಚಿಸಿ ಜಾಗೃತಿ ಮೂಡಿಸುವ ಚಟುವಟಿಕೆಗಳಿಗೆ ಅಗತ್ಯವಾದ ಪ್ಲಕಾರ್ಡ್, ಪೋಸ್ಟರ್, ಘೋಷಣ ಗೀತೆಗಳು ಎಂಬಿವುಗಳನ್ನು ತಯಾರಿಸಿರಿ.*



ಚಿತ್ರ 6.15 • ಬರಗಾಲ

## ಸಂಪನ್ಮೂಲಗಳ ಶೋಷಣೆ

ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಕೈಗಾರಿಕೆಗಳಲ್ಲಿ ಸಂಪನ್ಮೂಲಗಳ ಅವೈಜ್ಞಾನಿಕ ಬಳಕೆಯು ಸಂಪನ್ಮೂಲಗಳ ಶೋಷಣೆ ಮತ್ತು ಪರಿಸರ ಸಮಸ್ಯೆಗಳಿಗೆ ಕಾರಣವಾಗುತ್ತದೆ. ವನನಾಶ, ಮಣ್ಣಿನ ಫಲವತ್ತತೆ ನಷ್ಟವಾಗುವುದು, ಜಲಮೂಲಗಳ ಮತ್ತು ಖನಿಜ ಮೂಲಗಳ ಶೋಷಣೆ ಮೊದಲಾದವುಗಳು ಇದಕ್ಕೆ ಉದಾಹರಣೆಗಳಾಗಿವೆ.

## ಪ್ರಾದೇಶಿಕ ಅಸಮಾನತೆ

ಪ್ರಾಕೃತಿಕ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ ಮತ್ತು ಮೂಲಭೂತ ಸೌಕರ್ಯಗಳ ಅಭಾವ ಎಂಬಿವು ಕೈಗಾರಿಕಾ ಬೆಳವಣಿಗೆಯು ಕೇವಲ ಕೆಲವು ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿರಲು ಕಾರಣವಾಗುತ್ತದೆ. ಇಂತಹ ಪ್ರದೇಶಗಳಲ್ಲಿ ಜನರ ಆದಾಯ ಮತ್ತು ಜೀವನದ ಗುಣಮಟ್ಟದಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಕೈಗಾರಿಕೆಯಲ್ಲಿ ಹಿಂದುಳಿದಿರುವ ಪ್ರದೇಶಗಳಲ್ಲಿ ಇದು ಪ್ರಾದೇಶಿಕ ಅಸಮಾನತೆಗೆ ಕಾರಣವಾಗುತ್ತದೆ.



*ಚಿತ್ರ 6.16 • ವನನಾಶ*

## ವಲಸೆ

ವಲಸೆ ಎಂದರೆ ಜನರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸ್ಥಿರವಾಗಿ ಅಥವಾ ತಾತ್ಕಾಲಿಕವಾಗಿ ವಾಸಸ್ಥಳವನ್ನು ಬದಲಾಯಿಸುವುದಾಗಿದೆ. ಕಡಿಮೆ ಉದ್ಯೋಗ ಮತ್ತು ಉತ್ತಮ ಜೀವನ ನಿರ್ವಹಣೆಗಾಗಿ ಜನರು ಕಡಿಮೆ ಅಭಿವೃದ್ಧಿ ಹೊಂದಿದ ಪ್ರದೇಶಗಳಿಂದ ಅಭಿವೃದ್ಧಿ ಹೊಂದಿದ ಕೈಗಾರಿಕಾ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಇದರಿಂದಾಗಿ ಈ ಪ್ರದೇಶದಲ್ಲಿ ಜನಸಾಂದ್ರತೆ ಹೆಚ್ಚಾಗುತ್ತದೆ.



*ಚಿತ್ರ 6.17 • ವಲಸೆ*

## ನಗರೀಕರಣ

ಗ್ರಾಮಗಳಿಂದ ನಗರಗಳಿಗೆ ವಲಸೆ ಹೋಗುವುದು ಮತ್ತು ನಗರಗಳಲ್ಲಿ ಉಂಟಾಗುವ ಸಾಮಾನ್ಯ ಜನಸಂಖ್ಯಾ ಬೆಳವಣಿಗೆಯ ಫಲವಾಗಿ ನಗರದ ಗಾತ್ರ ಮತ್ತು ಜನಸಂಖ್ಯೆಯಲ್ಲಿ ಉಂಟಾಗುವ ಹೆಚ್ಚಳವನ್ನು ನಗರೀಕರಣ ಎನ್ನುತ್ತಾರೆ. ಇದು ನಗರಗಳ ಗಾತ್ರವನ್ನು ಹೆಚ್ಚಿಸಲು, ಜನಸಂಖ್ಯೆಯಲ್ಲಿ ಭಾರಿ ಹೆಚ್ಚಳ ಉಂಟಾಗಲು ಮತ್ತು ಸಾಮಾಜಿಕ - ಆರ್ಥಿಕ - ಪರಿಸರ ಬದಲಾವಣೆಗಳಿಗೆ ಕಾರಣವಾಗುತ್ತದೆ.



*ಚಿತ್ರ 6.18 • ನಗರೀಕರಣ*

> *'ಉತ್ಪಾದನಾ ಕೈಗಾರಿಕೆಗಳು : ಸಾಧ್ಯತೆಗಳು ಮತ್ತು ಪರಿಮಿತಿಗಳು' ಎಂಬ ವಿಷಯದಲ್ಲಿ ಚರ್ಚೆಯನ್ನು ಆಯೋಜಿಸಿರಿ.*

ಕೈಗಾರಿಕೆಗಳು ಉಂಟುಮಾಡುವ ವಿವಿಧ ರೀತಿಯ ಸಮಸ್ಯೆಗಳಲ್ಲಿ ಸಂಪನ್ಮೂಲಗಳ ಶೋಷಣೆಯು ಪ್ರಮುಖವಾಗಿದೆ ಎಂದು ತಿಳಿದಿರಲ್ಲವೇ. ವೈಜ್ಞಾನಿಕ ರೀತಿಯಲ್ಲಿ ಸಂಪನ್ಮೂಲಗಳನ್ನು ವಿನಿಯೋಗಿಸುವುದರ ಮೂಲಕ ಸಂಪನ್ಮೂಲಗಳ ಸಂರಕ್ಷಣೆ ಮಾಡಬಹುದು.

## ಸಂಪನ್ಮೂಲಗಳ ಸಂರಕ್ಷಣೆ

ವಿವೇಚನಾಯುಕ್ತ ಬಳಕೆಯ ಮೂಲಕ ಸಂಪನ್ಮೂಲಗಳ ಅತಿಯಾದ ಶೋಷಣೆಯನ್ನು ನಿವಾರಿಸುವ ಮೂಲಕ ಸಂಪನ್ಮೂಲಗಳ ಲಭ್ಯತೆಯನ್ನು ಖಾತರಿಪಡಿಸುವುದನ್ನು ಸಂಪನ್ಮೂಲ ಸಂರಕ್ಷಣೆ ಎಂದು ಕರೆಯುತ್ತಾರೆ. ಮುಂದಿನ ಪೀಳಿಗೆಗಾಗಿ ಸಂಪನ್ಮೂಲಗಳನ್ನು ಸಂರಕ್ಷಿಸುವುದು, ಪರಿಸರದ ಸಮತೋಲನವನ್ನು ಕಾಪಾಡುವುದು, ಪ್ರಕೃತಿ ಮತ್ತು ಮಾನವರಿಗೆ ಉಂಟಾಗುವ ಹಾನಿಗಳನ್ನು ಕಡಿಮೆಗೊಳಿಸುವುದು




*• ಚಿತ್ರ 6.19*

ಎಂಬಿವುಗಳು ಸಂಪನ್ಮೂಲ ಸಂರಕ್ಷಣೆಯ ಉದ್ದೇಶಗಳಾಗಿವೆ. ಪ್ರಧಾನ ಸಂಪನ್ಮೂಲ ಸಂರಕ್ಷಣಾ ಮಾರ್ಗಗಳು ಯಾವುವೆಂದು ತಿಳಿಯೋಣ.

- ಸಂಪನ್ಮೂಲಗಳ ಮರುಬಳಕೆ
- ಚೈತನ್ಯಗಳ ಸಂರಕ್ಷಣೆ
- 
- ಜಲ ಸಂರಕ್ಷಣೆ
- ಅರಣ್ಯ ಸಂರಕ್ಷಣೆ
- 

*ಸಂಪನ್ಮೂಲಗಳ ಸಂರಕ್ಷಣೆಗಾಗಿ ನಿಮಗೆ ಶಾಲೆಗಳಲ್ಲಿ ನಡೆಸಬಹುದಾದ ಚಟುವಟಿಕೆಗಳನ್ನು ಬೇರೆ ಬೇರೆ ಗುಂಪುಗಳಲ್ಲಿ ಚರ್ಚಿಸಿ ಆಶಯ ಭೂಪಟವನ್ನು ತಯಾರಿಸಿ ಮಂಡಿಸಿರಿ.*

ಪ್ರಾಕೃತಿಕ ಸಂಪನ್ಮೂಲಗಳ ಶೋಷಣೆಯನ್ನು ನಿಯಂತ್ರಿಸಲು ಹಾಗೂ ಮುಂದಿನ ಪೀಳಿಗೆಗೆ ಸಂಪನ್ಮೂಲಗಳ ಲಭ್ಯತೆಯನ್ನು ಖಾತರಿ ಪಡಿಸುವುದಕ್ಕಾಗಿ ಸಂಪನ್ಮೂಲ ಸಂರಕ್ಷಣೆ ಎಂಬ ಆಶಯವನ್ನು ಬಳಸುತ್ತೇವೆ. ಸುಸ್ಥಿರ ಅಭಿವೃದ್ಧಿಯು ಇಂದು ಪ್ರಸ್ತುತ ಜಾಗತಿಕ ರಾಷ್ಟ್ರಗಳು ಸಂಪನ್ಮೂಲಗಳ ಸಂರಕ್ಷಣೆಗಾಗಿ ಪಾಲಿಸುವ ನೀತಿಯಾಗಿದೆ.

## ಸುಸ್ಥಿರ ಅಭಿವೃದ್ಧಿ (Sustainable Development)




*ಚಿತ್ರ 6.20*

ಭವಿಷ್ಯದ ಪೀಳಿಗೆಯ ಆವಶ್ಯಕತೆಯನ್ನು ಪೂರೈಸಲು ಸಾಧ್ಯವಾಗುವಂತೆ, ಇಂದಿನ ಆವಶ್ಯಕತೆಗಳನ್ನು ಈಡೇರಿಸುವ ಅಭಿವೃದ್ಧಿಯು ಸುಸ್ಥಿರ ಅಭಿವೃದ್ಧಿಯಾಗಿದೆ. ಪರಿಸರ ಕ್ಷೇಮ ಮತ್ತು ಜನರ ಜೀವನಮಟ್ಟದೊಳಗಿನ ಸಮತೋಲನದ ಮೂಲಕ ಆರ್ಥಿಕ ಬೆಳವಣಿಗೆಯನ್ನು ಸಾಧಿಸಬಹುದು. ಸಂಪನ್ಮೂಲಗಳ ಪುನರ್ಬಳಕೆ, ಮಿತಬಳಕೆ ಮತ್ತು ಮರುಬಳಕೆಗಳು ಸುಸ್ಥಿರ ಅಭಿವೃದ್ಧಿಗಿರುವ ಕೆಲವು ಮಾರ್ಗಗಳಾಗಿವೆ. 2030 ರ ವೇಳೆಗೆ ಸುಸ್ಥಿರ ಅಭಿವೃದ್ಧಿಯನ್ನು ಗಳಿಸಬೇಕೆಂಬ ಉದ್ದೇಶದಿಂದ ವಿಶ್ವಸಂಸ್ಥೆಯು 2015 ರಲ್ಲಿ ಮುಂದಿರಿಸಿದ 17 ಗುರಿಗಳ ಸಂಗ್ರಹವೇ ಸುಸ್ಥಿರ ಅಭಿವೃದ್ಧಿಯ ಗುರಿಗಳಾಗಿವೆ.

## ಮುಂದುವರಿದ ಚಟುವಟಿಕೆಗಳು

- ಪ್ರಮುಖ ಖನಿಜಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಮ್ ತಯಾರಿಸಿರಿ.
- ನಿಮ್ಮ ಪ್ರದೇಶದಲ್ಲಿ ಮಾಲಿನ್ಯಗಳನ್ನು ತಡೆಗಟ್ಟುವ ಮಾರ್ಗಗಳ ಕುರಿತು ಮೂಡಿಸಲು ತರಗತಿಯೊಂದನ್ನು ಆಯೋಜಿಸಿರಿ.
- ಸಂಪನ್ಮೂಲಗಳನ್ನು ಸಂರಕ್ಷಿಸುವುದ ಕುರಿತು ಡಿಜಿಟಲ್ ಸಂಚಿಕೆಯೊಂದನ್ನು ತಯಾರಿಸಿರಿ.
- ನಿಮ್ಮ ಪ್ರದೇಶದಲ್ಲಿ ಸುಸ್ಥಿರ ಅಭಿವೃದ್ಧಿಯ ಕುರಿತು ಜನಜಾಗೃತಿ ಮೂಡಿಸಲು ತರಗತಿಯನ್ನು ಆಯೋಜಿಸಿರಿ.
- ಭಾರತದ ಖನಿಜ ಸಂಪನ್ಮೂಲಗಳು ಮತ್ತು ಉತ್ಪಾದನಾ ಕೈಗಾರಿಕೆಗಳ ಭೂಪಟವನ್ನು ತಯಾರಿಸಿ ನನ್ನ ಭೂಪಟ (my own atlas) ಸಂಗ್ರಹದಲ್ಲಿ ಸೇರಿಸಿರಿ.

ಅಧ್ಯಾಯ 7



# ಮಾಧ್ಯಮಗಳು ಮತ್ತು ಸಾಮಾಜಿಕ ಪ್ರತಿಫಲನಗಳು




*ಚಿತ್ರ 7.1*

ಚಿತ್ರವನ್ನು ನಿರೀಕ್ಷಿಸಿರಿ.

ಆಶಯ ವಿನಿಮಯಕ್ಕಾಗಿ ಉಪಯೋಗಿಸುವ ವಿವಿಧ ಮಾಧ್ಯಮಗಳನ್ನು ಚಿತ್ರದಲ್ಲಿ ನೀಡಲಾಗಿದೆ. ಪ್ರಾಚೀನ ಕಾಲದಿಂದಲೇ ಮಾನವನು ಆಶಯ ವಿನಿಮಯಕ್ಕಾಗಿ ವಿವಿಧ ವಿಧಾನಗಳನ್ನು ಉಪಯೋಗಿಸುತ್ತಿದ್ದನು. ಅನೇಕ ಜನರಿಗೆ ಏಕಕಾಲದಲ್ಲಿ ಆಶಯ ವಿನಿಮಯ ನಡೆಸಲು ಸಾಧ್ಯವಾಗುವ ವಿವಿಧ ರೂಪಗಳೇ ಸಮೂಹ ಮಾಧ್ಯಮಗಳು (Mass Media). ಪತ್ರಿಕೆಗಳು, ಮಾಸಿಕಗಳು, ರೇಡಿಯೋ, ದೂರದರ್ಶನ, ಅಂತರ್ಜಾಲ ಮತ್ತು ಇತರ ಸಾಮಾಜಿಕ ಮಾಧ್ಯಮಗಳು ಇದರಲ್ಲಿ ಒಳಗೊಳ್ಳುತ್ತವೆ.

*ಸಂವಹನ ಮಾಧ್ಯಮ ಎಂಬ ನೆಲೆಯಲ್ಲಿ ವಿವಿಧ ಮಾಧ್ಯಮಗಳಲ್ಲಿ ಒಳಗೊಳ್ಳುವ ವಿಚಾರಗಳನ್ನು ಸೂಚಿಸುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ಮುದ್ರಣ ಮಾಧ್ಯಮಗಳು | ರೇಡಿಯೋ | ದೂರದರ್ಶನ | ಅಂತರ್ಜಾಲ |
|---|---|---|---|
| • ವಾರ್ತೆಗಳು<br>• ಲೇಖನಗಳು<br>•<br>• | • ಸೂಚನೆಗಳು<br>• ಹವಾಮಾನ ಮುನ್ಸೂಚನೆಗಳು<br>•<br>• | • ಮನೋರಂಜನಾ ಕಾರ್ಯಕ್ರಮಗಳು<br>• ಚಲನಚಿತ್ರ<br>•<br>• | • ಆನ್‌ಲೈನ್ ವಾರ್ತೆಗಳು<br>• ಇ- ಕಾಮರ್ಸ್<br>•<br>• |



*ಚಿತ್ರ 7.2* •



*ಚಿತ್ರ 7.3* •

ಜನರಲ್ಲಿ ಓದು ಮತ್ತು ಬರವಣಿಗೆಯ ಸಾಮರ್ಥ್ಯಗಳನ್ನು ಬೆಳೆಸುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸುತ್ತವೆ. ಪತ್ರಿಕೆಗಳು, ಮಾಸಿಕಗಳು, ಬ್ಲಾಗುಗಳು, ಸಾಮಾಜಿಕ ಮಾಧ್ಯಮಗಳು ಇತ್ಯಾದಿಗಳ ಮೂಲಕ ಜನರು ಲಿಖಿತಭಾಷೆಯೊಂದಿಗೆ ಸಂಪರ್ಕ ಬೆಳೆಸುತ್ತಾರೆ. ಇದು ಓದುವಿಕೆಯನ್ನು ಪ್ರೋತ್ಸಾಹಿಸುತ್ತದೆ. ಸಾಮಾಜಿಕ ಮಾಧ್ಯಮಗಳು, ಬ್ಲಾಗುಗಳು, ಆನ್ಲೈನ್ ವೇದಿಕೆ ಇತ್ಯಾದಿ ಸೂಕ್ಷ್ಮ ವೇದಿಕೆಗಳು (Sensitive Platforms) ಜನರಿಗೆ ಅವರ ಚಿಂತನೆಗಳನ್ನು ಪ್ರಕಟಪಡಿಸಲು ಮತ್ತು ಹಂಚಿಕೊಳ್ಳಲು ಸಹಾಯ ಮಾಡುತ್ತವೆ. ಮಾಧ್ಯಮಗಳು, ವಾಚನಾಲಯಗಳು, ಪುಸ್ತಕ ಕ್ಲಬ್ ಗಳು, ಆನ್ಲೈನ್ ಬರಹ ಕೂಟಗಳು ಇವೇ ಮೊದಲಾದವುಗಳು ಓದುವಿಕೆ, ಬರವಣಿಗೆಯ ಮತ್ತು ಸಂಸ್ಕೃತಿಯನ್ನು ಬೆಳೆಸುತ್ತವೆ. ವಿವಿಧ ಸಾಕ್ಷರತಾ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸಲು ಮತ್ತು ಜಾಗೃತಿ ಮೂಡಿಸಲು ಸಾಧ್ಯವಾಗುವುದರ ಮೂಲಕ ಮಾಧ್ಯಮಗಳು ಸಾಮಾಜಿಕ ಅಭಿವೃದ್ಧಿಗೆ ಉತ್ತೇಜನ ನೀಡುತ್ತವೆ. ಮುದ್ರಣ ಮಾಧ್ಯಮಗಳಿಂದ ಡಿಜಿಟಲ್ ಮಾಧ್ಯಮಗಳ ಕಡೆಗಿರುವ ಅಭಿವೃದ್ಧಿಗೆ ತಂತ್ರಜ್ಞಾನದ ಬೆಳವಣಿಗೆಯು ಕಾರಣವಾಯಿತು.

## ಮಾಧ್ಯಮಗಳ ವಿವಿಧ ರೂಪಗಳು

ಮಾಧ್ಯಮಗಳು ಸಾಮಾಜಿಕ ಸಂಬಂಧಗಳನ್ನು ರೂಪುಗೊಳಿಸಲು ಮತ್ತು ಜನರಿಗೆ ಸಮಾಜದೊಂದಿಗಿರುವ ಪರಸ್ಪರ ಸಂವಹನವನ್ನು (Interaction) ದೃಢಪಡಿಸುವುದಕ್ಕಿರುವ ಪ್ರಧಾನ ಆಶಯ ವಿನಿಮಯ ಮಾರ್ಗಗಳಾಗಿವೆ. ಇವು ಸಾಮಾಜಿಕ ಬದುಕಿನಲ್ಲಿ ಜನರಿಗೆ, ಸಂಘಟನೆಗಳಿಗೆ ಮತ್ತು ಸಂಸ್ಥೆಗಳಿಗೆ ಭಾಗಿಯಾಗಲು ಸಾಧ್ಯವಾಗುವ ವಿನಿಮಯ ವೇದಿಕೆಗಳಾಗಿವೆ. ಬಳಕೆಯ ಆಧಾರದಲ್ಲಿ ಮಾಧ್ಯಮಗಳನ್ನು ಹಲವು ರೀತಿಯಲ್ಲಿ ವಿಭಾಗಿಸಬಹುದು.



*ಚಿತ್ರ 7.4* • *ಪ್ರಿಂಟಿಂಗ್ ಪ್ರೆಸ್*

### 1. ಮುದ್ರಣ ಮಾಧ್ಯಮಗಳು (Print Media)

ಶಾಲಾ ಗ್ರಂಥಾಲಯದಲ್ಲಿರುವ ಸಂಚಿಕೆಗಳನ್ನು ನೀವು ಓದುತ್ತೀರಾ?

ನಿಮಗೆ ಅತ್ಯಂತ ಹೆಚ್ಚು ಇಷ್ಟವಾದ ಸಂಚಿಕೆಗಳು ಯಾವುವು?

•　　　　•

ಪತ್ರಿಕೆಗಳು, ಮಾಸಿಕಗಳು, ಪುಸ್ತಕಗಳು ಮೊದಲಾದ ಮುದ್ರಣ ಮಾಧ್ಯಮಗಳ ಮಹತ್ವವು ಡಿಜಿಟಲ್ ಯುಗದಲ್ಲಿಯೂ ಹಿರಿದಾಗಿದೆ. ಇವು ಸಮಗ್ರವಾದ ವಾರ್ತೆಗಳು, ಲೇಖನಗಳು, ಸಾಹಿತ್ಯ ರಚನೆಗಳು ಇತ್ಯಾದಿಗಳನ್ನು ಸಮಾಜಕ್ಕೆ ನೀಡುತ್ತವೆ. ವಿಶ್ವಾಸಾರ್ಹವಾದ ಮತ್ತು ಆಳವಾದ ವಾಚನಾನುಭವವು ಮುದ್ರಣ ಮಾಧ್ಯಮಗಳ ಮೂಲಕ ಲಭಿಸುತ್ತದೆ. ಇವುಗಳನ್ನು ಜಾಗ್ರತೆಯಿಂದ ತೆಗೆದಿರಿಸಿದರೆ ಪುನರ್ ವಾಚನಕ್ಕೆ ಸಹಾಯಕವಾಗುತ್ತವೆ. ಮುದ್ರಣ ಮಾಧ್ಯಮಗಳಿಂದ ವಾಚಕರವರೆಗೆ ಮಾತ್ರ ಆಶಯವಿನಿಮಯ ಸಾಧ್ಯವಾಗುತ್ತದೆ.

*ನಿಯತಕಾಲಿಕ ಮಾಧ್ಯಮಗಳಲ್ಲಿ ಬಂದಿರುವ ಯಾವುದಾದರೂ ವಾರ್ತೆ ಅಥವಾ ಲೇಖನಗಳ ಕುರಿತು ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಸಂಪಾದಕರಿಗೆ ಒಂದು ಪತ್ರ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.*

## 2. ಪ್ರಸಾರ ಮಾಧ್ಯಮಗಳು (Broadcast Media)




*ಚಿತ್ರ 7.5*

ಮೇಲೆ ಕೊಡಲಾದ ಚಿತ್ರವು ಪ್ರಸಾರ ಮಾಧ್ಯಮಗಳು ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದನ್ನು ಸೂಚಿಸುವುದಾಗಿದೆ. ರೇಡಿಯೋ, ದೂರದರ್ಶನದಂತಹ ಪ್ರಸಾರ ಮಾಧ್ಯಮಗಳು ಹೆಚ್ಚಿನ ಸಂಖ್ಯೆಯ ಜನರಿಗೆ ಏಕಕಾಲದಲ್ಲಿ ಆಶಯಗಳನ್ನು ತಲುಪಿಸುತ್ತವೆ. ಇದರಲ್ಲಿ ಆಶಯ ವಿನಿಮಯವು ಏಕಮುಖವಾಗಿರುತ್ತದೆ. ಪ್ರಸಾರ ಕಾರ್ಯಕ್ರಮಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಸಮಯಾವಧಿ ಹೆಚ್ಚು ಬೇಕಾಗುವುದರಿಂದ ಇವುಗಳಲ್ಲಿ ಸಂವಹನ ಸಾಧ್ಯತೆ ಪರಿಮಿತವಾಗಿದೆ.

ವಾರ್ತೆ, ಸಂಗೀತ, ಚರ್ಚೆ, ಸಂವಾದ, ಕ್ರೀಡಾವಿನೋದ ಮೊದಲಾದವುಗಳು ಪ್ರಸಾರ ಮಾಧ್ಯಮಗಳ ಮೂಲಕ ಲಭಿಸುತ್ತವೆ. ಡಿಜಿಟಲ್ ವೇದಿಕೆಗಳು ಅಭಿವೃದ್ಧಿಯಾಗುತ್ತಿದ್ದರೂ ಪ್ರಸಾರ ಮಾಧ್ಯಮಗಳು ಬಹುಪಾಲು ಜನರ ಮೇಲೆ ಪ್ರಭಾವ ಬೀರುತ್ತವೆ ಹಾಗೂ ಸಾರ್ವಜನಿಕ ಅಭಿಪ್ರಾಯ ರೂಪೀಕರಣಕ್ಕೆ ಸಹಾಯಕವಾಗುತ್ತವೆ.

ರೇಡಿಯೋ, ದೂರದರ್ಶನ ಕಾರ್ಯಕ್ರಮಗಳ ಕುರಿತಾದ ನಿಮ್ಮ ಅಭಿಪ್ರಾಯವನ್ನು ಪ್ರಸಾರ ಮಾಡುವವರಿಗೆ ಯಾವ ರೀತಿಯಲ್ಲಿ ತಿಳಿಸಬಹುದು?

- ಪತ್ರಗಳ ಮೂಲಕ
- 
- 

## 3. ಡಿಜಿಟಲ್ ಮಾಧ್ಯಮಗಳು (Digital Media)







*ಚಿತ್ರ 7.6*

ರಾಜ್ಯ ಶಿಕ್ಷಣ ಸಂಶೋಧನಾ ತರಬೇತಿ ಸಮಿತಿ (SCERT) ಯ ಮತ್ತು ಸಮಗ್ರ ಪೋರ್ಟಲಿನ ಹೋಂ ಪೇಜಿನ ಚಿತ್ರಗಳನ್ನು ಮೇಲೆ ನೀಡಲಾಗಿದೆ. ನೀವು 'ಸಮಗ್ರ' ಪೋರ್ಟಲ್ ಉಪಯೋಗಿಸುತ್ತೀರಲ್ಲವೇ? ಅದರ ವಿಶೇಷತೆಗಳು ಯಾವುವು?

- 
- 

ನಿಮ್ಮ ಕಲಿಕಾ ಚಟುವಟಿಕೆಗಳಿಗೆ ಯಾವ ರೀತಿಯ ಬೆಂಬಲವನ್ನು ಅದು ನೀಡುತ್ತದೆ?

- 
- 

ಅಂತರ್ಜಾಲದ ಆಗಮನದೊಂದಿಗೆ ಕ್ರಾಂತಿಕಾರಿಯಾದ ಹಲವು ಬದಲಾವಣೆಗಳು ಉಂಟಾಗುವುದರೊಂದಿಗೆ ಡಿಜಿಟಲ್ ವೇದಿಕೆಗಳು ಅಸ್ತಿತ್ವಕ್ಕೆ ಬಂದುವು.ವೆಬ್ ಸೈಟುಗಳು, ಆನ್ಲೈನ್ ವಾರ್ತೆಗಳು, ಬ್ಲಾಗ್ ಎಂಬಿವುಗಳು ಮಾಹಿತಿಗಳನ್ನು ಜನರಿಗೆ ನೇರಪ್ರಸಾರ ಮಾಡಲು ಪ್ರಾರಂಭಿಸಿದುವು. ಇದರೊಂದಿಗೆ ಮಾಧ್ಯಮಗಳ ಮೂಲಕ ಸಾಮಾಜಿಕ ಸಂವಹನವು (Social Interaction) ಹೆಚ್ಚಾಯಿತು. ಮಾಹಿತಿಗಳ ವಿಷಯಗಳನ್ನು ಹಂಚಿಕೊಳ್ಳಲು ಮತ್ತು ಚರ್ಚಿಸಲು ಇವುಗಳು ಸಂದರ್ಭವನ್ನು ಒದಗಿಸಿದವು.

*ಶಿಕ್ಷಣಕ್ಕೆ ಸಂಬಂಧಿಸಿದ ಬ್ಲಾಗ್‌ಗಳನ್ನು ನೀವು ವೀಕ್ಷಿಸುತ್ತೀರಾ? ಇತ್ತೀಚೆಗೆ ನೀವು ಸಂದರ್ಶಿಸಿದ ಪ್ರಧಾನವಾದ ಶೈಕ್ಷಣಿಕ ವೆಬ್‌ಸೈಟ್ ಯಾವುದು? ಅವುಗಳಲ್ಲಿ ನಿಮ್ಮ ಮೇಲೆ ಪ್ರಭಾವ ಬೀರಿದ ಘಟಕಗಳು ಯಾವುವು? ತರಗತಿಯಲ್ಲಿ ಚರ್ಚಿಸಿರಿ.*

## 4. ಸಾಮಾಜಿಕ ಮಾಧ್ಯಮಗಳು (Social Media)




*ಚಿತ್ರ 7.7*

ಆನ್ಲೈನ್ ಸೆಮಿನಾರಿನ ಕುರಿತು ಸಾಮಾಜಿಕ ಮಾಧ್ಯಮದ ಮೂಲಕ ಕ್ಲಾಸ್ ಟೀಚರ್ ವಿದ್ಯಾರ್ಥಿಗಳಿಗೆ ಸೂಚನೆ ನೀಡಿದ್ದನ್ನು ಮತ್ತು ವಿದ್ಯಾರ್ಥಿಗಳು ಅದಕ್ಕೆ ಪ್ರತಿಕ್ರಿಯೆ ನೀಡಿದ್ದನ್ನು ಗಮನಿಸಿದಿರಲ್ಲವೇ.

ಸಾಮಾಜಿಕ ಮಾಧ್ಯಮಗಳು ನಿಮ್ಮ ಕಲಿಕೆಯ ಅಗತ್ಯಗಳಿಗೆ ಯಾವ ಯಾವ ರೀತಿಯಲ್ಲಿ ಬೆಂಬಲ ನೀಡುತ್ತವೆ?

- ಕಲಿಕಾ ಸಂಪನ್ಮೂಲಗಳನ್ನು ಹಂಚಿಕೊಳ್ಳುವುದು
- 
- 

ವಿವಿಧ ಸಾಮಾಜಿಕ ಮಾಧ್ಯಮಗಳು ಆಧುನಿಕ ಜನಜೀವನದ ಅವಿಭಾಜ್ಯ ಘಟಕವಾಗಿ ಬದಲಾಗಿದೆ. ವ್ಯಕ್ತಿಗಳೊಳಗಿನ ಪರಸ್ಪರ ಸಂಬಂಧಗಳು (Interpersonal relationship) ಮತ್ತು ಸಾಮಾಜಿಕ ಸಂವಹನವು ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸಾಮಾಜಿಕ ಮಾಧ್ಯಮಗಳು ಬರಹ (Text), ಚಿತ್ರಗಳು, ವಿಡಿಯೋಗಳಂತಹ ವಿಷಯಗಳನ್ನು ತಯಾರಿಸಲು, ಹಂಚಿಕೊಳ್ಳಲು, ಸಂಭಾಷಣೆ ನಡೆಸಲು ಬಳಕೆದಾರರಿಗೆ ಅನುಮತಿ ನೀಡುವ ಆನ್ಲೈನ್ ವೇದಿಕೆಗಳಾಗಿವೆ. ನೇರವಾಗಿ ಸಂದೇಶ ಕಳುಹಿಸುವುದು, ಅಭಿಪ್ರಾಯ ವ್ಯಕ್ತಪಡಿಸುವುದು, ಸಾರ್ವಜನಿಕ ಸಹಭಾಗಿತ್ವ ಮೊದಲಾದ ವಿವಿಧ ಆಶಯ ವಿನಿಮಯ ರೂಪಗಳ ಮೂಲಕ ಸಾಮಾಜಿಕ ಸಂಬಂಧ ಮತ್ತು ಸಾಮಾಜಿಕ

ಒಕ್ಕೂಟಗಳನ್ನು ಸುಗಮಗೊಳಿಸುತ್ತದೆ.ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವಲ್ಲಿ, ಸಾಮಾಜಿಕ ಸಂವಹನವನ್ನು ಪ್ರೋತ್ಸಾಹಿಸುವುದರಲ್ಲಿ, ಸಂಸ್ಕೃತಿ ಹಾಗೂ ರಾಜಕೀಯ ಪಕ್ಷಗಳ ಮೇಲೆ ಪ್ರಭಾವ ಬೀರುವುದರಲ್ಲಿ ಸಾಮಾಜಿಕ ಮಾಧ್ಯಮಗಳು ಪ್ರಧಾನ ಪಾತ್ರ ವಹಿಸುತ್ತವೆ.

*ಮಾಧ್ಯಮಗಳ ಅಭಿವೃದ್ಧಿ ಮತ್ತು ವಿಕಾಸವನ್ನು ಸೂಚಿಸುವ ಬಿತ್ತಿಪತ್ರಿಕೆಯನ್ನು ತಯಾರಿಸಿ ಸಮಾಜಶಾಸ್ತ್ರ ಕ್ಲಬ್‌ನಲ್ಲಿ ಮಂಡಿಸಿರಿ.*

ಮುದ್ರಣ ಮಾಧ್ಯಮಗಳು ಮತ್ತು ಪ್ರಸಾರ ಮಾಧ್ಯಮಗಳು ಪರಂಪರಾಗತ ಮಾಧ್ಯಮಗಳಾಗಿವೆ. ಒಂದೇ ದಿಕ್ಕಿಗೆ ವಿನಿಮಯ ಸಾಧ್ಯವಾಗುವುದರಿಂದ ಇವುಗಳ ಸಂವಹನ ಸಾಧ್ಯತೆಯು ಪರಿಮಿತವಾಗಿದೆ. ಆದರೆ ಡಿಜಿಟಲ್ ಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮಗಳು ನವಮಾಧ್ಯಮಗಳಾಗಿವೆ. ಇವುಗಳಿಂದ ಎರಡೂ ದಿಶೆಗಳಿಗೆ ಸುಗಮವಾದ ಸಂವಹನ ಸಾಧ್ಯವಾಗುತ್ತದೆ.

**ಮಾಧ್ಯಮಗಳ ವಿವಿಧ ರೂಪಗಳು**

**ಪರಂಪರಾಗತ ಮಾಧ್ಯಮಗಳು**

- **ಮುದ್ರಣ ಮಾಧ್ಯಮಗಳು**
  ಪತ್ರಿಕೆ, ಪುಸ್ತಕಗಳು ಇತ್ಯಾದಿ
- **ಪ್ರಸಾರ ಮಾಧ್ಯಮಗಳು**
  ರೇಡಿಯೋ, ದೂರದರ್ಶನ ಇತ್ಯಾದಿ

**ನವಮಾಧ್ಯಮಗಳು**

- **ಡಿಜಿಟಲ್ ಮಾಧ್ಯಮಗಳು**
  ವೆಬ್‌ಸೈಟ್, ಆನ್ಲೈನ್ ವಾರ್ತೆಗಳು, ಬ್ಲಾಗ್‌ಗಳು ಇತ್ಯಾದಿ
- **ಸಾಮಾಜಿಕ ಮಾಧ್ಯಮಗಳು**
  ಫೋಟೋ - ವಿಡಿಯೋ ಹಂಚಿಕೊಳ್ಳುವ ವೇದಿಕೆಗಳು, ಆನ್ಲೈನ್ ಚರ್ಚಾ ವೇದಿಕೆಗಳು ಇತ್ಯಾದಿ

*ವಿವಿಧ ಮಾಧ್ಯಮರೂಪಗಳ (ಪತ್ರಿಕೆ, ಮಾಸಿಕ, ರೇಡಿಯೋ, ದೂರದರ್ಶನ, ವೆಬ್ ಸೈಟ್, ಸಾಮಾಜಿಕ ಮಾಧ್ಯಮಗಳು) ಹೆಸರುಗಳನ್ನು ಬರೆದ ಚೀಟಿಗಳನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿರಿ. ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳಾಗಿ ಮಾಡಿ ಪ್ರತಿಯೊಂದು ಗುಂಪು ವಿವಿಧ ಮಾಧ್ಯಮ ರೂಪಗಳನ್ನು ಆಯ್ಕೆ ಮಾಡಲಿ. ಕೆಳಗೆ ನೀಡಿರುವ ಸೂಚನೆಗಳನ್ನು ಪ್ರತಿಯೊಂದು ಮಾಧ್ಯಮಗಳು ಯಾವ ರೀತಿಯಲ್ಲಿ ಮಂಡಿಸುತ್ತವೆಯೆಂದು ಕಂಡುಕೊಳ್ಳಿರಿ.*

- *ಪ್ರಾದೇಶಿಕ /ರಾಷ್ಟ್ರೀಯ /ಅಂತಾರಾಷ್ಟ್ರೀಯ ವಾರ್ತೆ*
- *ಮನೋರಂಜನೆ*
- *ವಿಜ್ಞಾನ*
- *ಜಾಹೀರಾತುಗಳು*
- *ಕ್ರೀಡೆ*
- *ಕಲೆಗಳು*

*ಪ್ರತಿಯೊಂದು ಮಾಧ್ಯಮಗಳಲ್ಲಿ ಪ್ರೇಕ್ಷಕರು ಪ್ರತಿಕ್ರಿಯೆಗಳನ್ನು ಪ್ರಕಟಿಸುವ ರೀತಿಯನ್ನು ಕೂಡ ಕಂಡುಕೊಂಡು ಅದರ ಆಧಾರದಲ್ಲಿ ಮಂಡಿಸಿರಿ.*

ಚಟುವಟಿಕೆಗಳ ಕಂಡುಕೊಳ್ಳುವಿಕೆಯ ಆಧಾರದಲ್ಲಿ ಪರಂಪರಾಗತ ಮಾಧ್ಯಮಗಳು ಮತ್ತು ನವಮಾಧ್ಯಮಗಳು ಹೇಗೆ ಭಿನ್ನವಾಗಿವೆ ಎಂದು ಪರಿಶೀಲಿಸುವ.

ಹೆಚ್ಚಿನ ವ್ಯತ್ಯಾಸಗಳನ್ನು ಕಂಡುಕೊಂಡು ಸೇರಿಸಿರಿ.

| ವಿಶೇಷತೆಗಳು | ಪರಂಪರಾಗತ ಮಾಧ್ಯಮಗಳು | ನವ ಮಾಧ್ಯಮಗಳು |
|---|---|---|
| ಆಶಯ ವಿನಿಮಯ | ಏಕಮುಖಿ ಆಶಯ ವಿನಿಮಯ. (ವಿನಿಮಯ ಮಾಡುವವರಿಂದ ಸ್ವೀಕರಿಸುವವರಿಗೆ ಮಾತ್ರ) | ಎರಡೂ ದಿಶೆಗಳಲ್ಲಿನ ಆಶಯ ವಿನಿಮಯ (ವಿನಿಮಯ ಮಾಡುವವರು ಮತ್ತು ಸ್ವೀಕರಿಸುವವರ ಮಧ್ಯೆ) |
| ಸಂವಹನ | ಸಂವಹನ ಪರಿಮಿತ | ಹೆಚ್ಚಿನ ಸಂವಹನ ಮತ್ತು ಭಾಗವಹಿಸುವಿಕೆ |
| ರೂಪ | ಭೌತಿಕ ರೂಪ (ಪತ್ರಿಕೆ, ರೇಡಿಯೋ, ದೂರದರ್ಶನ) | ಡಿಜಿಟಲ್ ರೂಪ (ಇಂಟರ್ನೆಟ್ ಸೌಕರ್ಯವಿರುವ ಉಪಕರಣಗಳು) |
| ಸ್ವೀಕರಿಸುವವರು | ಪರಿಮಿತವಾದ ಭಾಗವಹಿಸುವಿಕೆ | ಕ್ರಿಯಾತ್ಮಕ ಭಾಗವಹಿಸುವಿಕೆ |
| ಲಭ್ಯತೆ | ಸ್ಥಳ, ಸಮಯ ಪರಿಮಿತಿಗಳು ಇರುವುದರಿಂದ ಯಾವಾಗಲೂ ಲಭಿಸುವುದಿಲ್ಲ. | ಸ್ಥಳ, ಸಮಯ ಪರಿಮಿತಿಗಳಿಲ್ಲದೆ ಅಂತಾರಾಷ್ಟ್ರೀಯವಾಗಿಯೂ ಲಭಿಸುತ್ತದೆ. |
| • | • | • |
| • | • | • |

ಸಾರ್ವಜನಿಕ ಅಭಿಪ್ರಾಯ, ಸಾಮಾಜಿಕ ರೂಢಿಗಳು, ಸಾಂಸ್ಕೃತಿಕ ಮೌಲ್ಯಗಳು ಇತ್ಯಾದಿಗಳ ಮೇಲೆ ಪ್ರಭಾವ ಬೀರುತ್ತಾ ಸಮಾಜವನ್ನು ರೂಪಿಸುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸುತ್ತವೆ. ಪತ್ರಿಕೆಗಳು, ರೇಡಿಯೋ, ದೂರದರ್ಶನ ಎಂಬೀ ಪರಂಪರಾಗತ ಮಾಧ್ಯಮಗಳು ವಿನೋದ, ಮಾಹಿತಿವಿನಿಮಯ, ವಿಜ್ಞಾನ ಇತ್ಯಾದಿಗಳನ್ನು ಸಾಧ್ಯವಾಗಿಸುತ್ತವೆ. ಅದೇ ವೇಳೆ ನವಮಾಧ್ಯಮಗಳು ಹೆಚ್ಚಿನ ಆಶಯ ವಿನಿಮಯ ಸಾಧ್ಯವಾಗಿಸುವುದಲ್ಲದೆ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುತ್ತವೆ.

ಸಾಮಾಜಿಕ ಮಾಧ್ಯಮಗಳ ಸಹಭಾಗಿತ್ವವು ವ್ಯಕ್ತಿಗಳೊಳಗಿನ ಸಂಬಂಧದ ಮೇಲೆ ಗುಣಾತ್ಮಕವಾದ ಪ್ರಭಾವ ಬೀರುತ್ತಿದೆ. ಆದರೆ ಅವು ಸಮಾಜದಲ್ಲಿ ಗುಣಾತ್ಮಕವಲ್ಲದ ಸನ್ನಿವೇಶಗಳನ್ನೂ ಸೃಷ್ಟಿಸುವುದಾಗಿ ಸಮಾಜಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಹ್ರಸ್ವವಾದ ಸಂವಹನದಲ್ಲಿ ಏರ್ಪಡಲು ಸಾಮೂಹಿಕ ಮಾಧ್ಯಮಗಳ ಮೂಲಕ ಸಾಧ್ಯವಾಗುವುದಾದರೂ ಅರ್ಥಪೂರ್ಣವಾದ, ಆಳವಾದ, ದೃಢವಾದ ಸಂಬಂಧಗಳನ್ನು ಉಂಟುಮಾಡುವಲ್ಲಿ ಅವು ಪರಾಜಯಗೊಳ್ಳುತ್ತವೆ.



*ಚಿತ್ರ 7.8*

ಸಾಮಾಜಿಕ ಮಾಧ್ಯಮಗಳ ಅಮಿತ ಉಪಯೋಗವು ಸೃಷ್ಟಿಸುವ ಹೆಚ್ಚಿನ ಸಮಸ್ಯೆಗಳನ್ನು ಕಂಡುಕೊಂಡು ಬರೆಯಿರಿ.

- ವಿದ್ಯಾರ್ಥಿಗಳ ಕಲಿಕೆಯನ್ನು ಮತ್ತು ದೈಹಿಕ - ಮಾನಸಿಕ ಆರೋಗ್ಯವನ್ನು ಪ್ರತಿಕೂಲವಾಗಿ ಬಾಧಿಸುತ್ತದೆ.
- ಅನಿಯಂತ್ರಿತ ಉಪಯೋಗವು ವ್ಯಕ್ತಿ ಸಂಬಂಧಗಳಲ್ಲಿ ಮತ್ತು ಸಾಮಾಜಿಕ ಸಂಬಂಧಗಳಲ್ಲಿ ಅಂತರವನ್ನು ಸೃಷ್ಟಿಸುತ್ತದೆ.
- 
- 

*ಪರಂಪರಾಗತ ಮಾಧ್ಯಮಗಳ ಮತ್ತು ನವಮಾಧ್ಯಮಗಳ ವಿಶೇಷತೆಗಳನ್ನು ಸೂಚಿಸುವ ಕೊಲಾಶ್ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.*

## ಸಾಮಾಜಿಕ ಬದುಕಿನಲ್ಲಿ ಮಾಧ್ಯಮಗಳ ಪ್ರಭಾವ

ಪರಂಪರಾಗತ ಮಾಧ್ಯಮಗಳು ಮತ್ತು ನವಮಾಧ್ಯಮಗಳು ಆಧುನಿಕ ಸಮಾಜದ ಅವಿಭಾಜ್ಯ ಘಟಕಗಳಾಗಿ ಬದಲಾಗಿವೆ. ವಿವಿಧ ಮಾಧ್ಯಮ ರೂಪಗಳು ನಮ್ಮ ಸಾಮಾಜಿಕ ಬದುಕಿನ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂದು ಪರಿಶೀಲಿಸುವ.

### 1. ಮಾಧ್ಯಮಗಳು ಮತ್ತು ಸಮಾಜೀಕರಣ (Media & Socialisation)

ನಿಮಗೆ ಇಷ್ಟವಾದ ಶಿಶು ಸಾಹಿತ್ಯ ಸಂಚಿಕೆ ಯಾವುದು?

ಆದರಿಂದ ನಿಮಗೆ ಲಭಿಸಿದ ತಿಳುವಳಿಕೆಗಳು ಯಾವುವು?

- ಕತೆಗಳು
- ಮೌಲ್ಯಗಳು
- ನೀತಿಗಳು
- 
- 
- 

ಕತೆಗಳ ಮತ್ತು ಕವಿತೆಗಳ ಮೂಲಕ ಸಾಮಾಜಿಕ ರೂಢಿಗಳು, ನೀತಿಗಳು, ವಿಜ್ಞಾನ, ಮನೋರಂಜನೆ ಇತ್ಯಾದಿಗಳು ಲಭಿಸುವುದಿಲ್ಲವೇ. ಸಮಾಜದಲ್ಲಿ ಹೇಗೆ ಜೀವಿಸಬೇಕೆಂದು, ಇತರರೊಡನೆ ಹೇಗೆ ವರ್ತಿಸಬೇಕೆಂದು ಚಿಕ್ಕಂದಿನಿಂದಲೇ ನಮ್ಮ ಸುತ್ತಮುತ್ತಲಿನ ಪರಿಸರದಿಂದ ಕಲಿಯುವ ಪ್ರಕ್ರಿಯೆಯೇ ಸಮಾಜೀಕರಣ (Socialisation). ಉದಾಹರಣೆಗೆ, ಹಿರಿಯರನ್ನು ಗೌರವಿಸಬೇಕೆನ್ನುವ ಮೌಲ್ಯವನ್ನು ನಾವು ಚಿಕ್ಕಂದಿನಿಂದಲೇ ಹೆತ್ತವರಿಂದ ತಿಳಿದುಕೊಂಡದ್ದಾಗಿದೆ.

ಕುಟುಂಬ, ವಿದ್ಯಾಲಯ, ಸಹಪಾಠಿಗಳು, ಮಾಧ್ಯಮಗಳು ಮೊದಲಾದವು ಸಮಾಜೀಕರಣ ಪ್ರಕ್ರಿಯೆಗೆ ಸಹಾಯ ಮಾಡುತ್ತವೆ. ನಾವು ಸಮಾಜದಲ್ಲಿ ಹೇಗೆ ಬೆರೆಯಬೇಕೆಂದು, ಏನನ್ನು ಬಯಸಬೇಕೆಂದು ತೀರ್ಮಾನಿಸುವುದರಲ್ಲಿ ಮತ್ತು ವ್ಯಕ್ತಿತ್ವ ರೂಪೀಕರಣದಲ್ಲಿ ಮಾಧ್ಯಮಗಳ ಪ್ರಭಾವವಿದೆ. ಒಂದು ತಲೆಮಾರಿನಿಂದ ಮುಂದಿನ ತಲೆಮಾರಿಗೆ ಹಸ್ತಾಂತರವಾಗುವ ಸಾಮಾಜಿಕ ಮೌಲ್ಯಗಳು, ರೂಢಿಗಳು ಮೊದಲಾದವು ಮಾಧ್ಯಮಗಳ ಮೂಲಕವೂ ವಿನಿಮಯವಾಗುತ್ತವೆ.

*ಕ್ರೈಟ್ ವಿಕ್ಟರ್ಸ್ ವಿದ್ಯಾಭ್ಯಾಸ ಚಾನೆಲ್‌ನ ಕಾರ್ಯಕ್ರಮಗಳು ನಿಮ್ಮ ಸ್ವಭಾವ ರೂಪೀಕರಣದಲ್ಲೂ ಸಾಮಾಜಿಕ ಜ್ಞಾನ ನಿರ್ಮಾಣದಲ್ಲೂ ಹೇಗೆ ಬೆಂಬಲ ನೀಡುತ್ತಿವೆ ಎಂದು ಕಂಡುಕೊಂಡು ನಿರೀಕ್ಷಣ ಟಿಪ್ಪಣಿ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.*

## 2. ಮಾಧ್ಯಮಗಳು ಮತ್ತು ಸಾರ್ವಜನಿಕ ಅಭಿಪ್ರಾಯ ರೂಪೀಕರಣ (Media & Public opinion Formation)



**ಕೇರಳ ಕಾನೂನು ಸುಧಾರಣಾ ಸಮಿತಿ ಸಲಹೆಗಳು ಮತ್ತು ಅಭಿಪ್ರಾಯಗಳನ್ನು ಆಹ್ವಾನಿಸಿದೆ**

ಕೇರಳ ಲೋಕಸೇವಾ ಆಯೋಗವು ಉದ್ಯೋಗಾರ್ಥಿಗಳ ರ್ಯಾಂಕ್ ಲಿಸ್ಟ್ ತಯಾರಿಸುವುದನ್ನು ಸಮಗ್ರವಾಗಿ ಅಧ್ಯಯನ ಮಾಡಿ ವರದಿ ಸಮರ್ಪಿಸಲು ಕೇರಳ ಕಾನೂನು ಸುಧಾರಣಾ ಸಮಿತಿಗೆ ಸರಕಾರ ಜವಾಬ್ದಾರಿ ನೀಡಿದ ಹಿನ್ನೆಲೆಯಲ್ಲಿ ಈ ವಿಷಯಕ್ಕೆ ಸಂಬಂಧಿಸಿ ಸಾರ್ವಜನಿಕರಿಂದ ಸಲಹೆಗಳನ್ನು ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿದೆ. 2022 ಸೆಪ್ಟೆಂಬರ್ ಒಂದರಂದು ಬೆಳಿಗ್ಗೆ 10.30 ಕ್ಕೆ ತಿರುವನಂತಪುರದ ತೈಕಾಡ್ ಗವರ್ಮೆಂಟ್ ಗೆಸ್ಟ್ ಹೌಸ್ ಕಾನ್ಫರೆನ್ಸ್ ಹಾಲ್‌ನಲ್ಲಿ ಸಾರ್ವಜನಿಕ ಅಭಿಪ್ರಾಯ ಸಂಗ್ರಹವು ನಡೆಯಲಿದೆ. ಈ ವಿಷಯಕ್ಕೆ ಸಂಬಂಧಿಸಿ ಎಲ್ಲರೂ ಆ ದಿವಸ ಹಿಯರಿಂಗ್‌ನಲ್ಲಿ ಭಾಗವಹಿಸಿ ನಿರ್ದೇಶಗಳನ್ನು ಮತ್ತು ಅಭಿಪ್ರಾಯಗಳನ್ನು ನೇರವಾಗಿ ಅಥವಾ ಅಂಚೆಯ ಮೂಲಕ ಸೆಕ್ರೆಟರಿ, ಕೇರಳ ಕಾನೂನು ಸುಧಾರಣಾ ಸಮಿತಿ, ಟಿ.ಸಿ. ನಂಬರ್ 25/2450, 3 ನೇ ಮಹಡಿ, ಸಿ.ಎಸ್.ಐ ಬಿಲ್ಡಿಂಗ್, ಪುತ್ತನ್ ಚಂದ, ತಿರುವನಂತಪುರ 695001 ಎಂಬ ಕಚೇರಿ ವಿಳಾಸಕ್ಕೆ ಸಮರ್ಪಿಸಬಹುದು..

ಪತ್ರಿಕಾ ವಾರ್ತೆಯನ್ನು ಓದಿದ್ದಿರಲ್ಲವೇ. ಪ್ರಜಾಪ್ರಭುತ್ವ ರೀತಿಯಲ್ಲಿ ಸರಕಾರವು ಹೊಸ ನೀತಿಗಳನ್ನು ರೂಪಿಸುವುದಕ್ಕೆ ಮೊದಲು ಸಾರ್ವಜನಿಕರ ಅಭಿಪ್ರಾಯಗಳನ್ನು ಪರಿಗಣಿಸುತ್ತದೆ. ವಿವಿಧ ಮಾಧ್ಯಮಗಳ ಮೂಲಕ ಸಾರ್ವಜನಿಕರಲ್ಲಿ ಸಲಹೆಗಳನ್ನು ಸಮರ್ಪಿಸಲು ಕೇಳಿಕೊಳ್ಳುತ್ತದೆ.



*ಚಿತ್ರ 7.9* • ಅಭಿಪ್ರಾಯ ಸಂಗ್ರಹ

ಚುನಾವಣೆಯ ಸಂದರ್ಭಗಳಲ್ಲಿ ಮತ್ತು ಅಂತಾರಾಷ್ಟ್ರೀಯ ನೀತಿಯನ್ನು ರೂಪಿಸುವ ಸಂದರ್ಭದಲ್ಲಿ ಮಾಧ್ಯಮಗಳ ಮೂಲಕ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲಾಗುತ್ತದೆ. ಈ ರೀತಿಯಲ್ಲಿ ಜನರ ಅಭಿಪ್ರಾಯ ರೂಪೀಕರಣದಲ್ಲಿ ಹಾಗೂ ಜನರ ಒಪ್ಪಿಗೆ ಗಳಿಸುವುದರಲ್ಲಿ ಮಾಧ್ಯಮಗಳು ಪ್ರಧಾನ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತವೆ.

ಕೆಲವು ಮಾಧ್ಯಮಗಳಲ್ಲಿ ಬರುವ ಕಾರ್ಯಕ್ರಮಗಳು ಪಕ್ಷಪಾತದಿಂದ ಮತ್ತು ವೈರುಧ್ಯದಿಂದ ಕೂಡಿರುತ್ತದೆ. ಸ್ಪಷ್ಟತೆ ಮತ್ತು ವ್ಯಕ್ತತೆ ಇಲ್ಲದ ಆಶಯಗಳನ್ನು ನವ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವುದನ್ನು ಗಮನಿಸಿರಬಹುದಲ್ಲವೇ. ಸಾಮಾಜಿಕ ಮಾಧ್ಯಮಗಳ ಬೆಳವಣಿಗೆಯು ಈ ಒಲವುಗಳಿಗೆ ಉತ್ತೇಜನ ನೀಡುವುದಿದೆ. ಕೋವಿಡ್ -19 ವ್ಯಾಪನ ಸಮಯದಲ್ಲಿ ಅದಕ್ಕೆ ಸಂಬಂಧಿಸಿದ ಚಿಕಿತ್ಸಾ ರೀತಿಗಳು, ವೈರಸ್ ಸಂಬಂಧವಾದ ಕಟ್ಟುಕತೆಗಳು ಮೊದಲಾದುವು ಕೆಲವು ಸಾಮಾಜಿಕ

### ಮಾಹಿತಿ ತಂತ್ರಜ್ಞಾನ ನಿಯಮ 2000 (IT Act 2000)

*ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಅಥವಾ ಅವುಗಳನ್ನು ಗುರಿಯಾಗಿರಿಸಿ ನಡೆಸುವ ಅಪರಾಧ ಕೃತ್ಯಗಳೇ ಸೈಬರ್ ಅಪರಾಧಗಳು. ಕಂಪ್ಯೂಟರ್, ಮೊಬೈಲ್ ಫೋನ್, ಡಿಜಿಟಲ್ ಕ್ಯಾಮೆರಾ ಮೊದಲಾದವು ಇದರ ಉಪಕರಣಗಳಾಗಿವೆ. ಸೈಬರ್ ಅಪರಾಧಗಳಲ್ಲಿ ಏರ್ಪಡುವವರಿಗೆ ಕಠಿಣ ಕಾನೂನು ಕ್ರಮಗಳನ್ನು ಮತ್ತು ಶಿಕ್ಷೆಯನ್ನು ಖಾತರಿಪಡಿಸಲು ಪಾರ್ಲಿಮೆಂಟ್ ಅಂಗೀಕರಿಸಿದ ನಿಯಮವೇ ಮಾಹಿತಿ ತಂತ್ರಜ್ಞಾನ ನಿಯಮ 2000.*

ಮಾಧ್ಯಮಗಳಲ್ಲಿ ಪ್ರಚಾರವಾದುದು ಇದಕ್ಕೆ ಉದಾಹರಣೆಯಾಗಿದೆ. ಇದು ತಪ್ಪಾದ ಸಾರ್ವಜನಿಕ ಅಭಿಪ್ರಾಯ ರೂಪೀಕರಣಕ್ಕೆ ಕಾರಣವಾಗುತ್ತದೆ. ಇಂತಹ ತಪ್ಪಾದ ವಾರ್ತೆಗಳನ್ನು ಸೃಷ್ಟಿಸಿ ಪ್ರಚಾರ ಮಾಡುವುದು ಮಾಹಿತಿ ತಂತ್ರಜ್ಞಾನ ನಿಯಮ (IT Act 2000) ಪ್ರಕಾರ ಶಿಕ್ಷಾರ್ಹವಾಗಿದೆ.

*ಮಾಧ್ಯಮಗಳಲ್ಲಿ ಬರುವ ತಪ್ಪಾದ ತಿಳುವಳಿಕೆಗಳು ಮತ್ತು ಮಾಹಿತಿಗಳನ್ನು ತಿಳಿದುಕೊಳ್ಳಲು ಏನೇನು ಮಾಡಲು ಸಾಧ್ಯವೆಂದು ತರಗತಿಯಲ್ಲಿ ಚರ್ಚಿಸಿ ಚಾರ್ಟ್ ನಲ್ಲಿ ದಾಖಲಿಸಿರಿ.*

ಸಾಮಾಜಿಕ, ರಾಜಕೀಯ ಅಥವಾ ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸಾರ್ವಜನಿಕರಿಗೆ ತಲುಪಿಸಲು ಸಾಮಾಜಿಕ ಮಾಧ್ಯಮಗಳು, ವೆಬ್ ಸೈಟ್ ಗಳು, ಆನ್ಲೈನ್ ಅಭಿಯಾನಗಳು ಮೊದಲಾದ ಡಿಜಿಟಲ್ ಮಧ್ಯವರ್ತಿಗಳನ್ನು ಬಳಸಲಾಗುತ್ತದೆ. ಈ ರೀತಿಯಲ್ಲಿರುವ ಚಟುವಟಿಕೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚುತ್ತಿರುವುದನ್ನು ಗಮನಿಸಿದ್ದೀರಾ? ನೀವು ಅದರಲ್ಲಿ ಸಹಭಾಗಿಗಳಾಗಿರುವಿರಾ?

ಸಾಮಾಜಿಕ ಮಾಧ್ಯಮಗಳ ವೇದಿಕೆಗಳು ಆಶಯ ವಿನಿಮಯಕ್ಕೆ ಮತ್ತು ತುರ್ತಾದ ಸಂಪನ್ಮೂಲ ಸಂಗ್ರಹಕ್ಕೆ ಬೇಕಾದ ದಾರಿಗಳನ್ನು ಸಾಧ್ಯವಾಗಿಸುವುದರ ಮೂಲಕ ಸಾರ್ವಜನಿಕ ಸಹಭಾಗಿತ್ವಕ್ಕೆ ಉತ್ತೇಜನವನ್ನು ನೀಡುತ್ತದೆ. ಸಾಮಾಜಿಕ ಮಾಧ್ಯಮಗಳ ವಿವಿಧ ಹಾಷ್ ಟಾಗ್ (#) ಅಭಿಯಾನಗಳು, ಜಾಗೃತಿ ಮೂಡಿಸುವ ಕಾರ್ಯಕ್ರಮಗಳು, ಹಣಸಂಗ್ರಹ ಇತ್ಯಾದಿಗಳು ಕೆಲವು ಉದಾಹರಣೆಗಳಾಗಿವೆ.

## 3. ಮಾಧ್ಯಮ ಮತ್ತು ಗ್ರಾಹಕ ಸ್ವಭಾವ (Media and Consuming Behaviour)




ಚಿತ್ರ 7.10

ಚಿತ್ರದಲ್ಲಿರುವ ಜಾಹೀರಾತುಗಳು ಸಾರ್ವಜನಿಕರನ್ನು ಆಕರ್ಷಿಸಲಿರುವ ಕಾರಣಗಳು ಯಾವುವು?

- 
- 

ನಿಮ್ಮ ಆಹಾರಭ್ಯಾಸದ ಮೇಲೆ ಮಾಧ್ಯಮಗಳು ಪ್ರಭಾವ ಬೀರಿವೆಯೇ?

ಮಾಧ್ಯಮಗಳು ಆಹಾರ ವಸ್ತುಗಳ ಜಾಹೀರಾತು ಮತ್ತು ಆಹಾರ ತಯಾರಿ ಕಾರ್ಯಕ್ರಮಗಳ ಖಜಾನೆಯಾಗಿದೆ. ಈ ರೀತಿಯಲ್ಲಿ ಹಲವು ಕ್ಷೇತ್ರಗಳಿಗೆ ಸಂಬಂಧಿಸಿದ ಜಾಹೀರಾತುಗಳನ್ನು ಮಾಧ್ಯಮಗಳಲ್ಲಿ ಕಾಣಬಹುದು. ಈ ರೀತಿಯಲ್ಲಿ ಜಾಹೀರಾತುಗಳನ್ನು ನೀಡುವುದರ ಮೂಲಕ,ಉದ್ಯೋಗ ಅವಕಾಶಗಳನ್ನು ತಿಳಿಯುವುದರ ಮೂಲಕ, ಬಳಕೆದಾರರು ಹೆಚ್ಚುವುದರ ಮೂಲಕ, ಜಾಗತಿಕ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಗೆ ಮಾಧ್ಯಮಗಳು ಉತ್ತೇಜನ ನೀಡುತ್ತವೆ. ಮಾಧ್ಯಮಗಳ ಮೂಲಕ ಇರುವ ಜಾಹೀರಾತುಗಳು ಮತ್ತು ಇತರ ಕಾರ್ಯಕ್ರಮಗಳು ನಮ್ಮ ಗ್ರಾಹಕ ಸ್ವಭಾವವನ್ನು ರೂಪಿಸುವಲ್ಲಿ ಪ್ರಭಾವ ಬೀರುತ್ತದೆ.

*ಪತ್ರಿಕೆಗಳಲ್ಲಿ ಮತ್ತು ಮಾಸಿಕಗಳಲ್ಲಿ ಬಂದಿರುವ ಆಹಾರಕ್ಕೆ ಸಂಬಂಧಿಸಿದ ಜಾಹೀರಾತುಗಳ ಚಿತ್ರಗಳನ್ನು ಸಂಗ್ರಹಿಸಿರಿ. ಅವು ನಿಮ್ಮ ಆರೋಗ್ಯಕರ ಆಹಾರ ಕ್ರಮದಲ್ಲಿ ಯಾವ ರೀತಿಯ ಬದಲಾವಣೆಗಳನ್ನು ತಂದಿವೆ ಎಂದು ಚರ್ಚಿಸಿ ವಾರ್ತಾ ಕೊಲಾಶ್ ತಯಾರಿಸಿರಿ.*

## 4. ಮಾಧ್ಯಮಗಳು ಮತ್ತು ಸಿದ್ಧ ಮಾದರಿಗಳು (Media and Stereotypes)

ಸಮಾಜದ ಕೆಲವು ಕಡೆಗಳಲ್ಲಿ ಈಗಲೂ ನೆಲೆ ನಿಂತಿರುವ ಮನೋಭಾವಗಳು ಮತ್ತು ವಿಶ್ವಾಸಗಳಿಗೆ ಸಂಬಂಧಿಸಿದ ಪೂರ್ವಾಗ್ರಹಗಳನ್ನು ಗಮನಿಸಿರಿ.




ಯಾವ ಯಾವ ಪೂರ್ವಾಗ್ರಹಗಳನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

- 
- 
- 
- 
- 

ವಾಸ್ತವವಾಗಿ ಇವು ಸರಿಯೇ?

ಸಾಮಾನ್ಯೀಕರಿಸಿದ ಪೂರ್ವಾಗ್ರಹಗಳಿಂದ ಕೂಡಿದ ಹೇಳಿಕೆಗಳೇ ಸಿದ್ಧ ಮಾದರಿಗಳು (Stereotypes). ವರ್ಗ, ಲಿಂಗ, ಪದವಿ, ಸಂಸ್ಕೃತಿ, ಬಣ್ಣ ಮೊದಲಾದವುಗಳ ಆಧಾರದಲ್ಲಿ ವ್ಯಕ್ತಿಗಳ ಕುರಿತಾದ ಸರಳವಾದ ಸಾಮಾನ್ಯೀಕರಿಸಿದ ವಿಶ್ವಾಸ ಅಥವಾ ಆಶಯಗಳೇ ಸಿದ್ಧ ಮಾದರಿಗಳು.

ಇಂತಹ ಸಿದ್ಧ ಮಾದರಿಗಳು ಮಾಧ್ಯಮಗಳಲ್ಲಿ ವಿವಿಧ ರೂಪದಲ್ಲಿ ಪ್ರತಿಫಲಿಸುವುದನ್ನು ನೀವು ಗಮನಿಸಿರುವಿರಾ?

ಇವು ಯಾವ ಯಾವ ಮಾಧ್ಯಮ ಕಾರ್ಯಕ್ರಮಗಳಲ್ಲಿ ಪ್ರತಿಫಲಿಸುತ್ತವೆ?

- ಧಾರವಾಹಿಗಳು
- ಜಾಹೀರಾತುಗಳು
- ಚಲನಚಿತ್ರ
- 
- 
- 

ವಿವಿಧ ರೂಪದಲ್ಲಿರುವ ಮಾಧ್ಯಮಗಳಾದ ಚಲನಚಿತ್ರ, ವಾರ್ತೆಗಳು, ಸಾಮಾಜಿಕ ಮಾಧ್ಯಮಗಳು ಇತ್ಯಾದಿ ಸಾಮಾಜಿಕ ಮನೋಭಾವಗಳನ್ನು ರೂಪೀಕರಿಸಿ ಪ್ರತಿಫಲಿಸುವಂತೆ ಮಾಡುತ್ತವೆ. ಮಾಧ್ಯಮಗಳು ಸಾರ್ವಜನಿಕರ ದೃಷ್ಟಿಕೋನದ ಮೇಲೆ ಪ್ರಭಾವ ಬೀರಿ ಸಾಮಾಜಿಕ ರೂಢಿಗಳನ್ನು ಬಲಪಡಿಸುತ್ತವೆ. ಇದರ ಮೂಲಕ ಸಿದ್ಧ ಮಾದರಿಗಳನ್ನು ರೂಪಿಸುವುದರಲ್ಲಿಯೂ ಕಾಪಾಡುವುದರಲ್ಲಿಯೂ ಇವು ಪ್ರಧಾನ ಪಾತ್ರವಹಿಸುತ್ತವೆ.

*ವಿವಿಧ ಮಾಧ್ಯಮ ಕಾರ್ಯಕ್ರಮಗಳನ್ನು ನಿರೀಕ್ಷಿಸಿ, ಸಿದ್ಧ ಮಾದರಿಗಳನ್ನು ರೂಪೀಕರಿಸುವುದರಲ್ಲಿ ಮತ್ತು ಕಾಪಾಡುವುದರಲ್ಲಿ ಮಾಧ್ಯಮಗಳ ಪಾತ್ರವನ್ನು ವ್ಯಕ್ತಪಡಿಸುವ ಡಿಜಿಟಲ್ ಆಲ್ಬಮ್/ ಡಿಜಿಟಲ್ ಕೊಲಾಶ್ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.*

## 5. ಮಾಧ್ಯಮ ಮತ್ತು ಸಾಮಾಜಿಕ ಸಹಭಾಗಿತ್ವ
**(Media and Social Interventions)**




| | |
|---|---|
| #ನಮ್ಮ ಗ್ರಾಮವನ್ನು ರಕ್ಷಿಸಿರಿ | #ಸುಸ್ಥಿರ ಭವಿಷ್ಯ |
| #ಸಾಮಾಜಿಕ ನೀತಿಗಾಗಿ | #ತಾರತಮ್ಯಕ್ಕೆದುರಾಗಿ |

ವಾರ್ತಾ ಶಿರೋನಾಮೆಗಳು ಮತ್ತು ಹಾಷ್‌ಟಾಗ್ ಮಾತುಗಳನ್ನು ಗಮನಿಸಿರಿ.

ಯಾವ ಯಾವ ಸಾಮಾಜಿಕ ಸಮಸ್ಯೆಗಳು ಇದರಲ್ಲಿ ಪ್ರತಿಫಲಿಸುತ್ತವೆ?

- 
- 
- 
- 
- 
- 

ವಿವಿಧ ಸಾಮಾಜಿಕ ಸಮಸ್ಯೆಗಳನ್ನು ಸಾರ್ವಜನಿಕರಿಗೆ ತಲುಪಿಸಿ ಅವುಗಳನ್ನು ಪರಿಹರಿಸಲಿರುವ ಕ್ರಮಗಳನ್ನು ವಿವಿಧ ಹಂತಗಳ ಮೂಲಕ ಶೀಘ್ರಗೊಳಿಸಲು ಮಾಧ್ಯಮಗಳು ಪ್ರಯತ್ನಿಸುತ್ತವೆಯೆಂದು ಇದರ ಮೂಲಕ ತಿಳಿಯಬಹುದು.

*ನಿಮ್ಮ ಪ್ರದೇಶದಲ್ಲಿರುವ ಯಾವುದಾದರೂ ಒಂದು ಸಾಮಾಜಿಕ ಸಮಸ್ಯೆಯ ಕುರಿತು ವಾರ್ತೆ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ. ಆ ಸಮಸ್ಯೆಯನ್ನು ಪರಿಹರಿಸಲಿರುವ ವಿವಿಧ ಮಾರ್ಗೋಪಾಯಗಳ ಕುರಿತು ತರಗತಿಯಲ್ಲಿ ಚರ್ಚಿಸಿರಿ.*

## ಮಾಧ್ಯಮಗಳು ಮತ್ತು ತಂತ್ರಜ್ಞಾನ (Media & Technology)

ವಾರ್ತೆಯನ್ನು ಓದಿರಿ.

### ಜಾಹೀರಾತು ಮಾದರಿಯನ್ನು ಬದಲಾಯಿಸಿದ ಸರಕಾರ




*ಚಿತ್ರ 7.11*

ಕೊಚ್ಚಿ: ಇವು ಕೊಚ್ಚಿಯಲ್ಲಿ ನಡೆದ ಅಂತಾರಾಷ್ಟ್ರೀಯ ಜೆನ್ ಎ.ಐ. ಶೃಂಗಸಭೆಗೆ ಬೇಕಾಗಿ ಸ್ಥಾಪಿಸಿದ ಜಾಹೀರಾತುಗಳಾಗಿವೆ. ಕೃತಕ ಬುದ್ಧಿಮತ್ತೆಯ (ಎ.ಐ) ಸಹಾಯದೊಂದಿಗೆ ಈ ಜಾಹೀರಾತು ಮಾದರಿಗಳನ್ನು ತಯಾರಿಸಲಾಗಿದೆ. ನಾಲ್ಕು ಮಾದರಿಗಳಲ್ಲಿ ಉಷ ಅಕ್ಕ ಟೈಲರ್, ಜೋಸ್ ಅಣ್ಣ ಸರಕಾರಿ ಸೇವೆ ಅಗತ್ಯವಿರುವ ಒಬ್ಬ ಸಾಮಾನ್ಯ ವ್ಯಕ್ತಿ, ರಾಮನ್ ಕುಟ್ಟಿ ಕೃಷಿಕ, ಮಿನಿಮೋಳ್ ಉದ್ಯಮಿ. ಕೃಷಿಕರನ್ನು ಮತ್ತು ಉದ್ಯಮಿಗಳನ್ನು ಒಂದೇ ರೀತಿಯಲ್ಲಿ ಜೊತೆ ಸೇರಿಸಿದ ಈ ಜಾಹೀರಾತಿನ ಮಾದರಿಗಳು ಕೃತಕ ಬುದ್ಧಿಮತ್ತೆಯಿಂದ ನಿರ್ಮಿತವಾಗಿವೆ..

ಕೃತಕ ಬುದ್ಧಿಮತ್ತೆ ಎಂಬ ಆಧುನಿಕ ತಂತ್ರಜ್ಞಾನದ ಉಗಮವು ಯಾವ ರೀತಿಯ ಬದಲಾವಣೆಗಳನ್ನು ಸಮಾಜದಲ್ಲಿ ಸೃಷ್ಟಿಸಿದೆ?

ಮಾಧ್ಯಮಗಳ ಪ್ರಗತಿಯನ್ನು ಸೂಚಿಸುವ ಭಿತ್ತಿಪತ್ರವನ್ನು ತಯಾರಿಸಿದ್ದೀರಲ್ಲವೇ. ಅದರಿಂದ ಮಾಧ್ಯಮದ ಬೆಳವಣಿಗೆಗೆ ತಂತ್ರಜ್ಞಾನ ಉತ್ತೇಜನ ನೀಡಿದ್ದನ್ನು ನೀವು ಗಮನಿಸಿದ್ದೀರಲ್ಲವೇ. ತಂತ್ರಜ್ಞಾನ ಮತ್ತು ಮಾಧ್ಯಮಗಳು ಪರಸ್ಪರ ಸಂಬಂಧ ಹೊಂದಿವೆ. ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಯು ಹೊಸ ಮಾಧ್ಯಮರೂಪಗಳು ಉಂಟಾಗುವುದಕ್ಕೆ ಕಾರಣವಾಯಿತು. ಈ ಕ್ಷೇತ್ರದ ಅಭಿವೃದ್ಧಿಯು ಸಾಮಾಜಿಕ ಮಾಧ್ಯಮ ವೇದಿಕೆಗಳು, ಆನ್ಲೈನ್ ವಾರ್ತಾ ಪೋರ್ಟಲ್ ಗಳು, ಸ್ಟ್ರೀಮಿಂಗ್ ಸೇವೆಗಳು ಮೊದಲಾದ ನವಮಾಧ್ಯಮಗಳು ರೂಪುಗೊಳ್ಳಲು ಕಾರಣವಾಯಿತು. ಇದು ಮಾಹಿತಿ ವಿನಿಮಯ ಕ್ಷೇತ್ರದ ನಿರ್ಮಾಣ, ವಿತರಣೆ, ಬಳಕೆ ಇತ್ಯಾದಿಗಳಲ್ಲಿ ದೊಡ್ಡ ಬದಲಾವಣೆಗಳಿಗೆ ಕಾರಣವಾಯಿತು.

ತಂತ್ರಜ್ಞಾನವು ಮಾಧ್ಯಮಗಳ ಲಭ್ಯತೆಯನ್ನು ಹೆಚ್ಚಿಸುತ್ತದೆ. ಯಾವಾಗ, ಎಲ್ಲಿ ಬೇಕಾದರೂ ವಿಷಯಕ್ಕೆ ಸಂಬಂಧಿಸಿ ವ್ಯವಹರಿಸುವ ಸಂದರ್ಭವನ್ನು ಸೃಷ್ಟಿಸಿ ಜಾಗತಿಕ ಆಶಯ ವಿನಿಮಯ ಹೆಚ್ಚಿಸುತ್ತದೆ. ಕೃತಕ ಬುದ್ಧಿಮತ್ತೆ,

ಬಿಗ್ ಡಾಟಾ, ಅಲ್‌ಗೋರಿತಗಳಂತಹ ತಂತ್ರಜ್ಞಾನದ ನವೀಕರಣಗಳು ನಮ್ಮ ವೈಯಕ್ತಿಕ ಹಾಗೂ ಸಾಮಾಜಿಕವಾದ ವಿಕಾಸಕ್ಕೆ ಕಾರಣವಾಗುತ್ತದೆ.

### ಕೃತಕ ಬುದ್ಧಿಮತ್ತೆ *(Artificial Intelligence)*

ಮನುಷ್ಯರಂತೆ ಚಿಂತನೆ ನಡೆಸಲು ಮತ್ತು ತೀರ್ಮಾನ ಕೈಗೊಳ್ಳಲು ಯಂತ್ರಗಳನ್ನು ಸಜ್ಜುಗೊಳಿಸುವುದೇ ಕೃತಕ ಬುದ್ಧಿಮತ್ತೆ. ಇದು ಕಂಪ್ಯೂಟರ್ ವ್ಯವಸ್ಥೆಗಳ ಮೂಲಕ ಮನುಷ್ಯ ಬುದ್ಧಿಯ ಅನುಕರಣೆಯನ್ನು ಸೂಚಿಸುತ್ತದೆ. ಕಲಿಕೆ, ತೀರ್ಮಾನ ತೆಗೆದುಕೊಳ್ಳುವಿಕೆ, ಸಮಸ್ಯೆಯ ಪರಿಹಾರ ಮೊದಲಾದ ಕೆಲಸಗಳನ್ನು ಮಾಡಲು ಇದು ಸಹಾಯ ಮಾಡುತ್ತದೆ.

### ಬಿಗ್ ಡಾಟಾ *(Big Data)*

ಬಿಗ್ ಡಾಟಾ ಎನ್ನುವುದು ಅತ್ಯಂತ ಸಂಕೀರ್ಣವಾದ ಪರಂಪರಾಗತ ಡಾಟಾ ಪ್ರೊಸೆಸಿಂಗ್ ಸಾಫ್ಟ್‌ವೇರಿಗೆ ನಿಭಾಯಿಸಲಾಗದ ದೊಡ್ಡ ಡಾಟಾ ಸೆಟ್ಟುಗಳನ್ನು ಸೂಚಿಸುತ್ತದೆ.

### ಅಲ್‌ಗೋರಿತಂಗಳು *(Algorithms)*

ಅಲ್‌ಗೋರಿತಂಗಳು ಎನ್ನುವುದು ಒಂದು ಸಮಸ್ಯೆಯ ಪರಿಹಾರಕ್ಕಿರುವ ವಿವಿಧ ಹಂತಗಳ ಕ್ರಮಗಳು ಅಥವಾ ಫಾರ್ಮುಲಾಗಳು ಆಗಿವೆ. ಕೃತಕ ಬುದ್ಧಿಮತ್ತೆ, ಬಿಗ್ ಡಾಟಾ ಇತ್ಯಾದಿಗಳ ಹಿನ್ನೆಲೆಯಲ್ಲಿ ಡಾಟಾ ವಿಶ್ಲೇಷಣೆ ಮಾಡಲು, ಮಾದರಿಗಳನ್ನು ತಿಳಿದುಕೊಳ್ಳಲು, ಪ್ರವಚಿಸಲು ಅಲ್‌ಗೋರಿತಂಗಳನ್ನು ಉಪಯೋಗಿಸುವರು. ಉದಾಹರಣೆಗೆ, ಸರ್ಚ್ ಇಂಜಿನ್‌ಗಳು, ಮಿಷನ್ ಲರ್ನಿಂಗ್ ಮೋಡೆಲ್ ಗಳು ಇತ್ಯಾದಿಗಳು ಚಟುವಟಿಕೆಗಳಿಗೆ ಅಲ್‌ಗೋರಿತಂಗಳನ್ನು ಅವಲಂಬಿಸುತ್ತವೆ.

*'ಸಾಮಾಜಿಕ ಬದುಕಿನಲ್ಲಿ ಕೃತಕ ಬುದ್ಧಿಮತ್ತೆಯ ಪ್ರಭಾವ' ಎಂಬ ವಿಷಯದ ಕುರಿತು ವಿವಿಧ ಮಾಧ್ಯಮಗಳಿಂದ ಮಾಹಿತಿ ಸಂಗ್ರಹ ಮಾಡಿ ಅಧ್ಯಾಪಕರ ಸಹಾಯದೊಂದಿಗೆ ಡಿಜಿಟಲ್ ವರದಿ ತಯಾರಿಸಿರಿ.*

## ಡಿಜಿಟಲ್ ಶಿಷ್ಟಾಚಾರಗಳು (Digital Etiquette)



ಡಿಜಿಟಲ್ ಮಾಧ್ಯಮಗಳಲ್ಲಿ ಬರುವ ಸತ್ಯಕ್ಕೆ ದೂರವಾದ ಕೆಲವು ಮಾಹಿತಿಗಳ ಕುರಿತಾದ ವಾರ್ತೆಗಳನ್ನು ಇಲ್ಲಿ ನೀಡಲಾಗಿದೆ. ಡಿಜಿಟಲ್ ಮಾಧ್ಯಮಗಳ ಸಭ್ಯವಲ್ಲದ ಉಪಯೋಗವು ವಂಚನೆಗಳಿಗೂ ಮಾನಹಾನಿಗೂ ಅಪರಾಧಗಳಿಗೂ ಅಪಘಾತಗಳಿಗೂ ಸನ್ನಿವೇಶವನ್ನು ಸೃಷ್ಟಿಸುತ್ತದೆ. ನೀವು ಡಿಜಿಟಲ್ ವೇದಿಕೆಗಳನ್ನು ಉಪಯೋಗಿಸುತ್ತಿರುವವರಲ್ಲವೇ? ಅವುಗಳ ಉಪಯೋಗದಲ್ಲಿ ಗಮನಿಸಬೇಕಾದ ಕೆಲವು ವಿಚಾರಗಳು ಇರಬಹುದಲ್ಲವೇ?

> ಡಿಜಿಟಲ್ ವೇದಿಕೆಗಳಲ್ಲಿ ವ್ಯವಹರಿಸುವಾಗ ವ್ಯಕ್ತಿಗಳು ಪಾಲಿಸಬೇಕೆಂದು ನಿರೀಕ್ಷಿಸುವ ಸರಿಯಾದ, ಗೌರವಯುತವಾದ ವರ್ತನೆಗಳೇ ಡಿಜಿಟಲ್ ಶಿಷ್ಟಾಚಾರಗಳು (Digital Etiquette).

ಆಶಯ ವಿನಿಮಯಕ್ಕಿರುವ ಸಲಹೆ ಸೂಚನೆಗಳು ಡಿಜಿಟಲ್ ಶಿಷ್ಟಾಚಾರಗಳಲ್ಲಿ ಒಳಗೊಳ್ಳುತ್ತವೆ.ಅವು ಯಾವುವು? ಹೆಚ್ಚಿನ ಸಲಹೆಗಳನ್ನು ಸೇರಿಸುವಿರಲ್ಲವೇ?




ಡಿಜಿಟಲ್ ಶಿಷ್ಟಾಚಾರಗಳು ಗುಣಾತ್ಮಕವಾದ ಮತ್ತು ಫಲಪ್ರದವಾದ ಆನ್ಲೈನ್ ಸಂವಹನವನ್ನು ಪ್ರೋತ್ಸಾಹಿಸುತ್ತವೆ. ಇವುಗಳನ್ನು ಸಾಮಾಜಿಕ ರೂಢಿಗಳಾಗಿ ಅಂಗೀಕರಿಸಬೇಕು.

ಡಿಜಿಟಲ್ ಶಿಷ್ಟಾಚಾರಗಳನ್ನು ಅನುಸರಿಸುವುದರಿಂದ ನಮಗೆ ಏನೇನು ಪ್ರಯೋಜನೆಗಳಿವೆ?



- ❑ ಗೌರವಯುತವಾದ ಆಶಯ ವಿನಿಮಯ ಸಾಧ್ಯವಾಗುತ್ತದೆ.
- ❑ ಆಶಯ ವಿನಿಮಯದಲ್ಲಿ ವ್ಯಕ್ತತೆ ಮತ್ತು ತಿಳುವಳಿಕೆ ಲಭಿಸುತ್ತದೆ.
- ❑ ಗುಣಾತ್ಮಕವಾದ ಆನ್ಲೈನ್ ಕೂಟ ರೂಪುಗೊಳ್ಳುತ್ತವೆ.
- ❑ ಸೈಬರ್ ವಂಚನೆಗಳು ಕಡಿಮೆಯಾಗುತ್ತವೆ.
- ❑ ಸುರಕ್ಷಿತವಾದ ಡಿಜಿಟಲ್ ವೇದಿಕೆಯತ್ತ ಸಮಾಜವನ್ನು ಕೊಂಡೊಯ್ಯುತ್ತದೆ.
- ❑ ಡಿಜಿಟಲ್ ಸಾಕ್ಷರತೆಯನ್ನು ಬೆಂಬಲಿಸುತ್ತದೆ.

## ಮಾಧ್ಯಮ ಸಾಕ್ಷರತೆ ಮತ್ತು ಡಿಜಿಟಲ್ ಸಾಕ್ಷರತೆ
## *(Media Literacy & Digital Literacy)*

ವಿವಿಧ ಮಾಧ್ಯಮರೂಪಗಳ ಮೂಲಕ ಲಭಿಸುವ ಸಂದೇಶಗಳನ್ನು ಸ್ವೀಕರಿಸಲು, ವಿಶ್ಲೇಷಣೆ ಮಾಡಲು, ಮೌಲ್ಯನಿರ್ಣಯ ಮಾಡಲು, ಸೃಷ್ಟಿಸಲು ಹಾಗೂ ಆಶಯ ವಿನಿಮಯ ನಡೆಸಲು ಇರುವ ಸಾಮರ್ಥ್ಯವೇ ಮಾಧ್ಯಮ ಸಾಕ್ಷರತೆ.ಮಾಧ್ಯಮ ವಿಷಯವನ್ನು ಹೇಗೆ ನಿರ್ಮಿಸಬೇಕು, ಅದು ನಮ್ಮ ತಿಳುವಳಿಕೆಗಳನ್ನು ಹೇಗೆ ರೂಪುಗೊಳಿಸುತ್ತದೆ, ಸಂದೇಶಗಳನ್ನು ವಿಮರ್ಶಾತ್ಮಕವಾಗಿ ಹೇಗೆ ವ್ಯಾಖ್ಯಾನಿಸಬೇಕು ಇತ್ಯಾದಿಗಳು ಇದರಲ್ಲಿ ಒಳಗೊಳ್ಳುತ್ತವೆ.

ಡಿಜಿಟಲ್ ವೇದಿಕೆಗಳಲ್ಲಿ ಮಾಹಿತಿಗಳನ್ನು ಕಂಡುಕೊಳ್ಳುವುದು, ಮೌಲ್ಯ ನಿರ್ಣಯ ಮಾಡುವುದು, ಡಿಜಿಟಲ್ ಉಪಕರಣಗಳು ಮತ್ತು ತಂತ್ರಜ್ಞಾನಗಳನ್ನು ಫಲಪ್ರದವಾಗಿ ಬಳಸುವುದು ಇತ್ಯಾದಿ ಸಾಮರ್ಥ್ಯವೇ ಡಿಜಿಟಲ್ ಸಾಕ್ಷರತೆ. ಮೂಲಭೂತ ಕಂಪ್ಯೂಟರ್ ಜ್ಞಾನ, ಇಂಟರ್ನೆಟ್ ನ್ನು ಹೇಗೆ ಉಪಯೋಗಿಸಬೇಕೆಂದು ತಿಳಿದುಕೊಳ್ಳುವುದು, ಡಿಜಿಟಲ್ ವೇದಿಕೆಗಳ ಚಲನೆಯ ನಿಯಂತ್ರಣ *(Navigate)* ಮಾಡುವುದು, ಆನ್ಲೈನ್ ವಿಷಯಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯನಿರ್ಣಯ ಮಾಡುವುದು, ಸೈಬರ್ ಜಾಗೃತಿ ಮೊದಲಾದ ಸಾಮರ್ಥ್ಯಗಳು ಇದರಲ್ಲಿ ಒಳಗೊಳ್ಳುತ್ತವೆ.

ಡಿಜಿಟಲ್ ಶಿಷ್ಟಾಚಾರಗಳಿಗೆ ಸಂಬಂಧಿಸಿದ ಭಿತ್ತಿಪತ್ರ ತಯಾರಿಸಿ ಶಾಲೆಯಲ್ಲಿ ಪ್ರದರ್ಶಿಸಿರಿ.

ನಮ್ಮ ಆಶಯ ವಿನಿಮಯದಲ್ಲಿ, ಮಾಹಿತಿ ಲಭ್ಯತೆಯಲ್ಲಿ, ಪ್ರಪಂಚವನ್ನು ತಿಳಿದುಕೊಳ್ಳುವ ರೀತಿಯಲ್ಲಿ ಮಾಧ್ಯಮಗಳ ಪ್ರಭಾವ ಕಂಡುಬರುತ್ತದೆ. ಮಾಧ್ಯಮಗಳು ವ್ಯಕ್ತಿಗಳಿಗೂ ಸಮಾಜಕ್ಕೂ ಮಧ್ಯೆ ಇರುವ ಸಂವಹನದ ನಿರ್ಣಾಯಕ ಘಟಕವಾಗಿದೆ. ಸಾರ್ವಜನಿಕ ಅಭಿಪ್ರಾಯ ರೂಪೀಕರಣ, ಸಾಮಾಜಿಕ ವ್ಯವಹಾರ ರೂಪೀಕರಣ, ಸಾಮಾಜಿಕ ರೂಢಿಗಳ ರೂಪುಗೊಳ್ಳುವಿಕೆ ಇತ್ಯಾದಿಗಳಲ್ಲಿ ಮಾಧ್ಯಮಗಳ ಪ್ರಭಾವವನ್ನು ಕಾಣಬಹುದು. ತಂತ್ರಜ್ಞಾನದ ಪ್ರಗತಿಗನುಸರಿಸಿ ಪ್ರತ್ಯೇಕವಾಗಿ ಕೃತಕ ಬುದ್ಧಿಮತ್ತೆಯ ಆವಿರ್ಭಾವದೊಂದಿಗೆ ಮಾಧ್ಯಮಗಳ ಬೆಳವಣಿಗೆಯಲ್ಲಿ ಪ್ರಗತಿಯುಂಟಾಗುವುದರೊಂದಿಗೆ ಅವು ಸಾಮಾಜಿಕ ಬದಲಾವಣೆಯಲ್ಲೂ ಪ್ರತಿಫಲಿತವಾದುವು.

## ಮುಂದುವರಿದ ಚಟುವಟಿಕೆಗಳು

- 'ಮಾಧ್ಯಮ ಮತ್ತು ಸಾಮಾಜಿಕ ಜೀವನ' ಎಂಬ ವಿಷಯದಲ್ಲಿ ಒಂದು ಸೆಮಿನಾರ್ ಆಯೋಜಿಸಿರಿ.
- 'ಸಾರ್ವಜನಿಕ ಅಭಿಪ್ರಾಯ ರೂಪೀಕರಣದಲ್ಲಿ ನವ ಮಾಧ್ಯಮಗಳ ಪ್ರಭಾವ' ಎಂಬ ಶಿರೋನಾಮೆಯಲ್ಲಿ ಭಾಷಣ ತಯಾರಿಸಿರಿ.
- ಮಾಧ್ಯಮ ಕ್ಷೇತ್ರದಲ್ಲಿ ಕಾರ್ಯಾಚರಿಸುವ ಪರಿಣಿತರ ಪ್ಯಾನೆಲ್ ಚರ್ಚೆ ಆಯೋಜಿಸಿರಿ.
- ಆಕಾಶವಾಣಿ/ ದೂರದರ್ಶನ/ ದಿನಪತ್ರಿಕೆಗಳ ಕಚೇರಿಯನ್ನು ನೇರವಾಗಿ /ವರ್ಚುವಲ್ ರಿಯಾಲಿಟಿಯ - ಮೂಲಕ ಸಂದರ್ಶಿಸಿ ಅಲ್ಲಿನ ಚಟುವಟಿಕೆಗಳಿಗೆ ಸಂಬಂಧಿಸಿದ ನಿರೀಕ್ಷಣ ಟಿಪ್ಪಣಿ ತಯಾರಿಸಿರಿ.

# ಭಾರತದ ಸಂವಿಧಾನ

ಭಾಗ IV ಕ

## ಮೂಲಭೂತ ಕರ್ತವ್ಯಗಳು

51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ...ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು;

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು;

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು;

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು;

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು;

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು;

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು;

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು;

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು;

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

## ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

### ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ:**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000


*online **R.T.E Monitoring : www.nireekshana.org.in***